ಲಿಂಗ ತಾರತಮ್ಯ ವ್ಯವಸ್ಥೆಯಲ್ಲಿ ಸಮಾಜೀಕರಣದ ಪ್ರಕ್ರಿಯೆ ಮತ್ತು ಹದಿಹರೆಯದ ವಯಸ್ಸಿನ ಮೇಲೆ ಅದರ ಪರಿಣಾಮಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಪ್ರಕಾಶ್ ಭೀಮರಾಯ

ಮಾರ್ಗದರ್ಶಕರು

ಡಾ. ಎಚ್.ಎಸ್. ಶ್ರೀಮತಿ

ಮುಖ್ಯಸ್ಥರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೨

ಸಂಪೂರ್ಣ ಸಂ. ಕೆ. ಅಶಿವೆ. (2)

2

Sl no- 2

ಲಿಂಗ ತಾರತಮ್ಯ ವ್ಯವಸ್ಥೆಯಲ್ಲಿ ಸಮಾಜೀಕರಣದ ಪ್ರಕ್ರಿಯೆ ಮತ್ತು ಹದಿಹರೆಯದ ವಯಸ್ಸಿನ ಮೇಲೆ ಅದರ ಪರಿಣಾಮಗಳು

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ

ಸಂಶೋಧಕ

ಪ್ರಕಾಶ್ ಭೀಮರಾಯ

ಮಾರ್ಗದರ್ಶಕರು

ಡಾ. ಎಚ್.ಎಸ್. ಶ್ರೀಮತಿ

ಮುಖ್ಯಸ್ಥರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಮಹಿಳಾ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೨

ದೃಢೀಕರಣ ಪತ್ರ

'ಲಿಂಗ ತಾರತಮ್ಯ ವ್ಯವಸ್ಥೆಯಲ್ಲಿ ಸಮಾಜೀಕರಣದ ಪ್ರಕ್ರಿಯೆ ಮತ್ತು ಹದಿಹರೆಯದ ವಯಸ್ಸಿನ ಮೇಲೆ ಅದರ ಪರಿಣಾಮಗಳು' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಪ್ರಕಾಶ್ ಭೀಮರಾಯ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಈ ಸಂಪ್ರಬಂಧವನ್ನು ಅಥವಾ ಇದರ ಇತರೆ ಭಾಗಗಳನ್ನು ಯಾವುದೇ ಪದವಿಗೆ ಅವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15.5.2002

ಸ್ಥಳ : ವಿದ್ಯಾರಣ್ಯ

ಡಾ. ಎಚ್.ಎಸ್. ಶ್ರೀಮತಿ
ಮುಖ್ಯಸ್ಥರು ಹಾಗೂ ಮಾರ್ಗದರ್ಶಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಮಾಣ ಪತ್ರ

'ಲಿಂಗ ತಾರತಮ್ಯ ವ್ಯವಸ್ಥೆಯಲ್ಲಿ ಸಮಾಜೀಕರಣದ ಪ್ರಕ್ರಿಯೆ ಮತ್ತು ಹದಿಹರೆಯದ ವಯಸ್ಸಿನ ಮೇಲೆ ಅದರ ಪರಿಣಾಮಗಳು' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಮಹಿಳಾ ಅಧ್ಯಯನ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಯಲಕ್ಕೆ ಡಾ. ಎಸ್. ಎಚ್. ಶ್ರೀಮತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಸಂಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ: 15-2-2002

ಸ್ಥಳ : ವಿದ್ಯಾರಣ್ಯ

ಪ್ರಕಾಶ್ ಭೀಮರಾಯ
ಸಂಶೋಧನ ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ನೆನಕೆಗಳು

ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಎಂ.ಫಿಲ್ ಅಧ್ಯಯನಕ್ಕೆ ಅವಕಾಶ ದೊರಕಿಸಿ ಕೊಟ್ಟ ಹಿಂದಿನ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ ಪ್ರಥಮವಾಗಿ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆ ಇಂದಿನ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ ಅವರಿಗೆ, ಕುಲಸಚಿವರಾದ ಡಾ.ಕೆ.ವಿ. ನಾರಾಯಣ, ಅಧ್ಯಯನಾಂಗದ ನಿರ್ದೇಶಕರಾದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಅಧ್ಯಯನದ ರಚನೆಯಲ್ಲಿ ನನ್ನನ್ನು ಪ್ರೋತ್ಸಾಹಿಸಿ ಸೂಕ್ತ ಸಲಹೆ, ಸಹಕಾರ, ಪ್ರೇರಣೆಗಳನ್ನು ನೀಡಿ ಅತ್ಯಂತ ಆತ್ಮೀಯವಾಗಿ ಮಾರ್ಗದರ್ಶನ ನೀಡಿದ ಮಹಿಳಾ ಅಧ್ಯಯನ ವಿಭಾಗದ ಮುಖ್ಯಸ್ಥರು ಮತ್ತು ಮಾರ್ಗದರ್ಶಕರಾದ ಡಾ.ಎಚ್.ಎಸ್. ಶ್ರೀಮತಿ ಅವರಿಗೆ ತುಂಬು ಹೃದಯದ ಕೃತಜ್ಞತೆಗಳು ಸಲ್ಲುತ್ತವೆ. ಹಾಗೆ ಸೂಕ್ತ ಸಹಕಾರ ನೀಡಿದ ಡಾ.ಎಂ. ಉಷಾ, ಡಾ. ಶೈಲಜಾ ಹಿರೇಮಠ, ಶ್ರೀ ಎ.ಎಸ್. ಪ್ರಭಾಕರ್, ಡಾ.ಬಿ.ಎಂ. ಪುಟ್ಟಯ್ಯ ಅವರಿಗೆ ಪ್ರೀತಿಪೂರ್ವಕ ಕೃತಜ್ಞತೆಗಳು

ನನ್ನ ಓದಿನ ಪ್ರತಿ ಹಂತದಲ್ಲೂ ಸೂಕ್ತಪ್ರೇರಣೆ, ಸಹಕಾರ, ಪ್ರೋತ್ಸಾಹ ನೀಡುತ್ತಾ ನನ್ನ ಜ್ಞಾನದ ಸಸಿಗೆ ನೀರೆರೆದು ಪ್ರೋತ್ಸಾಹಿಸುತ್ತಿರುವ ಆತ್ಮೀಯ ಸಹೋದರನಾದ ವಿದ್ಯಾಧರ ಹುಗ್ಗಿ, ಮಾವನಾದ ಡಾ.ಹರಿಶ್ಚಂದ್ರ ದಿಗ್ಸಂಗೀಕರ್ ಮತ್ತು ಕುಟುಂಬದ ಸದಸ್ಯರನ್ನು ನೆನೆಯದಿರಲಾರೆ.

ಸಂಪ್ರಬಂಧದ ರಚನೆಯಲ್ಲಿ ಸಹಕಾರ ನೀಡಿದ ಹಿರಿಯ ಸಂಶೋಧಕರಾದ ಹಾಗು ಆತ್ಮೀಯರಾದ ಜಿ.ಉಮೇಶ್, ಎಂ. ಯರಿಸ್ವಾಮಿ, ವಿ.ಸಿ ಮಾರುತಿ, ಚನ್ನಪ್ಪ ಅವರನ್ನು ನೆನೆಸಿಕೊಳ್ಳುವುದು ನನ್ನ ಕರ್ತವ್ಯ.

ಹಾಗು ಪ್ರೀತಿಯ ಸಂಶೋಧನಾ ಸಹಪಾಠಿಗಳಾದ ಸುರೇಶ್ ಬಡಿಗೇರ್, ಸುಭಾಷ್ ದೊಡ್ಡಮನಿ, ಗಂಗಾಧರ್, ಬಸವರಾಜ್ ಪುತಿ, ನಾಗವರ್ಮ, ಮೋಹನ್, ಲೋಕರಾಜ್ ಅವರಿಗೆ ಅಭಿನಂದನೆಗಳು ಕ್ಷೇತ್ರಕಾರ್ಯದಲ್ಲಿ ಸಹಕಾರ ನೀಡಿದ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ, ಆತ್ಮೀಯ ಸ್ನೇಹಿತರಾದ ಉದಯ ಕುಮಾರ, ಗಿರಧರ ಜೈಭೀಮದರ್ಗಿ, ರಮೇಶ್ ಕವಡೆ, ಬಾಬುರಾವ, ಪರ್ತಕರ್ತ ಬಸವರಾಜ, ಶ್ರೀನಿವಾಸ, ಬಸವ, ಶಿವ ಅವರಿಗೆ ಸ್ನೇಹಪೂರ್ಣ ನೆನಕೆಗಳು.

ಅಂದವಾಗಿ ಮುದ್ರಣ ಮಾಡಿಕೊಟ್ಟ ಶರಣನಿಗೆ,

ಪ್ರಕಾಶ್ ಭೀಮರಾಯ

ಪರಿವಿಡಿ

ಪುಟ ಸಂಖ್ಯೆ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಪ್ರಸ್ತುತ ಸಂಪ್ರಬಂಧ ಶೀರ್ಷಿಕೆಯು ಹೇಳುವಂತೆ ಇದು 'ಲಿಂಗ' ತಾರತಮ್ಯ ವ್ಯವಸ್ಥೆಯಲ್ಲಿ ಸಮಾಜೀಕರಣದ ಪ್ರಕ್ರಿಯೆ ಮತ್ತು ಹದಿಹರೆಯದ ವಯಸ್ಸಿನ ಮೇಲೆ ಆದರ ಪರಿಣಾಮಗಳು ಎಂಬ ವಿಷಯವನ್ನು ಎಂ.ಫಿಲ್ ಅಧ್ಯಯನಕ್ಕಾಗಿ ಸಂಪ್ರಬಂಧ ರಚಿಸಲು ಸೂಕ್ತವಾದ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಮಾನವ ಸಂಘಜೀವಿ, ಸಮಾಜಜೀವಿ ಎಂದು ಸರಳ ಭಾಷೆಯಲ್ಲಿ ಹೇಳುತ್ತೇವೆ. ಆದರೆ ವಾಸ್ತವದಲ್ಲಿ ಮಾನವ ಸ್ವಭಾವತಃ ಪ್ರಕೃತಿ ನಿಯಮದ ಸಮಾಜ ಜೀವಿಯಲ್ಲ. ಪ್ರಕೃತಿ ಸೃಷ್ಟಿಯಲ್ಲಿ ಮಾನವ ಒಂದು ಪ್ರಾಣಿಯಷ್ಟೇ. ಜೀವಶಾಸ್ತ್ರದ ಆಧಾರದ ಮೇಲೆ ಗಂಡುಹೆಣ್ಣಿನ ದೈಹಿಕ ವ್ಯತ್ಯಾಸವನ್ನು ಕಾಣುತ್ತವೆ. ಲಿಂಗ ವ್ಯತ್ಯಾಸವು ನಿಸರ್ಗ ಸಹಜ ಲಕ್ಷಣವಾಗಿದೆ. ಈ ಸಹಜ ವ್ಯತ್ಯಾಸವನ್ನು ಅನುಸರಿಸಿ ನಾಗರಿಕ ಹಂತದಲ್ಲಿ ಲಿಂಗ ತಾರಮತ್ಯದ ವ್ಯವಸ್ಥೆಗಳು ರಚನೆಗೊಳ್ಳುತ್ತಾ ಬಂದಿವೆ. ಈ ಪರಿವರ್ತನೆಗಳನ್ನು ಹಲವಾರು ವಿದ್ವಾಂಸರು ಗುರುತಿಸಿದ್ದರೂ ಕಷ್ಟ ಸಾಧ್ಯವೆ. ಏಕೆಂದರೆ ಈ ಬದಲಾವಣೆಗಳು ಯಾವುದೂ ನಿರ್ದಿಷ್ಟ ಘಟ್ಟದಲ್ಲಿ ಹಠಾತ್ತಾಗಿ ಆಕ್ರಮಣಕಾರಿ ಸ್ವರೂಪದಲ್ಲಿ ನಡೆದಿದ್ದನೋ ಅಲ್ಲ. ಬದಲಿಗೆ ಹಂತ ಹಂತವಾಗಿ ಕುಟುಂಬಗಳು ರಚನೆಗೊಳ್ಳುತ್ತಾ ನಾಗರಿಕತೆಯ ವಿಸ್ತರಣೆಯೊಂದಿಗೆ ಗಟ್ಟಿಗೊಂಡು ಬಂದ ವ್ಯವಸ್ಥೆಯಾಗಿದೆ. ಹಾಗಾಗಿ ಇಂದು ನಾವು ನಿಂತ ನೆಲೆಯಿಂದ ಹಿಂತಿರುಗಿ ನೋಡಿದರೆ ಇದೊಂದು ತಾರತಮ್ಯ ವ್ಯವಸ್ಥೆಯಾಗಿ ಕಂಡುಬರುತ್ತದೆ.

ಸ್ತ್ರೀಪುರುಷರ ಬೇಧದ ಸ್ವರೂಪಗಳು ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರು ಮಾನವ ಸಮಾಜದ ಲಿಂಗತಾರತಮ್ಯದ ಸ್ವರೂಪವನ್ನು ಅಳವಡಿಸಿಕೊಂಡಿದ್ದಾರೆ. ಇದರ ಅಭಿಪ್ರಾಯವು ಸಹ ಸ್ವೀಕರಿಸಿದ್ದಾರೆ.

ಈ ಸಿದ್ಧಾಂತದ ಪ್ರಕಾರ ಮಾನವರಲ್ಲಿ ಎಂದು ಶ್ರಮವಿಭಜನೆ ಹುಟ್ಟಿಕೊಂಡಿತೋ ಆಸ್ತಿಯ ಪರಿಕಲ್ಪನೆಯು ಜನ್ಮತಾಳಿತು. ಹಾಗೂ ಕುಟುಂಬ ವ್ಯವಸ್ಥೆಯು ಬಲಗೊಳ್ಳುತ್ತಾ ಬಂದ ಹಾಗೆ ಈ ಘಟ್ಟಗಳಲ್ಲಿಯೆ ತಾರತಮ್ಯದ ಆರಂಭವನ್ನು ಕಾಣಬಹುದು. ಪ್ರಾಚೀನವಾದ ಈ ವ್ಯವಸ್ಥೆಯು ಇಂದು ಎಲ್ಲಾ ಕಾಲ, ದೇಶ, ಸ್ಥಳ ಮತ್ತು ಜನಾಂಗಗಳಲ್ಲಿ ವ್ಯಾಪಿಸಿದುದಾಗಿದೆ. ಹಾಗಾಗಿ ಈ ತಾರತಮ್ಯವನ್ನು ಕುರಿತು ಅಧ್ಯಯನ ಮಾಡುವುದು ಮಹಿಳಾ ಅಧ್ಯಯನದ ಪ್ರಾಥಮಿಕ ಆಧ್ಯತೆಯಲ್ಲಿ ಒಂದಾಗಿದೆ.

ಸ್ತ್ರೀ ಪುರುಷರ ಬಗ್ಗೆ ತಾರತಮ್ಯಗಳು ಸೃಷ್ಟಿಗೊಳಿಸಿದ್ದಾರೆ. ಹೆಣ್ಣು ಎಂದಾಕ್ಷಣ ದೇಹಬಲ ಕಡಿಮೆ, ದುರ್ಬಲಳು, ನಾಜೂಕು. ಸಹನೆ, ನಾಚಿಕೆ ಸ್ವಭಾವದವಳು ಎಂದು, ಗಂಡು ಎಂದಾಕ್ಷಣ ದೇಹಬಲ ಜಾಸ್ತಿ, ಶ್ರೇಷ್ಠನು, ಶೌರ್ಯ. ಸಾಹಸನು ಬುದ್ಧಿವಂತ ಎನ್ನುವ ಸ್ತ್ರೀಪುರುಷರ ಗುಣಗಳ ಪಟ್ಟಿಯನ್ನೇ ಬೆಳೆಸಬಹುದು. ವಾಸ್ತವದಲ್ಲಿ ಜೈವಿಕತೆಯನ್ನು ಸಾಮಾಜಿಕ ಅಪಕಲ್ಪಿತ ಭಾವನೆಗಳು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಹಾಗಾಗಿ ಇದು ತಾರತಮ್ಯ ರಚನೆಗೊಂಡು ಚಿಕ್ಕವರಿರುವಾಗಲೆ ಲಿಂಗ ತಾರತಮ್ಯದ ವ್ಯವಸ್ಥೆಗೆ ತಳ್ಳಿಬಿಡುತ್ತಿದ್ದಾರೆ.

ಸಮಾಜದಲ್ಲಿ ಬೆಳೆಯುವ ಮಾನವ ತನ್ನ ಜೀವನದ ಪ್ರವೃತ್ತಿಗನುಗುಣವಾಗಿ ಸರಿ ತಪ್ಪು ಎಂದು ಭಾವಿಸದೇ ಅಸಮಾನತೆಯ ನಿಟ್ಟಿನಲ್ಲಿ ಇಂದು ನಾವು ಕುಟುಂಬದಲ್ಲಿ ಮಕ್ಕಳನ್ನು ಬೆಳೆಸುತ್ತಿದುದನ್ನು ಕಾಣುತ್ತೇವೆ. ನಿರಂತರವಾಗಿ ಸಾಗುವ ಜೀವನ ಚರಿತ್ರೆಯಲ್ಲಿ ಬೆಳವಣಿಗೆಯ ಹಂತಗಳನ್ನು ವಯಸ್ಸಿಗನುಗುಣವಾಗಿ ತರಬೇತಿಗಳು ಪಡೆದುಕೊಳ್ಳುತ್ತಾ ಬರುತ್ತಿದ್ದಾರೆ. ಸಮಾಜದ ಎಲ್ಲಾ ಕಟ್ಟಳೆಗಳಿಗೆ ಕುಟುಂಬದಿಂದ ನೆರೆಹೊರೆಯವರಿಂದ ಪರಸ್ಪರ ನಡೆಯುತ್ತಾ ಕಲೆತು ಅದನ್ನು ಪಾಲಿಸುತ್ತಾ ಅಂತರ್ಗತಿಸಿಕೊಳ್ಳುತ್ತಾ ಸಮಾಜದ ನಿಯಮಗಳನ್ನು ಅನುಸರಿಸಿ ಬದುಕುತ್ತಿದ್ದಾರೆ. ಅದನ್ನು ಕುಟುಂಬದಲ್ಲಿಯೇ ಸಹಜ ದೃಷ್ಟಿಯಿಂದ ಕೊಡುವ ಈ ತರಬೇತಿಯ ಪ್ರಕ್ರಿಯೆಯನ್ನು ನಾವು ಸಮಾಜೀಕರಣ ಎನ್ನುತ್ತೇವೆ.

ಈ ವ್ಯವಸ್ಥೆಯಲ್ಲಿ ಸ್ತ್ರೀಯನ್ನು ಬೆಳೆಸುವ ಪರಿ ವಿಧಾನ ಮತ್ತು ಕಟ್ಟಳೆಗಳಲ್ಲಿ ತಾರತಮ್ಯವಿದೆ. ಇದರಿಂದ ವ್ಯವಸ್ಥಿತ ರೂಪದಲ್ಲಿ ಬದುಕಬೇಕಾಗಿದೆ. ಅವರಿಗೆ ತಿಳಿದೋ ತಿಳಿದೆಯೋ ಪಾಲಿಸಿಕೊಂಡು ಬರುತ್ತಿದ್ದಾರೆ. ನಮ್ಮ ಸಮಾಜವು ತಾನು ನಂಬಿದ ಲಿಂಗತಾರತಮ್ಯದ ಮೌಲ್ಯಗಳನ್ನು ಉಳಿಸಿ ಬೆಳೆಸುವುದಕ್ಕಾಗಿ ಎಲ್ಲಾ ಹಂತಗಳಲ್ಲೂ ಅತ್ಯಂತ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ. ಸಮಾಜದ ಎಲ್ಲಾ ಸಂಸ್ಥೆಗಳು ಅಂದರೆ ವಿವಾಹ, ಕುಟುಂಬ, ಶಿಕ್ಷಣ ಇತ್ಯಾದಿ ಈ ತಾರತಮ್ಯವನ್ನು ಸಮಾಜೀಕರಣಗೊಳಿಸುವ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ನಿರ್ವಹಿಸುತ್ತಿವೆ. ಕುಟುಂಬಗಳಲ್ಲಿ ಹಿರಿಯರು ತಮ್ಮ ಮಕ್ಕಳಿಗೆ ಎಳೆಯ ವಯಸ್ಸಿನಲ್ಲಿ ಲಿಂಗತಾರತಮ್ಯದ ನಡುವಳಿಕೆಗಳನ್ನು ರೂಪಿಸಿ ಬಿಡುತ್ತಾರೆ. ಈ ಅಂಶವೇ ನಂತರ ಉಳಿದೆಲ್ಲಾ ಸಂಸ್ಥೆಗಳಲ್ಲೂ ಕೂಡ ಪ್ರತಿಧ್ವನಿಸುತ್ತದೆ.

ಹೀಗೆಯೇ ವಿವಿಧ ಹಂತಗಳಲ್ಲಿ ಗಟ್ಟಿಗೊಳ್ಳುವ ಲಿಂಗ ತಾರತಮ್ಯದ ಸಮಾಜೀಕರಣವು ಹದಿಹರೆಯದ ವಯಸ್ಸಿನಲ್ಲಿ ಜೀವನದ ಸ್ಥಿತಿ ಗತಿ, ರೀತಿನೀತಿ ಬೋಧನೆಯು ಅರ್ಥೈಸಿಕೊಳ್ಳಬೇಕಾದುದು ಅಷ್ಟೇ ಮುಖ್ಯವಾಗಿದೆ. ಯಾಕೆಂದರೆ ಸೂಕ್ಷ್ಮ ಸಂವೇದನೆಯ ಮನಸ್ಸು, ಹೊಸ ಆಲೋಚನೆಗಳು, ಭಾವನೆಗಳು ಅವರ ನಡೆನುಡಿಗಳಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ದೈಹಿಕವಾಗಿ ಮಾನಸಿಕವಾಗಿ, ಶೈಕ್ಷಣಿಕವಾಗಿ ಪ್ರಗತಿಹೊಂದುವ ಹಂತವಾಗಿದ್ದು ಇವುಗಳೆಲ್ಲ ಸಂಪೂರ್ಣ ಜೀವನದ ತಿರುಳಾಗಿ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗಿರುತ್ತದೆ. ಇದನ್ನು ವಿಶೇಷ ಕಾಳಜಿಯಿಂದ ಗಮನಿಸಬೇಕಾದುದು ಅವಶ್ಯಕವಾಗಿದೆ. ಸಮಾಜೀಕರಣದ ತರಬೇತಿಯು ಬಹುಪ್ರಧಾನವಾಗಿ ಕಟ್ಟುಪಾಡುಗಳು ಈ ವಯಸ್ಸಿನಲ್ಲಿ ಜಾಸ್ತಿಯಾಗಿರುತ್ತವೆ. ಲಿಂಗ ತಾರತಮ್ಯವು ಈ ಹಂತದಲ್ಲಿ ಯಾವ ರೀತಿಯ ಕಾರ್ಯ ನಿರ್ವಹಿಸುತ್ತದೆ ಎನ್ನವುದು ತಿಳಿದುಕೊಳ್ಳಬೇಕಾದುದು ಅಗತ್ಯವಾಗಿದೆ.

ಪ್ರಥಮವಾಗಿ ಪುರುಷ ಚಿಂತನೆಯಲ್ಲಿಯೇ ಒಳಪಡುವ ಮಹಿಳೆಯು ಎಲ್ಲಾ ವಿವಿಧ ವಲಯಗಳಲ್ಲಿ ತಾರತಮ್ಯಗಳು ಉದ್ದೇಶ ಪೂರ್ವಕವಾಗಿ ಸೃಷ್ಟಿಗೊಳಿಸಿರುವುದನ್ನು ಕಾಣುತ್ತೇವೆ. ಎರಡನೆಯದಾಗಿ ಈ ತಾರತಮ್ಯಗಳು ಯಾವ ರೀತಿಯಿಂದ ಮಕ್ಕಳಿಗೆ ದಾಟಿಸುತ್ತಿದ್ದಾರೆ. ಅದರಿಂದ ಆಗುವ ಪರಿಣಾಮವು ಹದಿಹರೆಯದ ವಯಸ್ಸೆ ಎಂದು ಖಚಿತವಾಗಿ ಹೇಳಬೇಕಾಗುತ್ತದೆ. ಲಿಂಗ ತಾರತಮ್ಯವು ಸಮಾಜೀಕರಣದ ತರಬೇತಿಯು ಬಾಲ್ಯದಿಂದ ವೃದ್ಧಾಪ್ಯದವರೆಗೆ ಹೇಗೆ ಸಾಗಿಬರುತ್ತದೆ ಎನ್ನುವುದು ಅರಿತುಕೊಳ್ಳಲಾಗಿದೆ.

ಮಹಿಳೆಯ ಬಗ್ಗೆ ಪ್ರಸ್ತುತದಲ್ಲಿ ಬದಲಾವಣೆಗಳು ಕಂಡುಬರುತ್ತಿದ್ದರು. ಅನ್ಯ ಮಾರ್ಗದಿಂದ ಶೋಷಣೆಗೊಳಗಾಗಬೇಕಾದ ಹಂತ ಮಾತ್ರ ಮಹಿಳೆಗೆ ಒದಗುತ್ತಿದೆ. ಅದಕ್ಕಾಗಿ ಬಹುಮುಖ್ಯ ಕಾಲಘಟ್ಟವಾದ ಹದಿಹರೆಯವು ಲಿಂಗ ತಾರತಮ್ಯಗೆ ಒಳಪಡಿಸುವ ಸಂರಚನೆಯನ್ನು ಅರ್ಥೈಸಿಕೊಳ್ಳಬೇಕಾಗಿದೆ.

ಅಧ್ಯಯನದ ಉದ್ದೇಶ

ಈ ಅಧ್ಯಯನ ಕೈಗೊಳ್ಳಲು ಕಾರಣವೆಂದರೆ ಅಸಮಾನತೆಯ ನಿಟ್ಟಿನಲ್ಲಿ ಬೆಳೆಯುತ್ತಿರುವ ಸ್ತ್ರೀಯರನ್ನು ಕಾಣುತ್ತೇವೆ. ಅವರ ಭವಿಷ್ಯ ಮತ್ತು ವ್ಯಕ್ತಿತ್ವ ರೂಪಗೊಳ್ಳಲು ಲಿಂಗತಾರತಮ್ಯ ವ್ಯವಸ್ಥೆ ನಮ್ಮ ಸಮಾಜದಲ್ಲಿ ಗಾಢವಾಗಿ ಪರಿಣಾಮ ಬೀರಿದೆ. ಅದನ್ನು ಸೂಕ್ತವಾದ ತಿಳುವಳಿಕೆಯಿಂದ ಕಂಡುಕೊಳ್ಳುವುದು ಈ ಅಧ್ಯಯನ ಮೂಲ ವಿಷಯದಲ್ಲಿ ಒಂದಾಗಿದೆ. ಅದರಲ್ಲಿ ಸಮಾಜೀಕರಣ ತರಬೇತಿಯ ಸ್ತ್ರೀಯನ್ನು ಬೆಳೆಸುವ ವಿಧಾನದಿಂದ ತಾರತಮ್ಯವು ತಾರತಮ್ಯವಾಗಿಯೇ ಮುಂದುವರಿಯಲು ಕಾರಣವಾಗಿದೆ. ಅದರಲ್ಲಿ ಹದಿಹರೆಯದವರನ್ನು ಬೆಳೆಸುವ ಪರಿಯೇ ಬೇರೆ. ಇದರಲ್ಲಿ ಸ್ವತಂತ್ರವಾಗಿ ಚಲಿಸಲು ಹುಡುಗನಿಗೆ ಅವಕಾಶ ಸಿಕ್ಕರೆ ಹುಡುಗಿಗೆ ಚೌಕಟ್ಟಿನಲ್ಲಿ ಸಿಲುಕಿಸುವ ಪ್ರವೃತ್ತಿ ಇನ್ನೂ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಗಾಢವಾಗಿದೆ. ಆದರೆ ಪಟ್ಟಣ ಪ್ರದೇಶಗಳಲ್ಲಿ ಇರುವ ರೀತಿಯೇ ಬೇರಾಯಾಗುತ್ತಿದೆ. ಸಮೂಹ ಮಾಧ್ಯಮಗಳ

ಪ್ರಭಾವದಿಂದ ದುರ್ಮಾರ್ಗಗಳಲ್ಲಿ ಸಿಲುಕಿ ಜೀವನಪೂರ್ತಿ ನರಳಾಡುವ ಪರಿಸ್ಥಿತಿಯನ್ನು ಕಂಡುಕೊಳ್ಳುತ್ತೇವೆ. ಆಧುನಿಕತೆಯಲ್ಲಿಯೂ ಮಹಿಳೆಯು ಶೋಷಣೆ ತಾರತಮ್ಯಕ್ಕೆ ಒಳಗಾಗುತ್ತಿದ್ದಾಳೆ. ಇಂದಿನ ಯುವಕ ಯುವತಿಯರು ನಾಳಿನ ನಾಗರಿಕರು ಎನ್ನುವ ಮಾತು ನಿಜವಾದರೂ ನಮ್ಮ ಯುವ ಪೀಳಿಗೆ ಯಾವ ಕಡೆ ಸಾಗುತ್ತಿದೆ. ಅದಕ್ಕೆ ಮೂಲ ಕಾರಣವೇನು ಎನ್ನುವುದು ಅವಶ್ಯಕವಾಗಿದೆ. ಜೊತೆಗೆ ಅವರ ವ್ಯಕ್ತಿತ್ವ ರೂಪಗೊಳ್ಳಲು ಕುಟುಂಬದಲ್ಲಿ ಬೆಳೆಯುವ ಪರಿ ಎಂತಹದ್ದು ಶಿಕ್ಷಣದ ಮಹತ್ವ ಎಂತಹದು ಎನ್ನುವುವರ ಜೊತೆಗೆ ಹದಿಹರೆಯದವರ ಮಾನಸಿಕ ಸ್ಥಿತಿಯಿಂದ ಅವರ ಜೀವನದ ಘಟ್ಟಗಳು ಬದಲಾಗುವ ಪರಿಯನ್ನು ಗುರುತಿಸಿಕೊಳ್ಳಲಾಗಿದೆ.

ಲಿಂಗ ತಾರತಮ್ಯದಿಂದ ಬೆಳವಣಿಗೆಗೆ ಅಡ್ಡಿಯಾಗಿರುವ ಈ ಕಂದರಗಳು ಸಮಾಜೀಕರಣದ ವಿವಿಧ ಹಂತಗಳಾದ ಬಾಲ್ಯ, ಹದಿಹರೆಯ, ಯೌವ್ವನ, ವೃದ್ಧಾಪ್ಯಗಳನ್ನು ಅಧ್ಯಯನಿಸಬೇಕಾಗಿದೆ. ಅದರಲ್ಲಿ ಹದಿಹರೆಯ ವ್ಯಕ್ತಿತ್ವಕ್ಕೆ ಅಡ್ಡಿಯಾಗಿರುವ ಲಿಂಗ ತಾರತಮ್ಯ ವ್ಯವಸ್ಥೆಯು ಮತ್ತು ಪುರುಷ ಚಿಂತನೆಯು ಮಹಿಳೆಯನ್ನು ಒಳಪಡಿಸಿದ ಮಾದರಿಯನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ

ಈ ಅಧ್ಯಯನದ ಕಾರ್ಯಕ್ಷೇತ್ರದ ವ್ಯಾಪ್ತಿ ಗುಲ್ಬರ್ಗಾ ಜಿಲ್ಲೆಯ ಎರಡು ಕಾಲೇಜುಗಳಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಹುಡುಗರು ಮತ್ತು ಹುಡುಗಿಯ ಅಂಶಿಕ ಮಾದರಿಗಾಗಿ ವಿಚಾರಗಳನ್ನು ಬಳಸಿಕೊಳ್ಳಲಾಗಿದೆ. ಮತ್ತು ಗ್ರಾಮೀಣ ಪ್ರದೇಶಗಳನ್ನು ಅವಲೋಕಿಸಿ ಶಿಕ್ಷಣ ತಜ್ಞರ ಜೊತೆ ಚರ್ಚಿಸಿ ಹದಿಹರೆಯದ ವಯಸ್ಸಿಗೆ ಸಂಬಂದಿಸಿದವರನ್ನು ಆಧಾರವಾಗಿಟ್ಟುಕೊಂಡು ಸಮಾಜಶಾಸ್ತ್ರ, ಮನಃಶಾಸ್ತ್ರ, ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳ ಮೂಲ ಅಂಶಗಳು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಹದಿಹರೆಯಯ ೧೨ ರಿಂದ ೨೦ ವರ್ಷದ ವಯಸ್ಸಿನ ಅಂತರದ ಸ್ತ್ರೀಯ ಭಾವನೆ, ಪ್ರತಿಭೆ ಸಹಜತೆ, ಸಮಾಜದ ನಿರ್ಬಂಧಗಳು, ನಿಷೇಧಗಳು, ತಾರತಮ್ಯಗಳನ್ನು ಗುರುತಿಸಿಕೊಳ್ಳುವುದನ್ನು ಹೊಂದಿದೆ. ಮತ್ತು ಈ ವಯಸ್ಸಿಗೆ ಮೂಲ ಅಂದರೆ ಬಾಲ್ಯ, ಯೌವ್ವನ, ಪ್ರೌಢ, ವೃದ್ಧಾಪ್ಯ ಮಿತಿಯಲ್ಲೆ ವಿಶಾಲತೆ ದೃಷ್ಟಿಯಿಂದ ಕೆಲವು ಜೀವನದ ಮೂಲ ಘಟ್ಟಗಳನ್ನು ಮಾತ್ರ ತೆಗೆದುಕೊಳ್ಳುವುದು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತದೆ.

ಅಧ್ಯಯನದ ಮಹತ್ವ

ಸಹಜತೆಯ ದೃಷ್ಟಿಯಿಂದ ವ್ಯವಸ್ಥಿತ ಚೌಕಟ್ಟಿನಲ್ಲಿ ಬದುಕಲು ಸಮಾಜೀಕರಣ ಅತಿ ಪ್ರಮುಖದ ಸ್ಥಾನ ವಹಿಸುತ್ತದೆ. ಇದರಲ್ಲಿ ಮಾನವರ ಬೆಳವಣಿಗೆಯ ಚೌಕಟ್ಟು ಮತ್ತು ಶಿಸ್ತನ್ನು ಅಳವಡಿಸಿ ಕೊಂಡಿದ್ದಾರೆ. ಈ ಶಿಸ್ತಿನಲ್ಲಿ ಎಲ್ಲಾ ರೀತಿಯ ಸ್ವತಂತ್ರ್ಯ, ಸ್ವ ಇಚ್ಛೆ, ಅನುಕೂಲಗಳು, ಸಂತೋಷಗಳು, ಪುರುಷರ ಪಾಲಾದರೆ,

ಅನಾನುಕೂಲ, ತಾರತಮ್ಯ, ಅಸಮಾನತೆ ಮಹಿಳೆಯ ಪಾಲಾಗಿದೆ. ಈ ನಿಟ್ಟಿನಲ್ಲಿ ಮೇಲು-ಕೀಳು, ಶ್ರೀಮಂತ-ಬಡವ, ಗಂಡು-ಹೆಣ್ಣು ಶ್ರೇಷ್ಠ-ಕನಿಷ್ಠ ಎಂಬ ತಾರತಮ್ಯ ವ್ಯವಸ್ಥೆ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿದೆ. ಇದರಿಂದ ಅಸಮಾನತೆ ಉಂಟಾಗಿ ಶಕ್ತರು ಸ್ವತಂತ್ರ್ಯ ಮತ್ತು ಸೌಲಭ್ಯಗಳನ್ನು ಗಿಟ್ಟಿಸಿಕೊಂಡರೆ ಅಶಕ್ತರು ಅದರಿಂದ ವಂಚಿತರಾಗಿದ್ದಾರೆ. ಇದರಿಂದ ಸಮಾಜದಲ್ಲಿ ಅಸಮಾನತೆಗೆ ಕಾರಣವಾಗುವುದರಿಂದ ಇದನ್ನು ಪ್ರತಿಯೊಬ್ಬರು ಚಿಂತಿಸಬೇಕಾದ ವಿಚಾರವಾಗಿದೆ.

ಗಂಡುಹೆಣ್ಣಿನ ಬೆಳವಣಿಗೆ ಕುಟುಂಬದಲ್ಲಿ ಆಗುವುದರಿಂದ ಕುಟುಂಬವು ಸೂಕ್ತ ರೀತಿಯ ತರಬೇತಿ ನೀಡುತ್ತಾ ಇದ್ದ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಮಾನವರ ಸಮಾನತೆ ಮತ್ತು ಅಸಮಾನತೆಯ ಮಾರ್ಗಗಳ ಬೆಳವಣಿಗೆಗೆ ಪ್ರಥಮ ಮಾರ್ಗದರ್ಶಿಯಾಗಿದೆ. ನಂತರ ಶಿಕ್ಷಣ ಸಮಾಜವು ಅವಶ್ಯವಾದ ಪಾತ್ರವಹಿಸುತ್ತವೆ. ಈ ವ್ಯವಸ್ಥೆಯಲ್ಲಿ ಇಂದು ನಾವು ಸ್ತ್ರೀಯನ್ನು ಕಡಗೆಣಿಸಿ ತಾರತಮ್ಯ ಮಾಡುವುದನ್ನು ಕಾಣುತ್ತೇವೆ. ಶಿಕ್ಷಣವಲ್ಲಾಗಲಿ, ಜವಾಬ್ದಾರಿ ತೆಗೆದು ಕೊಳ್ಳುವುದಲ್ಲಾಗಲಿ, ಸ್ವತಂತ್ರ್ಯವಾಗಿ ಬದುಕುವುದಲ್ಲಾಗಲಿ ಅವಕಾಶ ವಂಚಿತರಾಗಿದ್ದಾರೆ. ಈ ರೀತಿಯ ಲಿಂಗ ತಾರತಮ್ಯದಿಂದ ನವಪೀಳಿಗೆಯ ಜನಾಂಗಕ್ಕೆ ಮಾರಕವಾಗಿದೆ. ಇವನ್ನು ಕುಟುಂಬದಲ್ಲಿ ನೀಡುತ್ತಿರುವ ತರಬೇತಿ ಕಲಿಕೆಗಳು ಬದಲಾಗಬೇಕಾಗಿದೆ. ಇದರಲ್ಲಿ ಹರಿಹರೆಯದವರು ವ್ಯಕ್ತಿಯ ಜೀವನದಲ್ಲಿ ಒಂದು ಅತ್ಯಂತ ಮಹತ್ವದ ಅವಧಿಯಾಗಿದೆ. ಎಲ್ಲಾ ಚಾತುರ್ಯ, ಸಾಮರ್ಥ್ಯ ಹಾಗೂ ಅನುಭವಗಳನ್ನು ಮೈಗೂಡಿಸಿಕೊಂಡು ಈ ಅವಧಿಯಲ್ಲಿ ಸ್ವಾವಲಂಬಿಗಳಾಗುತ್ತಾರೆ. ಯಾವುದೇ ವಿಷಯವನ್ನು ಪ್ರಯತ್ನಿಸಿ ಬಿಡುವ, ತರ್ಕಿಸುವ, ಹಂತವಾಗಿರುತ್ತದೆ. ಯಾಕೆಂದರೆ ದೈಹಿಕ, ಮಾನಸಿಕ, ಬೌದ್ಧಿಕವಾಗಿ ಬೆಳವಣಿಗೆ ಹೊಂದುವ ಹಂತವಾದ್ದರಿಂದ ವ್ಯಕ್ತಿತ್ವ ವಿಕಸನಕ್ಕೆ ಸೂಕ್ತ ರೀತಿಯ ತರಬೇತಿ ಅತ್ಯಂತ ಅವಶ್ಯ ಮತ್ತು ಅಗತ್ಯವಾಗಿದೆ. ಈ ಎಲ್ಲಾ ದೃಷ್ಟಿಯಿಂದ ಅಧ್ಯಯನ ಮಹತ್ವವೆನಿಸುತ್ತದೆ.

❑

ಅಧ್ಯಾಯ ೨
ಲಿಂಗ ತಾರತಮ್ಯ ವ್ಯತ್ಯಾಸ

ಲಿಂಗ ತಾರತಮ್ಯ ವ್ಯತ್ಯಾಸ

ಪ್ರಸ್ತಾವನೆ

ಲಿಂಗ ವ್ಯತ್ಯಾಸವು ಜೈವಿಕವಾಗಿ ಗಂಡು ಮತ್ತು ಹೆಣ್ಣು ಎಂದು ಗುರುತಿಸುತ್ತೇವೆ. ಲಿಂಗತಾರತಮ್ಯವು ಮಹಿಳೆ ಮತ್ತು ಪುರುಷರ ಭೇದಗಳ ಸ್ವರೂಪವನ್ನು ಕಾಣುತ್ತೇವೆ. ಸಾಮಾಜಿಕವಾಗಿ ರಚಿಸಲ್ಪಟ್ಟ ಈ ವತ್ಯಾಸಗಳು ಜೈವಿಕವಾಗಿ ಪರಿಗಣನೆಗೆ ತೆಗೆದುಕೊಳ್ಳದಿರುವುದನ್ನು ಕಾಣುತ್ತೇವೆ. ಹೆಣ್ಣು-ಗಂಡಿನ ಬಗ್ಗೆ ವಿವಿಧ ಕಲ್ಪಿತಗಳು ಸೃಷ್ಟಿಸಿ ಸಾಮಾಜಿಕವಾಗಿ ಒಪ್ಪಿಕೊಳ್ಳುವಂತೆ ತಾರತಮ್ಯಗಳು ವಿವಿಧ ವಲಯಗಳಲ್ಲಿ ರೂಪ ತಾಳಿವೆ. ಈ ತಾರತಮ್ಯಗಳಿಂದ ಮಹಿಳೆಯನ್ನು ಕಡಗಣಿಸಿರುವುದು ಕಾಣುತ್ತೇವೆ. ಪುರುಷ ಚಿಂತನೆಯ ಅಡಿಯಲ್ಲಿ ಮಹಿಳೆಯ ಬದುಕು ಅಸ್ತಿತ್ವವಿಲ್ಲದ ಹುಡುಕಾಟದಂತೆ ಸಾಗುತ್ತಲಿದೆ. ಇದರಿಂದ ಲಿಂಗ ತಾರತಮ್ಯ ವ್ಯತ್ಯಾಸಗಳು ಮಹಿಳೆಯರ ಹಲವಾರು ಶೋಷಣೆಯ ರೂಪದಲ್ಲಿ ವ್ಯತ್ಯಾಸಗಳು ಅನೇಕವಾಗಿವೆ. ಅನೇಕತೆಯಲ್ಲಿಯೇ ಏಕತೆಯನ್ನು ಸಾಧಿಸುವ ದೃಷ್ಟಿಕೋನದಿಂದ ಮಹಿಳೆಯ ವಿಸ್ತರಣೆಯ ಬದುಕನ್ನು ಕಂಡುಕೊಳ್ಳಲು ಅವರ ಬೆಳವಣಿಗೆಗನುಗುಣವಾಗಿ ಹುಟ್ಟಿಕೊಂಡ ಸಮಾಜೀಕರಣದ ಪಾತ್ರವು ಮುಖ್ಯವಾಗಿ ಗೋಚರವಾಗುತ್ತದೆ. ಪೂರ್ವದಲ್ಲಿ ಮಹಿಳೆಯ ತಾರತಮ್ಯಗಳು ಶ್ರಮ ವಿಭಜನೆಯದಾದರೂ ಮುಖ್ಯವಾಗಿ ಸಾಮಾಜೀಕರಣವು ಮಾನವ ಬದುಕಿನ ತಳಪಾಯವನ್ನು ರೂಪಿಸುವ ಮಾದರಿಯಾಗಿದೆ. ಇದರಿಂದ ಮಹಿಳೆ ಹಲವು ಶೋಷಣೆ ತಾರತಮ್ಯಕ್ಕೆ ಎಡೆಮಾಡಿಕೊಡಲು ಸಾಧ್ಯವಾಗಿದೆ. ಅದಕ್ಕಾಗಿ ಮಾನವರ ವಿಕಾಸದಿಂದ ಶ್ರಮವಿಭಜನೆ, ಆರ್ಥಿಕತೆ, ಕುಟುಂಬ, ಶಿಕ್ಷಣ ಧರ್ಮಗಳಲ್ಲಿ ಪುರುಷ ಚಿಂತನೆಯಲ್ಲಿ ಮಹಿಳೆಯ ತಾರತಮ್ಯದ ವ್ಯತ್ಯಾಸಗಳನ್ನು ಕಂಡುಕೊಳ್ಳುವುದು ಇಲ್ಲಿನ ಮುಖ್ಯ ಆಶಯ.

ಪ್ರಕೃತಿಯಲ್ಲಿ ಗಂಡು ಮತ್ತು ಹೆಣ್ಣು ಎರಡು ಜೀವಿಗಳ ಬದುಕನ್ನು ಕಾಣುತ್ತೇವೆ. ಸೃಷ್ಟಿಯ ಕ್ರಿಯೆಯ ಮುಂದುವರಿಕೆಗೆ ಇವು ಅವಶ್ಯವಾಗಿದೆ. ಮಾನವರಲ್ಲಿಯೂ ಈ ವ್ಯತ್ಯಾಸಗಳು ಇವೆ. ಹೆಣ್ಣು ಗಂಡಿನಲ್ಲಿ

ತನ್ನದೇ ಆಗಿರತಕ್ಕಂತಹ ದೈಹಿಕ ವ್ಯತ್ಯಾಸಗಳು ಇವೆ. ಮತ್ತು ಅವು ಹಾಗೆ ಇರಲೇಬೇಕಾಗಿರುವಂತಹವು. ಒಂದಕ್ಕೊಂದು ಪೂರಕವಾಗಿ ರಚನೆಗೊಂಡಿರುತ್ತವೆ. ಈ ಎರಡು ದೇಹದಲ್ಲಿ ವಿಶಿಷ್ಟ ರೀತಿಯ ಅಂಗಾಂಗಳು ತನ್ನದೆ ಆಗಿರತಕ್ಕಂತಹ ಶಕ್ತಿ ಸಾಮರ್ಥ್ಯಗಳು ಪಡೆದುಕೊಂಡಿವೆ. ಸಂತಾನೋತ್ಪತ್ತಿ ಮುಂದುವರಿಕೆಗೆ ಸ್ತ್ರೀಗೆ ವಿಶಿಷ್ಟ ಗರ್ಭಕೋಶದ ರಚನೆಯ ಒಳಗೊಂಡಿದ್ದು, ಮಾನವ ಜೀವಿಯ ರಕ್ಷಣೆಯ ಕಾರ್ಯ ಸ್ತ್ರೀಯ ಗರ್ಭದಿಂದಲೇ ಪ್ರಾರಂಭಗೊಳ್ಳುತ್ತದೆ. ಈ ಜೀವಿಯ ರಚನೆಗೆ ಪುರುಷನದು ಪ್ರಮುಖ ಕಾರ್ಯವಿರುತ್ತದೆ. ದೈಹಿಕವಾಗಿ ಪುರುಷನು ಪ್ರಬಲನಾಗಿದ್ದು, ಮಹಿಳೆ ಸ್ವಲ್ಪ ದುರ್ಬಲಳಾಗಿರುತ್ತಾಳೆ. ಇದು ಸತ್ಯವಾಗಿದ್ದು ಒಪ್ಪಿಕೊಳ್ಳುವಂತಹದು ದೈಹಿಕ ವ್ಯತ್ಯಾಸಗಳೇ ನಿಜವಾದ ನೈಸರ್ಗಿಕ ವ್ಯತ್ಯಾಸಗಳಾಗಿರುತ್ತವೆ. ಇದಕ್ಕೆ ತರ್ಕಿಸುವುದು ವ್ಯರ್ಥ ವಿಚಾರವೇ ಸರಿ. ಆದರೆ ಈ ಜೀವಿಗಳ ವ್ಯತ್ಯಾಸಗಳು ಭಿನ್ನ ರೀತಿಯಲ್ಲಿ ತಾರತಮ್ಯಗಳು ಸೃಷ್ಟಿಗೊಳಿಸಿರುತ್ತಾರೆ. ಆರ್ಥಿಕತೆಯಲ್ಲಿ ಸಾಮಾಜಿಕ, ಶಿಕ್ಷಣ, ಸಂಸ್ಕೃತಿ, ಧರ್ಮ, ರಾಜಕೀಯ, ಇನ್ನಿತರ ಎಲ್ಲಾ ವಿವಿಧ ವಲಯಗಳಲ್ಲಿ ಈ ತಾರತಮ್ಯದ ವ್ಯತ್ಯಾಸಗಳು ಕಲ್ಪಿತ ಮಾದರಿಯಾಗಿ ರಚನೆಗೊಳ್ಳುತ್ತಿರುವುದು ಕಾಣುತ್ತೇವೆ. ಪ್ರಥಮವಾಗಿ ಇದು ಶ್ರಮ ವಿಭಜನೆಯ ಕಾರಣದಿಂದ ಹುಟ್ಟಿಕೊಂಡಿದ್ದು ಗೋಚರವಾಗುತ್ತದೆ. ಅದಕ್ಕಾಗಿ ಮಾನವ ಪೂರ್ವ ವಿಕಾಸಗಳು ಹೇಗೆ ರಚನೆಗೊಂಡಿವೆ ಎಂದು ತಿಳಿದುಕೊಳ್ಳೋಣ.

ಮಾನವರ ವಿಕಾಸ ಮತ್ತು ಲಿಂಗ ತಾರತಮ್ಯ ಶ್ರಮವಿಭಜನೆ

ಮಾನವ ಪ್ರಕೃತಿಯಲ್ಲಿ ಪ್ರಾಣಿಗಳ ಹಾಗೆ ಅಲೆಮಾರಿ ಜೀವಿಗಳಾಗಿದ್ದರು, ಪ್ರಕೃತಿಯಲ್ಲಿ ಸಿಗುವ ಹಣ್ಣು ಹಂಪಲು, ಗೆಡ್ಡೆ ಗೆಣಸುಗಳನ್ನು ಮತ್ತು ಇತರೆ ಪ್ರಾಣಿಗಳನ್ನು ಕೊಂದು ತಿನ್ನುವ ಪ್ರವೃತ್ತಿ ಇವರದಾಗಿತ್ತು. ಗುಡ್ಡ, ಗವಿಗಳಲ್ಲಿ ವಾಸಮಾಡಿ ಹಸಿವುಗಾಗಿ ನಿರಂತರ ಅಲೆಮಾರಿಯ ಜೀವನ ನಡೆಸುತ್ತಿದ್ದರು. ಬರುತ್ತಾ ಇತರೆ ಜೀವಿಗಳಾದ ಇರುವೆ, ಗೆದ್ದಲು, ಜಿಂಕೆಗಳ, ಸೂಕ್ಷ್ಮ ಜೀವಿಗಳ ಹಾಗೆ ಹಿಂಡುಹಿಂಡಾಗಿ ಸಂಘ ಜೀವಿಗಳಾಗಿದ್ದರು. ಏಕತೆಯಿಂದ ಹೋರಾಡಿ ಕೊಂದು ತಂದು ಹಂಚಿಕೊಂಡು ತಿನ್ನುತ್ತಿದ್ದರು. ಹೀಗೆ ಇವರ ಜೀವನ ಸಾಗಿದ ಹಾಗೆ ಬೆಂಕಿಯನ್ನು ಕಂಡುಕೊಂಡರು. ಅದನ್ನು ಪ್ರಾಣಿಗಳನ್ನು ಬೇಯಿಸಲು ಚಳಿಯನ್ನು ನಿಗಿಸಲು ಉಪಯೋಗಿಸತೊಡಗಿದರು. ಪ್ರಕೃತಿಯಲ್ಲಿ ಸಿಗುವ ಹೊಸ ಹೊಸ ವಸ್ತುಗಳ ಹೊಸ ಹೊಸದಾಗಿ ಮಾನವ ಕಂಡುಕೊಳ್ಳುತ್ತಲೇ ಇದ್ದರು. ಹಾಗೆ ಪರಸ್ಪರ ಅವಲಂಬನೆ ಮತ್ತು ಕೂಡಿಕೊಂಡು ಮಾಡುವ ಪ್ರವೃತ್ತಿ ಹೆಚ್ಚು ಗಾಢವಾಗಿ ಬೆಳೆಯುತ್ತ ಬಂದಿತು. ಇದರಿಂದ ಸಾಮೂಹಿಕ ಪ್ರಕ್ರಿಯೆಗೆ ಅವಕಾಶವಾಯಿತು. ಏಕತೆಯಲ್ಲಿಯ ಶಕ್ತಿಯ ಅಂಚನ್ನು ಕಂಡುಕೊಂಡರು. "ಸಾಮೂಹಿಕ ಪ್ರಕ್ರಿಯೆಗಾಗಿ ಒಟ್ಟಿನಲ್ಲಿ ಮಾಡಬೇಕಾದ ಕೆಲಸಗಳು ಒಬ್ಬರ ಬೇಕು ಬೇಡಗಳು ಇನ್ನೊಬ್ಬರಿಗೆ ತಿಳಿಸುವಲ್ಲಿ ಪರಸ್ಪರರಲ್ಲಿ ಮಾತಾಡಿಕೊಳ್ಳಬೇಕಾದಂತಹ ಘಟ್ಟಗಳನ್ನು ತಲುಪಿದರು."[೭] ಇದರಿಂದ ತಮ್ಮ ಗಂಟಲಿನ ಸಹಾಯದಿಂದ ಹೊಸ ಹೊಸ ಸ್ವರಗಳಿಂದ ತಮಗೆ ತಿಳಿದ ಶೈಲಿಯಲ್ಲಿ ಮಾತುಗಳನ್ನು ಕಂಡುಕೊಂಡರು. ಇದರಿಂದ ಸರಳವಾಗಿ ಕಷ್ಟಸುಖಗಳನ್ನು

ಗುರುತಿಸತೊಡಗಿದರು. ಹಲವು ಕಡೆ ಗುಂಪು ಗುಂಪಾಗಿ ವಾಸಿಸುತ್ತಿದ್ದ ಜನ ಕ್ರಮೇಣ ಒಂದು ಕಡೆ ನೆಲೆ ನಿಲ್ಲಲು ಪ್ರಾರಂಭಿಸಿದರು. ನದಿ ಕೆರೆಗಳ ನೀರಿನ ಅನುಕೂಲತೆಯು ಇರುವ ಸ್ಥಳದಲ್ಲಿ ಮತ್ತು ಫಲವತ್ತಾದ ಮಣ್ಣಿನಲ್ಲಿ ಬೀಜಗಳನ್ನು ಬಿತ್ತಿ ಮರು ಉತ್ಪಾದನೆಯನ್ನು ತೆಗೆದುಕೊಳ್ಳುವುದನ್ನು ಕಂಡುಕೊಂಡರು. ತಮ್ಮ ಜೀವನಕ್ಕೆ ಬೀಜಗಳ ಮಹತ್ವ ಅರಿತರು. ಅದರ ಉಪಯೋಗವು ಸಹ ಬಗೆ ಬಗೆಯಾಗಿ ತಿಳಿದುಕೊಂಡರು.

ಫಲವತ್ತಾದ ಮಣ್ಣಿನಲ್ಲಿ ಬೀಜಗಳನ್ನು ಕೈಯಿಂದ ನಾಟುತಿದ್ದರು. ಹೀಗೆ ಪ್ರಾರಂಭವಾಯಿತು ಕೃಷಿ. ಇದ್ದ ಪರಿಸರದಲ್ಲಿಯ ಭೂಮಿಯನ್ನು ಊಳುವುದಕ್ಕೆ ಶಕ್ತಿಯು ಜಾಸ್ತಿ ಬೇಕಾದ್ದರಿಂದ ಮತ್ತೆ ಬೀಜಗಳ ಹೆಚ್ಚಿನ ಸಂಗ್ರಹಕ್ಕಾಗಿ ವಿಸ್ತಾರವಾದ ಪ್ರದೇಶದವರೆಗೆ ಹರಡಿ ಅದರ ಉಪಯೋಗ ತೆಗೆದುಕೊಳ್ಳಲು, ಸಾಧು ಪ್ರಾಣಿಗಳಾದ ದನ, ಕುದುರೆಗಳನ್ನು ಪಳಗಿಸಿಕೊಂಡು ಅವುಗಳಿಂದ ಕೃಷಿ ಉತ್ಪಾದನಾ ಚಟುವಟಿಕೆಗೆ ಉಪಯೋಗಿಸಿತೊಡಗಿದರು. ಹೀಗೆ ಇವರ ತಂತ್ರಜ್ಞಾನ ಬೆಳೆದ ಹಾಗೆ ಸರಳವಾಗಿ ಸಿಗುವ ನೀರಿನ ಅನುಕೂಲ ಪ್ರದೇಶಗಳಿಂದ ಬಿಟ್ಟು ಯಾವ ಪ್ರದೇಶದಲ್ಲಿಯಾದರೂ ಜೀವಿಸಬಹುದು. ಅಲ್ಲಿ ನೀರನ್ನು ಶೋಧಿಸಿ ಉಪಯೋಗಿಸಬಹುದೆಂದು ಗುರುತಿಸಿ ಬೇರೆ ಕಡೆಗೆ ವಲಸೆಯೂ ಸಹ ಮಾಡತೊಡಗಿದ್ದರು. ಹೀಗೆ ತಮ್ಮ ಪರಿವರ್ತನೆಯ ಜೀವನದ ಜೊತೆ ಹೊಸ ಮಾದರಿಯ ಘಟ್ಟಗಳನ್ನು ಕಂಡುಕೊಳ್ಳುತ್ತಲೇ ಬಂದರು. ಬೀಜಗಳನ್ನು ತಮ್ಮ ಮುಂದಿನ ದಿನಗಳ ಆಹರಕ್ಕಾಗಿ, ಸಂಗ್ರಹಿಸಿಡುವ ಬುದ್ಧಿ ಬರತೊಡಗಿತು. ಬೀಜಗಳಿಂದ ಆಹಾರದ ಬಹುಮಹತ್ವದ ಅಂಶ ಅರಿತಾಗ ಅದು ಕಡಿಮೆ ಬಿದ್ದವರಿಗೆ ಅಥವಾ ಇಲ್ಲದವರಿಗೆ ಇದ್ದುದನ್ನು ವಿನಿಮಯ ಮಾಡತೊಡಗಿದರು. ಇದರಿಂದ ಸಹಕಾರತ್ವ ಸಹಬಾಳ್ವೆ ಮತ್ತು ಏಕತೆಯ ಛಾಯೆಯ ಜೊತೆ ಹೆಚ್ಚಾಗಿ ಸಂಗ್ರಹಿಸಿಡುವ ಆಸೆಗಳು ಸಹ ಹೊಂದತೊಡಗಿದರು. ಅದರಲ್ಲಿ ಹಣ ಅಥವಾ ನಾಣ್ಯವು ಒಂದು ವಿನಿಮಯ ರೂಪದ ಸಂಕೇತವಾಗಿ ಬಳಸತೊಡಗಿದರು. ಜೀವನದ ರೂಪರೇಷಗಳಲ್ಲಿ ಪರಿವರ್ತನೆಯ ಕಾಲಾವಧಿಯ ಜೊತೆ ಸ್ವಾರ್ಥ ಜೀವನಕ್ಕೆ ಅಂಟಿಕೊಳ್ಳಲಾರಂಭಿಸಿತು.

ಮಾನವರು ತಮ್ಮ ಅನುಕೂಲ, ಅವಕಾಶ, ಸುಖ ಸಮೃದ್ಧಿಯ ಜೀವನಕ್ಕಾಗಿ ಸಹಕಾರ, ಸಹಬಾಳ್ವೆ ಜೊತೆ ಸ್ಪರ್ಧೆ, ಸಂಘರ್ಷಗಳು ಹುಟ್ಟಿಕೊಂಡವು. ಈ ಹಂತದಿಂದ ಶಕ್ತಿ ಸಾಮರ್ಥ್ಯವಿದ್ದವರಿಗೆ ಸಂಪತ್ತು ಸೌಲಭ್ಯದ ಅವಕಾಶ ಸಿಕ್ಕರೆ, ಅಶಕ್ತರಿಗೆ ಏನು ಸಿಗದೆ ಹೋಯಿತು. ಇದರಿಂದ ಎರಡು ಬಲಗಳು ಹುಟ್ಟಿಕೊಂಡವು. ಶಕ್ತಿಯ ಬಲಗಳು ಮತ್ತು ದುರ್ಬಲ ಬಲಗಳು. ಈ ಬಲಗಳಿಂದ ವರ್ಗ ಅಸಮಾನತೆ ಸೃಷ್ಟಿಯಾಗಿ ಶ್ರೀಮಂತ ಬಡವ ಶ್ರೇಣೀಕರಣವಾದರೆ ಸಾಮಾಜಿಕವಾಗಿ ಮೇಲು ಕೀಳುಗಳು ಹುಟ್ಟಿಕೊಂಡವು. ಇದರಿಂದ ಜಾತಿಗಳು ಸಹ ವೃತ್ತಿಗನುಗುಣವಾಗಿ ಸಮಾಜದಲ್ಲಿ ಹಂಚಿಕೆಯಾದವು. ಕುಟುಂಬದಲ್ಲಿಯೂ ಸಹ ಪುರುಷರು ಮಹಿಳೆಯರ ಮೇಲೆ ತಮ್ಮ ನಿಯಂತ್ರಣವನ್ನು ಸಾಧಿಸತೊಡಗಿದರು. ಮನೆಯ ನೆಲೆಯಿಂದ ಕಾರ್ಯಕ್ಷೇತ್ರಗಳು ಕೂಡ ವಿಭಜನೆಯಾದವು. ಇದಕ್ಕೆ ಪೂರ್ವದಲ್ಲಿ ಸ್ತ್ರೀ ಪುರುಷರಿಗೆ ಸಮಾನ ಅವಕಾಶಗಳಿದ್ದವು ಸ್ವತಂತ್ರ್ಯವಿತ್ತು, ಕೆಲಸ ಕಾರ್ಯದಲ್ಲಿ ಸಮಾನ ಹಂಚಿಕೆಗಳಿದ್ದವು.

ಸಮಾಜ ಕುಟುಂಬ ವಿಸ್ತರಿಸಿದ ಹಾಗೆ ಶ್ರಮ ವಿಭಜನೆಯ ಗಾಢವಾಗಿ ಹುಟ್ಟಿಕೊಳ್ಳುತ್ತಾ ಬಂದಿತು. ಕುಟುಂಬದಲ್ಲಿ ಗಂಡು ಮತ್ತು ಹೆಣ್ಣಿನ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಅನಾನುಕೂಲಕರವಾದ ವಾತಾವರಣವಿರುವುದರಿಂದ ಗಂಡು ಮಾತ್ರ ದುಡಿಯಲು ಪ್ರಾರಂಭಿಸಿದನು. ಏಕೆಂದರೆ ಮಹಿಳೆಯು ಸಂತಾನೋತ್ಪತ್ತಿಯ ಪ್ರಮುಖ ರುವಾರಿಯೆಂಬುದು ಅಂದಿನ ಭಾವನೆಯಾಗಿತ್ತು. ಸಂತಾನೋತ್ಪತ್ತಿಯ ನಂತರ ಹಲವು ದಿನಗಳವರೆಗೆ ಮಕ್ಕಳನ್ನು ಪೋಷಿಸಿ ಬೆಳೆಸುವ ಭಾರ ಮಹಿಳೆಯದ್ದಾಗಿದ್ದರಿಂದಾಗಿ ಅವಳು ಮನೆಯಲ್ಲಿಯೇ ಇರುವಂತಹ ಸಂದರ್ಭವನ್ನು ಅವಳಿಗೆ ಒದಗಿಸಿಕೊಡಲಾಯಿತು. ಏಕೆಂದರೆ ಸಂತಾನೋತ್ಪತ್ತಿಯ ದಿನಗಳಲ್ಲಿ ಮಹಿಳೆಯು ದೈಹಿಕವಾಗಿ ದುರ್ಬಲಳಾಗಿರುತ್ತಾಳೆ. ಎಂಬುದು ಅಂದಿನ ನಂಬಿಕೆಯಾಗಿತ್ತು. ಅಲ್ಲದೇ ಯಾವುದೇ ರೀತಿಯ ಕಷ್ಟಕರವಾದ ಕೆಲಸಗಳನ್ನು ಮಾಡುವ ಸಾಮರ್ಥ್ಯ ಅವಳಿಗಿರುವುದಿಲ್ಲ ಎಂಬ ಕಾರಣಕ್ಕಾಗಿ ಮಕ್ಕಳ ಪೋಷಣೆ ಮತ್ತು ಗೃಹಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಮಹಿಳೆಗೆ ವಹಿಸಿಕೊಡಲಾಯಿತು.

ಆದರೆ ಇನ್ನೊಂದು ಗಮನಿಸಬೇಕಾದ ಅಂಶವೇನೆಂದರೆ ಮದುವೆಗೂ ಮುಂಚೆ ಮಹಿಳೆಯು ಗಂಡಸಿಗೆ ಸಮಾನವಾದ ಎಲ್ಲಾ ಕಾರ್ಯಗಳನ್ನು ಮಾಡುತ್ತಿದ್ದಳು ಎನ್ನುವುದು ಗಮನಾರ್ಹ ಅಂಶವಾಗಿದೆ.

ಈ ರೀತಿಯಲ್ಲಿ ಮಹಿಳೆಗೆ ಸಂತಾನೋತ್ಪತ್ತಿಯ ಕಾರಣದಿಂದಾಗಿ ಗೃಹಕೃತ್ಯಕ್ಕೆ ನಿಗದಿ ಪಡಿಸಿ ಮಹಿಳೆಯರನ್ನು ಅದನ್ನೇ ರೂಢಿಯಾಗಿ ಅಳವಡಿಸಿಕೊಂಡು ಇಂದಿನವರೆಗೂ ಜಾರಿಯಲ್ಲಿಟ್ಟಿರುವುದು ದುರದೃಷ್ಟಕರ ಸಂಗತಿಯಾಗಿದೆ. ಪುರುಷರು ಮಹಿಳೆಯರ ಸಂತಾನೋತ್ಪತ್ತಿಯ ಕಾರಣವನ್ನು ಎತ್ತಿಹಿಡಿದು ಅದರ ಕಾರಣದಿಂದಾಗಿ ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ಪ್ರಮುಖ ಕಾರ್ಯಗಳನ್ನು ಅಂದರೆ ಬಲಿಷ್ಠ ಕಾರ್ಯಗಳನ್ನು ತಮ್ಮದಾಗಿಸಿಕೊಂಡು ಮಹಿಳೆಯರಿಗೆ ಸುಲಭವಾದ ಮತ್ತು ಲಾಭದಾಯಕವಲ್ಲದ ಕಾರ್ಯಗಳು ಮೀಸಲು ಮಾಡಿ ಪುರುಷರನ್ನು ಅವಲಂಬಿಸಿರುವ ಹಾಗೆ ಪೂರಕವಾದ ಎಲ್ಲಾ ಕಾರ್ಯಗಳನ್ನು ವಹಿಸಿ ಕೊಟ್ಟಿರುವುದನ್ನು ನಾವು ಕಾಣುತ್ತೇವೆ. ಇದರಿಂದ ಪುರುಷರ ಕುತಂತ್ರದ ಪರಿಪಾಟಲುಗಳು ಅರ್ಥವಾಗುತ್ತದೆ.

ಹೆಣ್ಣು ಗಂಡಿನಷ್ಟೆ ಬಲಿಷ್ಟಳು. ಇತರೆ ಕಾರ್ಯಗಳು ಸಮನಾಗಿ ಮಾಡುತ್ತಾಳೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದ್ದರೂ ಅವಳ ಪ್ರಾಬಲ್ಯವನ್ನು ಹೆಚ್ಚಿಸುವ ದೃಷ್ಟಿಯಲ್ಲಿ ಅವಳಿಗೆ ಅನಾನುಕೂಲಕರವಾದ ಯಾವುದೇ ರೀತಿಯ ಅವಕಾಶವನ್ನು ಪುರುಷನಿಂದ ಅವಳಿಗೆ ದೊರೆತಿಲ್ಲದಿರುವುದು ಮೇಲ್ನೋಟಕ್ಕೆ ತಿಳಿದುಬರುವ ವಿಷಯವಾಗಿದೆ. ಮಹಿಳೆಯು ಗೃಹಕೃತ್ಯಕ್ಕೆ ಸಂಬಂಧಿಸಿದಂತೆ ಹಲವಾರು ಕಾರ್ಯಗಳನ್ನು ಕೈಗೊಳ್ಳುತ್ತಾಳೆ. ಮಕ್ಕಳ ಪೋಷಣೆ, ಅಡುಗೆ ಮಾಡುವುದು, ಸೌದೆ ತರುವುದು, ಗಂಡನ ಸೇವೆ, ಹಿರಿಯರ ಸೇವೆ, ಹೊಲದ ಕೆಲಸ, ಹೈನುಗಾರಿಕೆ, ಮೇವು ತರುವುದು, ಇವೆಲ್ಲವನ್ನು ನಿರ್ವಹಿಸುವ ಮಹಿಳೆಯು ಅದಕ್ಕೆ

ಪ್ರತಿಫಲವಾಗಿ ಯಾವುದೇ ಸಂಭಾವನೆಯನ್ನು ಪಡೆಯಲು ಅನರ್ಹಳಾಗಿದ್ದಾಳೆ. ಇದಕ್ಕೆ ಮುಖ್ಯ ಕಾರಣ ಇವುಗಳು ಗೃಹಪಯೋಗಕ್ಕಾಗಿ ಮಾಡುವ ಕಾರ್ಯಗಳಾಗಿವೆ ಎಂಬುದು ತಿಳಿಯಬೇಕಾದ ಅಂಶ. ಇದಕ್ಕಾಗಿ ಈ ಎಲ್ಲಾ ಕಾರ್ಯಗಳು ಉತ್ಪಾದನಾ ಕಾರ್ಯದ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುವುದಿಲ್ಲ. ಗಂಡು ಮಾಡುವ ಕಾರ್ಯಗಳು ಮನೆಯ ಹೊರಗಡೆಯ ಕಾರ್ಯಗಳಾಗಿದ್ದು, ಅವನು ಮಾಡುವ ಎಲ್ಲಾ ಕಾರ್ಯಗಳಿಗೆ ಪ್ರತಿಫಲವಾಗಿ ಸಂಭಾವನೆಯನ್ನು ಪಡೆಯುತ್ತಾನೆ. ಅದಕ್ಕಾಗಿ ಅವನು ಮಾಡುವ ಕಾರ್ಯಕ್ಕೆ ಉತ್ಪಾದಕ ಕೆಲಸವೆಂದು ಹೇಳಲಾಗುತ್ತದೆ. ಆದರೆ ಮಹಿಳೆ ಮಾಡುವ ಕೆಲಸವನ್ನು ಅನುತ್ಪಾದಕ ಕೆಲಸವೆಂದು ಹೇಳಲಾಗುತ್ತದೆ. ಇದರಲ್ಲಿ ಮಹಿಳೆಯರ ಕಾರ್ಯವು ಪ್ರಮುಖವಾಗಿದ್ದರು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಯಾಕೆಂದರೆ ಅದು ಅಗೋಚರವಾದುದಾಗಿರುತ್ತದೆ. ಈ ರೀತಿಯಲ್ಲಿ ಮಹಿಳೆಯರನ್ನು ಗೃಹಕೃತ್ಯಕ್ಕೆ ಸೀಮಿತವಾಗಿ ಮಾಡಿರುವುದು ಸ್ತ್ರೀ ಪುರುಷರ ತಾರತಮ್ಯಕ್ಕೆ ಕಾರಣವಾಗಿದೆ. ಈ ರೀತಿಯಲ್ಲಿ ಮಾಡಬಹುದಾದ ಶ್ರಮ ವಿಭಜನೆಯಿಂದಾಗಿ ಮಹಿಳೆಯು ಆರ್ಥಿಕ ಕ್ಷೇತ್ರದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳದೆ ಹೋಗಿದ್ದು ಪುರುಷನು ಮಾತ್ರ ಆರ್ಥಿಕ ಕ್ಷೇತ್ರದಲ್ಲಿ ಮೇಲ್ಪಂಕ್ತಿಯಲ್ಲಿ ಮಿನುಗುತ್ತಿರುವುದನ್ನು ಕಾಣುತ್ತೇವೆ. ಇದೆ ಕಾರಣದಿಂದ "ಅರ್ಥಶಾಸ್ತ್ರವು ಏಕಲಿಂಗ ಆಧಾರಿತ ವಿಷಯವಾಗಿದೆಯೆಂದು ಹೇಳಬಹುದಾಗಿದೆ."[೩] ಮಹಿಳೆಯು ಮಾಡುವ ಎಲ್ಲಾ ಕಾರ್ಯಗಳು ಪುರುಷರಿಗಿಂತ ಅಧಿಕವಾಗಿದ್ದರೂ ಕೂಡ ಅನುತ್ಪಾದಕವೆಂದು ಹಣೆಪಟ್ಟಿ ಹಚ್ಚಿ ರಾಷ್ಟ್ರೀಯ ಆದಾಯದ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಇದರಿಂದ ಮಹಿಳೆಯು ಆರ್ಥಿಕ ಕ್ಷೇತ್ರದಲ್ಲಿ ಅವಳ ಕೊಡುಗೆಯೇನು ಇಲ್ಲವೆಂದು ಪರಿಗಣಿಸಿದಂತಾಗಿದೆ. ಇದು ಕೂಡ ಲಿಂಗ ತಾರತಮ್ಯ ವ್ಯತ್ಯಾಸವನ್ನು ಕಾಣಬಹುದು.

ಮಹಿಳೆಯರನ್ನು ಗೃಹಕೃತ್ಯಗಳಿಗೆ ಸೀಮಿತಳನ್ನಾಗಿ ಆರ್ಥಿಕತೆಯಿಂದ ದೂರವಿರಿಸುವುದರ ಮೂಲಕವಾಗಿ ಅವಳು ಸಾಮರ್ಥ್ಯಹೀನಳು ಅಥವಾ ದುರ್ಬಲಳು ಎಂಬ ಪಟ್ಟಿಯನ್ನು ಅವಳಿಗೆ ಅಂಟಿಸುತ್ತಾರೆ. ಆರ್ಥಿಕವಾಗಿ ದುರ್ಬಲಳಾಗುವಂತೆ ಮಾಡಲಾಗಿ ಆರ್ಥಿಕ ವಹಿವಾಟನ್ನೆಲಾ ಅಂದರೆ ಮನೆಯನ್ನು ನಡೆಸುವ ಎಲ್ಲಾ ಪ್ರಮುಖ ಜವಬ್ದಾರಿಯನ್ನು ಪುರುಷರೇ ಹೊಂದಿದ್ದಾರೆ. ಆದರೆ ಹೆಣ್ಣು ಗಂಡಿನ ಆಧೀನಳಾಗಿ, ತಾಯಿಯಾಗಿ, ಮಕ್ಕಳ ಪೋಷಕಳಾಗಿ ಮಾತ್ರ ಕೆಲಸಗಳನ್ನು ಮಾಡುವಂತಾಗಿದೆ.

ಮಹಿಳೆಯು ಆರ್ಥಿಕ ಚಟುವಟಿಕೆ ಅಥವಾ ಉದ್ಯೋಗಗಳನ್ನು ಮಾಡಲು ಅಸಮರ್ಥಳು ಎಂದು ಹೇಳಿದಾಗಲೂ ಇಂದಿನ ದಿನದಲ್ಲಿ ಮಹಿಳೆಯು ಸಂಪಾದನೆ ಹೆಚ್ಚು ಇಲ್ಲದಿದ್ದಾಗ ಬಡತನದ ಕಾರಣದಿಂದಾಗಿ ಹೆಣ್ಣು ಕೂಡ ಕೆಲಸಗಳನ್ನು ಮಾಡುವ ಸಂದರ್ಭಗಳನ್ನು ಇಂದು ಕಾಣಬಹುದಾಗಿದೆ. ಮಹಿಳೆಯು ಸಂಭಾವನೆಯನ್ನು ಪಡೆಯುವ ಹತ್ತಾರು ಕೆಲಸಗಳನ್ನು ಮಾಡುತ್ತಿದ್ದಾಳೆ. ಅವುಗಳೆಂದರೆ ಮನೆಕಟ್ಟಲು, ಸಹಾಯಕಳಾಗಿ, ಬಿತ್ತನೆ ಕೆಲಸ, ಕೊಯ್ಲಿಗೆಯ ಕೆಲಸ, ಬೀಡಿ ಕಟ್ಟುವುದು, ಹಪ್ಪಳ ತಯಾರಿಕೆ ಇನ್ನಿತರವಾಗಿ ಮಹಿಳೆಯರು ತೆಗೆದುಕೊಳ್ಳುವ ಆದಾಯವಾದರೂ, ಅದು ಅತ್ಯಲ್ಪ ಪ್ರಮಾಣದ್ದಾಗಿರುತ್ತದೆ. ಅಂದರೆ ಅವಳ

ಕೆಲಸಕ್ಕೆ ತಕ್ಕ ಪ್ರತಿಫಲ ಅವಳಿಗೆ ದೊರೆಯದಿರುವುದು ದುರದೃಷ್ಟಕರ ಸಂಗತಿಯಾಗಿದೆ. ಈ ಎಲ್ಲಾ ಪ್ರಮಾಣದಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚಿನ ಸಮಯದಲ್ಲಿ ಕೆಲಸವನ್ನು ಮಾಡುತ್ತಾರೆ. ಅದಾಗ್ಯೂ ಅವರು ಪಡೆಯುವ ಸಂಭಾವನೆ ಮಾತ್ರ ಪುರುಷರಿಗಿಂತ ಕಡಿಮೆಯಾಗಿರುತ್ತದೆ. ಇದು ಹೆಣ್ಣು ಅಸಮರ್ಥಳು ಎಂಬ ತಿಳಿಸುವ ಮಾದರಿಯಾಗಿವೆ. ಈ ರೀತಿ ಗಂಡು ಹೆಣ್ಣಿನಲ್ಲಿ ವೇತನದಲ್ಲಿ ಮಾಡುವ ತಾರತಮ್ಯವಾಗಿದೆ.

ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಹಿಳಾ ಕೆಲಸಗಾರರು ಅಧಿಕವಾಗಿದ್ದು, ಇಂದಿನ ದಿನದಲ್ಲಿ ಅವರೆಲ್ಲರು ಅಸಂಘಟಿತ ಕ್ಷೇತ್ರದಲ್ಲಿ ಸಂಘಟಿತರಾಗಿರುವುದನ್ನು ಕಾಣುತ್ತೇವೆ. ಆದರೆ ಪುರುಷರು ಸಂಘಟಿತ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಮದಲ್ಲಿ ಕೇಂದ್ರಿಕೃತವಾಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ಹೆಣ್ಣು ಸಂತಾನೋತ್ಪತ್ತಿಯ ದಿನಗಳನ್ನು ಹೊಂದಿರುವುದರಿಂದ ಅವಳಿಗೆ ವಿಶ್ರಾಂತಿಯ ದಿನಗಳು ಅವಶ್ಯಕತೆ ಇರುತ್ತದೆ. ಅದರಿಂದಾಗಿ ಅವಳು ದೀರ್ಘಾವಧಿಯವರೆಗೆ ಕೆಲಸ ಮಾಡಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಮಕ್ಕಳ ಪೋಷಣೆಗಾಗಿ ಸಮಯದ ಅವಶ್ಯಕತೆ ಇರುವುದರಿಂದ ಗೃಹಕೃತ್ಯಗಳ ಭಾರ ಹೆಚ್ಚಾಗಿರುವುದರಿಂದ ಅಲ್ಲದೆ ಇನ್ನಿತರೆ ಕಾರಣದಿಂದಾಗಿ ವರ್ಷವಿಡೀ ಕೆಲಸ ಮಾಡಲು ಸಾಧ್ಯವಿಲ್ಲ ಎಂಬ ಕಾರಣಕ್ಕಾಗಿ ಅವಳಿಗೆ ಸಂಘಟಿತ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸಲಾಗಿಲ್ಲ. ಆದರೆ ಪುರುಷನು ವರ್ಷದ ಎಲ್ಲಾ ದಿನಗಳಲ್ಲಿ ಕೆಲಸ ಮಾಡಲು ಸಮರ್ಥನೆಂಬುದನ್ನು ಮನಗಂಡು ಸಂಘಟಿತ ಕ್ಷೇತ್ರದಲ್ಲಿ ಹೆಚ್ಚಿನ ಪ್ರಾತಿನಿಧ್ಯ ದೊರಕಿಸಿ ಕೊಡಲಾಗಿದೆ. ಅಲ್ಲದೆ. ಇನ್ನೊಂದು ಪ್ರಮುಖ ಕಾರಣ ಮಹಿಳೆಯ ಸಂಘಟಿತ ಕ್ಷೇತ್ರದಲ್ಲಿ ಅವಶ್ಯವಾದ ಕೌಶಲ್ಯ ಹಾಗೂ ತರಬೇತಿ ಮತ್ತು ವಿದ್ಯಾರ್ಹತೆಯನ್ನು ಮಹಿಳೆಯರು ಹೆಚ್ಚಾಗಿ ಹೊಂದಿರುವುದಿಲ್ಲ ಎಂಬ ಕಾರಣಕ್ಕಾಗಿ ಸಂಘಟಿತ ವಲಯದಲ್ಲಿ ಅವಳಿಗೆ ಅವಕಾಶಗಳಿಂದ ವಂಚಿತಳನ್ನಾಗಿ ಮಾಡಲಾಗಿದೆ. ಅಸಂಘಿತ ಕ್ಷೇತ್ರದಲ್ಲಿ ಕೌಶಲ್ಯ ಮತ್ತು ತರಬೇತಿಯ ಅವಶ್ಯಕತೆ ಇರುವುದಿಲ್ಲ ಹಾಗೂ ಈ ಕ್ಷೇತ್ರದಲ್ಲಿ ವೇತನವು ಅತ್ಯಂತ ಕಡಿಮೆ ಇರುತ್ತದೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಗಂಡಸಿಗೂ ಕೂಡ ಹೆಚ್ಚಿನ ವೇತನ ಅಥವಾ ಸಂಭಾವನೆಯನ್ನು ನೀಡುವುದರ ಮೂಲಕವಾಗಿ ಗಂಡು ಹೆಣ್ಣಿನ ನಡುವೆ ತಾರತಮ್ಯವನ್ನು ನೆಲೆನಿಂತಿದೆ. ಇಲ್ಲಿ ಹೇಳಲಾದ ಹೆಚ್ಚಿನ ವಿಷಯಗಳಿಂದ "ಮಹಿಳೆಯು ಆರ್ಥಿಕವಾಗಿ ಅಸಮರ್ಥಳು ಎಂಬುದನ್ನು ಮನಗಾಣುವುದಕ್ಕಿಂತ ಮುಂಚೆಯೇ ಅವಳನ್ನು ಅದರಿಂದ ದೂರ ಮಾಡಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಪುರುಷನು ಆರ್ಥಿಕ ಬಲದ ಮೇಲೆ ಹತೋಟಿಯನ್ನು ಸಾಧಿಸಿರುವುದು ಸಾಧ್ಯವಾಗಿದೆ."[೨]

ಆರ್ಥಿಕ ಚಟುವಟಿಕೆಗೆ ಸಂಬಂಧಿಸಿದಂತೆ ಮಹಿಳೆಯ ಅಪ್ರಯೋಜಕಳಾಗಿ ಗೋಚರವಾಗುತ್ತಾಳೆ ಎಂಬುದು ತಿಳಿದುಕೊಳ್ಳಾಯಿತು. ಉತ್ಪಾದನೆ, ಸಂತಾನೋತ್ಪತ್ತಿ ಇತರ ಪ್ರಮುಖ ಕಾರ್ಯಗಳು ಪ್ರಕ್ಕಟೆ ಕಾರ್ಯಕ್ಷೇತ್ರಗಳಾಗಿ ರೂಪತಾಳಿದ್ದು ಆರ್ಥಿಕ ಸ್ವಾತಂತ್ರ ಸ್ವಾವಲಂಬಿ ಜೀವನಕ್ಕೆ ಪುರುಷನ ಅಡಿಯಲ್ಲಿ ವ್ಯವಸ್ಥಿತವಾಗಿ ಬದುಕಲು ನೆಲೆಗೊಳಿಸಿರುವುದು ತಿಳಿದುಕೊಳ್ಳಲಾಯಿತು. ಇತ್ತೀಚೆಗೆ ಸ್ತ್ರೀವಾದಿಗಳು ಮನೆ ಕೆಲಸಕ್ಕೆ ಮೌಲ್ಯವನ್ನು ನಿಗದಿಮಾಡಲು ಬೇಡಿಕೆ ನೀಡುತ್ತಿರುವುದು ಸಂತೋಷದ ಸಂಗತಿಯಾಗಿದ್ದು. ಮಹಿಳೆಯ ಕಾರ್ಯಕ್ಷೇತ್ರಗಳು

ವಿಸ್ತಾರವಾಗಿ ಕಷ್ಟಕೋಟಲೆಗಳು ತುಂಬಿಹೋಗಿವೆ ಎಂದು ಬಹಳಷ್ಟು ಪುರುಷರಿಗೆ ತಿಳಿದೆ ಇರುವುದು ದುರದುಷ್ಟಕರ. ಹಾಗೆ ಮಹಿಳೆಯು ತಮ್ಮ ಕಾರ್ಯಕ್ಷೇತ್ರದ ಬಗ್ಗೆ ಜಿಗುಪ್ಸೆ ಬೇಸರಗಳು ಇದ್ದರು. ವಿವಿಧ ವಲಯಗಳಲ್ಲಿ ಇದನ್ನು ಗುರುತಿಸಿ ಅನಿವಾರ್ಯವಾಗಿ ಎದುರುತ್ತರ ನೀಡುವ ಹಾಗಿಲ್ಲ. ನೀಡಿದರೆ ಬದುಕ ಕಷ್ಟಕರವಾಗಿ ತನ್ನ ಅಸ್ತಿತ್ವಕ್ಕಾದರೂ ಸ್ವಸ್ವಾತಂತ್ರ್ಯವನ್ನು, ಆಸೆ-ಆಕ್ಷಾಂಕೆಯನ್ನು ಬದಿಗೊತ್ತಿ ಬದುಕುತ್ತಿದ್ದಾಳೆ ಎನ್ನುವುದು ಸತ್ಯ. ಉನ್ನತ ವರ್ಗದಲ್ಲಿ ಕೆಳವರ್ಗದವರಲ್ಲಿ ಬೇರೆ ಬೇರೆ ಪ್ರಮಾಣದ ವ್ಯತ್ಯಾಸಗಳು ಇವೆ. ಮಹಿಳೆಗೆ ಉನ್ನತ ವರ್ಗದಲ್ಲಿ ಅಧಿಕಾರ ಜವಾಬ್ದಾರಿಯ ಹುದ್ದೆಯು ಇದ್ದರೂ ಸಹ ಅದಕ್ಕೆ ತದ್ವಿರುದ್ಧ ವಿಚಾರಗಳೆ ಪುರುಷರ ಒಳಮನಸ್ಸಿನಲ್ಲಿ ಒಳಮೂಡಿವೆ. ಮನೆಕೆಲಸ ಹೊರಗಿನ ಕೆಲಸ ಇಬ್ಬಗೆಯಾಗಿಯೂ ನಿರ್ವಹಿಸಬೇಕಾದ ಹಂತಗಳು ಮಹಿಳೆಗೆ ಮಾತ್ರ ಮೀಸಲು ಮಾಡಿರುವುದು ಕಾಣುತ್ತೇವೆ. ಇಲ್ಲಿ ಪುರುಷ ಉದ್ಯೋಗದಲ್ಲಿದ್ದರೆ ಅಥವಾ ಇಲ್ಲದಿದ್ದರೆ ಅವನು ಮಹಿಳೆಗೆ ಹಣೆಪಟ್ಟಿ ಹಚ್ಚಿರುವ ಮನೆಕೆಲಸದಲ್ಲಿ ನಿರುತ್ಸಾಹ. ಸಂಕೋಚ ತಾತ್ಸಾರಗಳು ಒಳಮೂಡಿರುವುದರಿಂದ ಪುರುಷನು ಮನೆಕೆಲಸದಲ್ಲಿ ನಿರಾಕರಣೆ ಮಾಡುತ್ತಾನೆ. ದ್ವಿಮುಖ ಪಾತ್ರದಲ್ಲಿ ಮಹಿಳೆ ಮಾತ್ರ ದುಡಿಯಬೇಕಾದದ್ದು ಉನ್ನತ ವರ್ಗದಲ್ಲಿಯೂ ಸಹ ಇದೆ. ಕೆಳವರ್ಗದಲ್ಲಿ ನೋಡಬೇಕಾದರೆ ಇಲ್ಲಿ ಪುರುಷರೇ ಆರ್ಥಿಕ ಕಡಿವಾಣದಲ್ಲಿ ಕುಂಠಿತರಾಗಿದ್ದು, ಅಶಕ್ತನಾಗಿದ್ದರೆ ಮಹಿಳೆಗೆ ಅದು ಊಹಿಸದಷ್ಟು ಹೇಳಿಕೆಯಲ್ಲಿ ಇರುತ್ತಾಳೆ. ಅವಳ ಕಾರ್ಯಗಳು ಯಂತ್ರವಂತೆ ಹಗಲಿರುಳು ನಡೆದೇ ಇರುತ್ತವೆ ಎಂದರೆ ತಪ್ಪಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಕೃಷಿಗೆ ಸಂಬಂಧಿಸಿದ ಕೂಲಿಗಾಗಿ ಮಹಿಳೆ ಮತ್ತು ಪುರುಷರು ಸಾಮಾನ್ಯವಾಗಿ ಬೆಳಗಿನ ಜಾವದಲ್ಲಿ ಹೋಗಬೇಕಾದ ಅನಿವಾರ್ಯತೆಗಳು ಇರುತ್ತವೆ. ಅಂತಹ ಸಂದರ್ಭದಲ್ಲಿ ಮಹಿಳೆ ನಡುರಾತ್ರಿಯಲ್ಲಿ ಎದ್ದು ಅಡಿಗೆ, ಅವರಸದ ಮನೆಕೆಲಸಗಳು ಮಾಡಿ ದುಡಿಯಲು ಸಿದ್ಧಗೊಳ್ಳಲು ಪೂರ್ವಪರವಾಗಿ ತನ್ನ ಕಾರ್ಯಗಳು ಬಾಕಿ ಇಲ್ಲದ ಹಾಗೆ ನಿರ್ವಹಿಸುತ್ತಿರುತ್ತಾಳೆ.

ಕೆಳವರ್ಗದಲ್ಲಿ ಪುರುಷ ತನ್ನ ಸಮಯಕ್ಕೆ ಎದ್ದು ನೇರವಾಗಿ ತನ್ನ ಪಾತ್ರದಲ್ಲಿ ಮಾತ್ರ ಸಿದ್ಧಗೊಳ್ಳುತ್ತಿರುತ್ತಾನೆ. ಇಲ್ಲಿ ಮುಖ್ಯವಾಗಿ ಸ್ತ್ರೀ, ಪುರುಷರಲ್ಲಿ ರಚನೆಗೊಂಡಿರುವ ಸಾಮಾಜಿಕ ಪ್ರಕ್ರಿಯೆಯು ಪುರುಷ ಚಿಂತನೆಯಲ್ಲಿಯೇ ಒಳಪಟ್ಟಿರುವುದರಿಂದ ಆರೋಗ್ಯಪೂರ್ಣವಾದ ಸಮಾಜ ನಿರ್ಮಾಣ ಮಾಡಲು, ರಾಷ್ಟ್ರದ ಅಭಿವೃದ್ಧಿ ಸಾಧಿಸಲು ಮಂದಗತಿಯ ಮುಂಚೂಣಿಯು ಸಾಧ್ಯವಾಗುತ್ತದೆ.

ಸಾಮಾಜಿಕ ವ್ಯವಸ್ಥೆ ಮತ್ತು ಲಿಂಗ ತಾರತಮ್ಯ

ಮಾನವರ ಪೂರ್ವದಲ್ಲಿ ಶ್ರಮ ವಿಭಜನೆಯ ತಾತ್ವಿಕತೆಯಿಂದ ಉದ್ಭವವಾದ ತಾರತಮ್ಯವು. ಕುಟುಂಬ, ಶಿಕ್ಷಣ, ಧರ್ಮ, ಸಂಸ್ಕೃತಿ, ಇನ್ನಿತರ ವಲಯಗಳಲ್ಲಿಯೂ ವಿಸ್ತರಿಸಿ ಬಿಟ್ಟಿದೆ. ಸಮಾಜವು ಮಾನವರಿಂದ ರಚಿಸಲ್ಪಟ್ಟು ಮೂಲಭೂತ ಪರಿಕಲ್ಪನೆಗಳಲ್ಲಿ ಸಾಮಾಜಿಕ ಸಂಸ್ಥೆಯು ಒಂದಾಗಿದೆ. ಸಮಾಜದ ಅಧ್ಯಯನವನ್ನು

ಕೈಗೊಳ್ಳಬೇಕಾದರೆ ಅದಕ್ಕಿಂತ ಮೊದಲು ಅದು ಒಳಗೊಂಡಿರುವ ಸಂಸ್ಥೆಗಳನ್ನು ಕುರಿತು ಅಧ್ಯಯನಿಸುವುದು ಅವಶ್ಯವಾಗಿರುತ್ತದೆ. ಸಮಾಜವು ಅದು ಹೊಂದಿರುವ ಸಂಸ್ಥೆಗಳಿಂದ ನಿರ್ಧರಿಸಲ್ಪಡುತ್ತದೆ. ಸಮಾಜದ ರೂಪರೇಷಗಳು ಮುಂದುವರಿಯುಲು ವ್ಯಕ್ತಿಗಳ ಪಾತ್ರವು ಮುಖ್ಯವಾಗಿರುತ್ತದೆ. ಇದರ ಅವಶ್ಯವಾದ ಹಲವಾರು ಅಂಶಗಳನ್ನು ಈ ಸಂಸ್ಥೆಗಳ ಮೂಲಕವಾಗಿ ತಿಳಿಯುತ್ತಾರೆ, ಕಲಿಯುತ್ತಾರೆ ಮತ್ತು ರೂಢಿಸಿಕೊಳ್ಳುತ್ತಾರೆ. ಈ ಪರಿಕಲ್ಪನೆಗೆ ಪೂರಕವಾಗಿ ಸಂಸ್ಥೆಗಳ ಅರ್ಥವನ್ನು ತಿಳಿದುಕೊಳ್ಳುವುದು ಅವಶ್ಯವಾಗಿರುತ್ತದೆ.

"ಸಂಸ್ಥೆ ಎಂಬ ಪದವು ಆಂಗ್ಲಭಾಷೆಯ ಇನ್ಸ್‌ಟಿಟ್ಯೂಷನ್ ಎಂಬ ಪದದ ಕನ್ನಡ ಭಾಷಾಂತರವಾಗಿದೆ. ಸಂಸ್ಥೆ ಎಂದರೆ ಸ್ಥಾಪಿತ ನಿಯಮ ಪದ್ಧತಿ ಅಥವಾ ನಿರ್ದಿಷ್ಟವಾದ ಉದ್ದೇಶವನ್ನು ಸ್ಥಾಪಿಸಲು ಅಸ್ತಿತ್ವಕ್ಕೆ ಬಂದಂತಹ ವ್ಯವಸ್ಥೆ"[೪] ಯಾಗಿದೆ.

ಸಂಸ್ಥೆಗಳ ಕುರಿತು ಹಲವಾರು ಸಮಾಜಶಾಸ್ತ್ರಜ್ಞರು ವಿವಿಧ ರೀತಿಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಸಾಮಾನ್ಯವಾದ ಅರ್ಥದಲ್ಲಿ ಹೇಳುವುದಾರೆ ಕುಟುಂಬ, ಶಿಕ್ಷಣ, ಧರ್ಮ, ಸಂಸ್ಕೃತಿ, ರಾಜಕೀಯ, ಆರ್ಥಿಕ, ಮಾಧ್ಯಮ ಇನ್ನಿತರ ಇವೆಲ್ಲವೂ ಸಮಾಜಿಕ ಸಂಸ್ಥೆಗಳಾಗಿದ್ದು ಸಮಾಜ ವ್ಯಕ್ತಿಗಳ ಅಥವಾ ಮಾನವರ ಬೇಡಿಕೆಗಳ ಅವಶ್ಯಕತೆಗಳನ್ನು ಈಡೇರಿಸುವ ಉದ್ದೇಶದಿಂದಾಗಿ ಸ್ಥಾಪಿಸಲ್ಪಟ್ಟುವುಗಳಾಗಿವೆ. ಅವಶ್ಯವಾದ ಹಲವಾರು ಚಟುಪಟಿಕೆಗಳನ್ನು ಸಂಘಟಿಸಿ ಅವುಗಳ ಮೂಲಕವಾಗಿ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಅನುವು ಮಾಡಿಕೊಳ್ಳಲಾಗುತ್ತದೆ. ಅಲ್ಲದೇ ಈ ಸಂಸ್ಥೆಗಳು ಸಮಾಜದಿಂದ ಅಂಗೀಕೃತವಾಗಿರುತ್ತದೆ. ಅವುಗಳು ಅಂಗೀಕೃತವಾಗಿರವುದರಿಂದ ಮಾತ್ರ ಅವುಗಳನ್ನು ಜಾರಿಯಲ್ಲಿ ಬರಲು ಸಾಧ್ಯವಾಗಿರುತ್ತದೆ. ಇವುಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುವ ಕುಟುಂಬದ ಬಗ್ಗೆ ತಿಳಿದುಕೊಳ್ಳೋಣ.

ಕುಟುಂಬ

ಪ್ರಾಚೀನ ಘಟಕಗಳಲ್ಲಿ ಒಂದಾದ ಕುಟುಂಬವು ಸಮಾಜ ರಚನೆಯಲ್ಲಿ ಗಮನಾರ್ಹವಾದ ಪಾತ್ರವನ್ನು ವಹಿಸುತ್ತದೆ. ಮಾನವರ ಮೂಲಭೂತ ಆಹಾರ, ಆಶ್ರಯ, ಬಯಕೆ, ಲೈಂಗಿಕತೆ, ಸಂತಾನೋತ್ಪತ್ತಿಯು ವ್ಯವಸ್ಥಿತವಾದ ಕಟ್ಟುಪಾಡುಗಳಿಂದ ಮುಂದುವರಿಕೆಯು ಇಲ್ಲಿಂದಲೇ ಪ್ರಾರಂಭವಾಗುತ್ತದೆ. ಮಾನವರ ವಿವಿಧ ನಡುವಳಿಕೆಗಳು, ಜವಾಬ್ದಾರಿ ಪಾತ್ರಗಳು ಕಲಿಸುವಲ್ಲಿ ಕುಟುಂಬವು ಮಹತ್ವದ ಕಾರ್ಯವನ್ನು ವಹಿಸುತ್ತದೆ. ಒಂದು ಜನಾಂಗದ ನಡುವಳಿಕೆ ಕಲಿಕೆಯು ಇನ್ನೊಂದು ಜನಾಂಗಕ್ಕೆ ಅಥವಾ ಹೊಸ ಪೀಳಿಗೆಯ ಮಕ್ಕಳಿಗೆ ಕಲಿಸುವಲ್ಲಿ ಸಮಾಜಿಕ ತರಬೇತಿ ಪ್ರಕ್ರಿಯೆಯು ಕುಟುಂಬದಿಂದಲೇ ಪ್ರಾರಂಭವಾಗುತ್ತದೆ.

ಕುಟುಂಬವು ಸಮಾಜದ ಪ್ರಮುಖ ಸಂಸ್ಥೆಗಳಲ್ಲಿ ಒಂದಾಗಿದ್ದು ಮಗುವಿನ ಪ್ರಾಥಮಿಕ ಹಂತದ ಕಲಿಕೆಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುತ್ತದೆ. ಅಂದರೆ ಮಗುವು ಕುಟುಂಬದಲ್ಲಿ ರೂಢಿಯಲ್ಲಿರುವ ಮಾನವ

ಸಂಬಂಧಗಳನ್ನು ಕುಟುಂಬದ ಸದಸ್ಯರ ಚಲನವಲನ ಮತ್ತು ಅವುಗಳನ್ನು ಅನುಕರಣೆ ಮಾಡುವುದರಿಂದ ಕಲಿಯುತ್ತದೆ. ರಕ್ತ ಸಂಬಂಧಿಗಳ ಭಾವಾನಾತ್ಮಕ ಆಧಾರದ ಮೇಲೆ ರಚನೆಗೊಂಡ ಕುಟುಂಬವು ವ್ಯಕ್ತಿಯ ವ್ಯಕ್ತಿತ್ವವು ಸಮಾಜಕ್ಕೆ ಅಣಿಯಾಗಲೂ ರೂಪಿಸುತ್ತದೆ.

ಈ ಕುಟುಂಬದ ವ್ಯವಸ್ಥೆಗಳು ಬಹುಪ್ರಧಾನವಾಗಿ ಪಿತೃಪ್ರಧಾನತೆಯಲ್ಲಿಯೇ ಇರುವುದರಿಂದ ಮಾತೃಪ್ರಧಾನ ಕುಟುಂಬಗಳು ನಶಿಸಿ ಪಿತೃಪ್ರಧಾನತೆಯಾಗಿ ರೂಪ ತಾಳುತ್ತಿವೆ. ಪಿತೃಪ್ರಧಾನ ಕುಟುಂಬಗಳು ಪುರುಷರೇ ಪ್ರಮುಖಸ್ಥಾನ ವಹಿಸಿಕೊಂಡಿರುವುದು ಸಾಮಾನ್ಯವಾಗಿ ರೂಢಿಯಲ್ಲಿರುವ ವಿಷಯವಾಗಿದೆ. ಇದರಿಂದ ಅಧೀನ ಮಾದರಿಯಲ್ಲಿಯೇ ಬೆಳೆಯಬೇಕಾದ ಹೆಣ್ಣಿನ ಸ್ಥಾನವು ಇಲ್ಲಿ ಎರಡನೆ ದರ್ಜೆಯಾಗಿ ರೂಪತಾಳುತ್ತದೆ. ಪ್ರಥಮವಾಗಿ ಈಗಾಗಲೇ ತಿಳಿದುಕೊಂಡಿರುವಂತೆ ವಿಭಜನೆಯಿಂದಲೆ ಇದರ ಮೂಲ ಶ್ರಮವು ಹುಟ್ಟಿಕೊಂಡಿರುದು ಗೋಚರಿಸುವ ಸಂಗತಿಯಾಗಿದೆ. ಆಸ್ತಿಯ ಹಂಚಿಕೆಯಾಗಲಿ, ಸಮಾಜದ ಪ್ರಮುಖ ನಿರ್ಣಯವಾಗಲಿ ಪುರುಷನೇ ಪ್ರಮುಖ ಪಾತ್ರವಹಿಸುವುದು ಕಾಣುತ್ತೇವೆ. ಕುಟುಂಬದಲ್ಲಿ ಗಂಡ ಮತ್ತು ಹೆಣ್ಣು ಮಕ್ಕಳ ವ್ಯತ್ಯಾಸದ ಬೆಳವಣಿಗೆಯು ಪಾತ್ರಗಳು ಸಹ ವಿಂಗಡಣೆಯ ರೂಪದಲ್ಲಿ ಕುಟುಂಬದ ಸಮಾಜೀಕರಣದ ತರಬೇತಿಗನುಗುಣವಾಗಿ ಬೆಳವಣಿಗೆಯಿಂದ ಹೊರಬರುತ್ತಿದ್ದಾರೆ.

ಗುಣಲಕ್ಷಣಗಳ ಆಧಾರ ರಚನೆಯಲ್ಲಿ ಗಂಡು-ಹೆಣ್ಣಿನ ಬಗ್ಗೆ ಮೇಲು-ಕೀಳು ಭಾವನೆಗಳು ತುಂಬಿಹೋಗಿವೆ. ಪಿತೃಪ್ರಧಾನತೆಯ ಸಾಮಾಜಿಕ ರಚನೆಯಲ್ಲಿ ಈ ಭೇದವು ಸಂಸ್ಕೃತಿ ಸಂರಚನೆಯಿಂದ ರೂಪತಾಳಿ ಸಾಮಾಜಿಕ ನೆಲೆಯಲ್ಲಿ ಸ್ಥಾಪಿತಗೊಳ್ಳುತ್ತಾ ಸಾಗುತ್ತಿವೆ. ಇದ್ದ ವ್ಯವಸ್ಥೆಯನ್ನು ಪಾಲಿಸುವಂತೆ, ಸಮಾಜೀಕರಣದ ತರಬೇತಿ ಪ್ರಕ್ರಿಯೆಯು ಲಿಂಗ ವ್ಯತ್ಯಾಸವು ರೂಪಿಸಿಬಿಟ್ಟಿವೆ. ಹೆಣ್ಣನ್ನು ನಯ, ನಾಜೂಕು, ಕರುಣೆ, ಕ್ಷಮೆ, ಸಹನೆ, ನಾಚಿಕೆ ಸ್ವಭಾವಗಳು ಗಂಡನ್ನು ಹಠಮಾರಿ, ಸೊಕ್ಕಿನವ, ಧೈರ್ಯ, ಒರಟು, ಬುದ್ಧಿವಂತ, ಸ್ವಾವಲಂಬಿ, ಯಜಮಾನಿಕ ಸ್ವಭಾವ ಇನ್ನಿತರ ಪಟ್ಟಿಗಳು ಬೆಳೆಯುತ್ತವೆ. ಈ ರೀತಿಯ ಮೌಲೀಕರಣವು ಅಸಮಾನತೆಯ ಆಗರವಾಗಿದೆ. ಅವುಗಳಲ್ಲಿ ಅದರದೆ ಆದ ಗುಣದಲ್ಲಿ ಶ್ರೇಷ್ಠತೆ, ಕನಿಷ್ಠತೆ ಕಟ್ಟುವುದು ವಾಸ್ತವದಲ್ಲಿ ಸತ್ಯವಲ್ಲ. ಹೆಣ್ಣನ್ನು ಕನಿಷ್ಠತೆಯ ಗುಣದಲ್ಲಿ ಬೆಳೆಸುತ್ತ ಕುಟುಂಬದಲ್ಲಿ ಬೆಳವಣಿಗೆಗೆ ಪೂರಕವಾಗಿ ರಚಿಸಿಕೊಂಡು ಸಂಕೀರ್ಣಗೊಳಿಸುತ್ತ ಬರುತ್ತಿವೆ. ಈ ಗುಣಗಳು ಒಪ್ಪಿಗೆಗಳು ಅಂತರ್ಗತಿಸಿಕೊಂಡು ಬೆಳೆಯುತ್ತ ಬರುತ್ತಿದ್ದಾರೆ. ಹೆಣ್ಣು-ಗಂಡುಗಳ ನಡುವೆ ಬೆಳೆಸಿರುವ ಕಂದರಗಳು, ವಿಭಿನ್ನತೆಗಳು ಗುಣಗಳು ಹೆಚ್ಚೇನು ಗಾಢವಾದ್ದೇನು ಅಲ್ಲದಿದ್ದರೂ ಕುಟುಂಬ, ಸಮಾಜ, ಸಂಸ್ಕೃತಿಗನುಗುಣವಾಗಿ ವರ್ತಿಸಬೇಕಾಗಿರುತ್ತದೆ. ಹೆಣ್ಣು ಗುಣಗಳನ್ನು ರೂಢಿಸಿಕೊಂಡು ಗಂಡಸಿಗೆ 'ಹೆಣ್ಣಿಗ' ಎಂದು ಕರೆದು ಟೀಕೆಗೆ ಗುರಿಪಡಿಸುತ್ತಾರೆ. ಗಂಡು ಗುಣದಲ್ಲಿ ಬೆಳೆಸಿಕೊಂಡಿರುವ ಹೆಣ್ಣಿಗೆ 'ಗಂಡುಬೀರಿ' ಎಂದು ಹೀಯಾಳಿಸುತ್ತಾರೆ. ಹೆಣ್ಣು ಹೆಣ್ಣಿನ ಗುಣಗಳನ್ನು ರೂಢಿಸಿಕೊಂಡು ಬರುವಂತೆ ಗಂಡು-ಗಂಡಸಿನ ಗುಣಗಳು ರೂಢಿಸಿ ಬರುವಂತೆ ಸಮಾಜೀಕರಣದ

ಪ್ರಕ್ರಿಯೆಯ ನೀಡುವುದರಿಂದ ಅವರವರ ಪಾತ್ರಗಳಿಗನುಗುಣವಾಗಿ ವರ್ತಿಸುವಂತೆ ಒತ್ತಾಯ ಪೂರ್ವಕವಾಗಿ ಹೇರುತ್ತಾರೆ. ಹೆಣ್ಣುತನ, ಗಂಡಸುತನ ಗುಣಗಳು ಎರಡು ಜೀವಿಗಳಿಗೆ ಒಬ್ಬರ ಗುಣ ಇನ್ನೊಬ್ಬರಿಗೆ ವಿಭಜಿಸುವ ಚಿಂತನೆಗಳು ಅವಶ್ಯವಾದದ್ದೇ ಆಗಿವೆ. ಅಂದರೆ ಗಂಡಸು ಧೈರ್ಯ, ಸಾಹಸ, ಪ್ರತಿಷ್ಠೆಗಳು ಅವರಿಗಷ್ಟೇ ಪ್ರೇರೇಪಿಸುವ ಗುಣಗಳಲ್ಲ. ಹಾಗೆಯೇ ಹೆಣ್ಣುತನ ಗುಣಗಳು ನಯ, ತಾಳ್ಮೆ ತ್ಯಾಗಮಯಿ, ಕರುಣೆ ಅನುಕಂಪಗಳು, ಹೆಣ್ಣಿಗಷ್ಟೆ ಅವಶ್ಯವಿರುವ ಗುಣಗಳಲ್ಲ. ಇವು ಇಬ್ಬರಿಗೂ ಬೇಕಾದದ್ದೂ. ಒಂದು ವೇಳೆ ತಮ್ಮ ಪಾತ್ರಕ್ಕನುಗುಣವಾದ ಗುಣದಲ್ಲಿ ಬೆರೆತು ಹೋಗಿದ್ದರೆ ಅದು ಅವರ ಅಪೂರ್ಣ ವ್ಯಕ್ತಿತ್ವ ಸೃಷ್ಠಿಯಾಗಿರುವುದೆಂದೇ ಅರ್ಥ.

ಪುರುಷರಷ್ಟೇ ಮಹಿಳೆಯರು ಎರಡು ಗುಣಗಳ ಸಮಿಶ್ರದಿಂದ ತಮ್ಮದೇ ಆಗಿರತಕ್ಕಂತಹ ಒಳ್ಳೆಯ ವ್ಯಕ್ತಿತ್ವ ನಿರ್ಮಿಸಿಕೊಂಡವರಿದ್ದಾರೆ. ಧೈರ್ಯ, ಪ್ರತಿಷ್ಠೆ, ಸಾಹಸಗಳಲ್ಲಿ ತಮ್ಮದೇ ಆದ ಸಾಧನೆಯನ್ನು ಮಹಿಳೆಯರು ಮಾಡಿ ತೋರಿಸಿದ್ದಾರೆ.

ಉದಾ: ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರುರಾಣಿ ಚೆನ್ನಮ್ಮ ತಮ್ಮ ಸಾಹಸ ಗಾಥೆಯನ್ನು ಯಾವ ಪುರುಷನಿಗೂ ಕಡಿಮೆ ಇಲ್ಲದಂತೆ ಇತಿಹಾಸದ ಪುಟದಲ್ಲಿ ಅವಿಸ್ಮರಣೀಯವಾಗಿ ಮಿಂಚಿದ್ದಾರೆ. ಇಂತಹ ಬೆಳವಣಿಗೆಯೂ ಸನ್ನಿವೇಶಕ್ಕೆ ಬದ್ಧವಾಗಿ ರೂಪಿಸಲು ಆ ಪರಿಸ್ಥಿಗಳು ಸೃಷ್ಟಿಗೊಂಡಿರುವ ಕಾರಣಗಳಿವೆ. ಅದೇ ರೀತಿ ಎಷ್ಟೋ ಪುರುಷರು ಕುಟುಂಬದಲ್ಲಿ ಸಹಾಯಕರಾಗಿ ಶ್ರದ್ಧಾಪೂರ್ವಕವಾಗಿ ತಮ್ಮ ಜೀವನದ ಸಮತೋಲನವನ್ನು ಹಂಚಿಕೊಂಡಿದ್ದಾರೆ. ಮಹಿಳೆಯರಿಗೆ ವಿವಿಧ ರೀತಿಯ ಅವಕಾಶಗಳು ನೆರವು. ಕಷ್ಟ, ಸುಖದಲ್ಲಿ ಭಾಗಿಯಾಗಿದ್ದಾರೆ. ಇಲ್ಲಿ ತಿಳಿದು ಬರುವ ಸತ್ಯವೇನೆಂದರೆ ಸಮಿಶ್ರಗುಣದಲ್ಲಿ ಬೆರೆತಿರುವುದು ಗೋಚರವಾಗುತ್ತದೆ. ಈ ದ್ವಿಲಿಂಗತ್ವದ ಪಾತ್ರಗಳು ಪ್ರಸ್ತುತ ಸಮಾಜದಲ್ಲಿ ಅವಶ್ಯವಿದೆ. ಈ ದ್ವಿಲಿಂಗತ್ವಕ್ಕೆ ಪ್ರಮುಖ ಪಾತ್ರವಹಿಸಲು ಪ್ರಥಮವಾಗಿ ಕುಟುಂಬದ ಕಾರ್ಯ ಪರಿಣಾಮಕಾರಿ ತಳಪಾಯವನ್ನು ರೂಪಿಸುತ್ತದೆ. ತದನಂತರ ಶಿಕ್ಷಣ ಅಧ್ಯಾಪಕರು ಸಮೂಹ ಮಾಧ್ಯಮ ಧರ್ಮ ಸಮಾಜವು ಸಹ ಮುಖ್ಯ ಪಾತ್ರವಹಿಸುವವು. ಈ ಎಲ್ಲಾ ಕ್ಷೇತ್ರಗಳು ಯಾವ ಕಡೆ ಸಾಗುತ್ತಿವೆ. ಯಾರನ್ನು ಪ್ರೋತ್ಸಾಹಿಸುತ್ತಿವೆ ಎನ್ನುವುದು ಅರಿತುಕೊಳ್ಳುವುದು ತುಂಬ ಅವಶ್ಯವಾದುದು. ಸಮಾಜದ ಮೌಲ್ಯಗಳು ಮಾನವೀಯ ಅಂಶಗಳು ಅರಿತುಕೊಳ್ಳುವುದು ಅವಶ್ಯಕವಾದರೂ ಅರಿತುಕೊಂಡವರು ಹೇರಳವಾಗಿ ಸಿಗುವುದಿಲ್ಲ. ನಮ್ಮ ಸಮಾಜದಲ್ಲಿ ಅನಕ್ಷರತೆ, ಕಂದಾಚಾರಗಳು ಜನಸಮುದಾಯದ ಮನಸ್ಸಿನಲ್ಲಿ ಗಾಢವಾಗಿ ಬೇರು ಬಿಟ್ಟಿರುವುದರಿಂದ ನಿರುತ್ಸಾಹದ ಮನೋಭಾವನೆಗಳು ಹೊಂದಿ ಬಿಡುತ್ತಾರೆ. ಉನ್ನತ ಶಿಕ್ಷಣದಿಂದ ಮತ್ತು ಉತ್ತಮ ಪರಿಸರದ ವಾತವರಣದಿಂದ ವ್ಯಕ್ತಿಯನ್ನು ತಿದ್ದಬಹುದು. ಅದು ಶಾಶ್ವತವಾಗಿ ನೆಲ ನಿಲ್ಲಲು ಬಹುದಿನಗಳ ಸರಾಗವಾಗಿ ಸಾಗಿದರು. ಆಶ್ಚರ್ಯ ಪಡಬೇಕಾಗಿಲ್ಲ. ಈ ಎಲ್ಲದರಲ್ಲಿಯೂ ಸ್ತ್ರೀಯು ಎರಡನೆ ದರ್ಜೆಯ ಪ್ರಜೆಯಾಗಿಯೇ ಗೋಚರವಾಗುತ್ತಾಳೆ.

ಸಂಸ್ಕೃತಿ-ಸಮಾಜ, ಧರ್ಮಕಲೆ, ಭಾಷೆ ಎಲ್ಲ ವಿವಿಧ, ಆಯಾಮಗಳಲ್ಲಿ ಈ ರಚನೆಗಳು ಬೇರು-ಬಿಟ್ಟಿರುವಾಗ ಮಾನವೀಯತೆಯ ಮೌಲ್ಯದ ಸಂಪೂರ್ಣ ವ್ಯಕ್ತಿತ್ವ ನಿರ್ಮಾಣವಾಗಲೂ ತೊಡಕಾಗಿವೆ. ಈ ಗೊಂದಲಕ್ಕೆ ಸಿಲುಕಿಸಿಕೊಳ್ಳುವ ಹಂತದಿಂದ ಸಹಜ ವ್ಯಕ್ತಿತ್ವ ವಿಕಾಸವಾಗುವುದಿಲ್ಲ. ಯಾಕೆಂದರೆ ಸ್ತ್ರೀಯು ಬೆಳವಣಿಗೆಗೆ ಅನುಗುಣವಾಗಿ ಸ್ತ್ರೀ-ಪುರುಷರು ಸಹಜವಾಗಿ ಒತ್ತಡಕ್ಕೊಳಗಾಗುತ್ತಾರೆ. ಪುರುಷನಿಗೆ ಸ್ವತಂತ್ರ ಸರಳವಾಗಿ ದೊರಕಿದ ಹಾಗೆ ಮಹಿಳೆಗೆ ದೊರಕುವುದಿಲ್ಲ. ಪುರುಷರ ಪಾತ್ರಕ್ಕಾನುಗುಣವಾಗಿ ನಡೆಯಲೇ ಬೇಕು. ಛಲವುಳ್ಳ ವ್ಯಕ್ತಿಯಂತೆ ವರ್ತಿಸಲೇಬೇಕು. ಸ್ತ್ರೀಯು ತನ್ನ ವ್ಯಾಪ್ತಿಯಲ್ಲಿಯೇ ಇರಬೇಕು ಮೀರಬಾರದು ಮೀರಿದರೆ ಸಮಾಜದ ನಿಂದನೆ ಸದಾ ಸಿದ್ಧವಿರುತ್ತದೆ.

ಗಂಡು-ಹೆಣ್ಣುಗಳ ಬಗ್ಗೆ ಬೆಳೆಸಿರುವ ಗುಣಗಳು. ಇವು ನಮ್ಮ ಹಕ್ಕು ಬಾಧ್ಯತೆಗಳೆನ್ನುವಷ್ಟರ ಮಟ್ಟಿಗೆ ಬೆರೆತು ಹೋಗಿರುತ್ತಾರೆ. ಸಮಾಜ ಕುಟುಂಬದ ಒಪ್ಪಿಗೆಗಳು ವಿಮರ್ಶಿಸದೇ ಇರುವ ರೂಢಿಗಳು ಮುಂದುವರಿಯುತ್ತಲಿವೆ. ತಮ್ಮ ಪಾತ್ರಗಳು ರೂಢಿಯಾಗಿ ಯಾವ ಸಂದರ್ಭದಲ್ಲೂ ನಿರ್ವಹಿಸಲು ಸಿದ್ಧರಿರುತ್ತಾರೆ. ಆ ನಿಟ್ಟಿನೆಡೆಗೆ ಸಾಗಲೂ ಮನಸ್ಸು ಸಿದ್ಧವಾಗಿ ನಿಂತಿರುತ್ತದೆ.

ಉದಾ: ಒಂದು ಮನೆಯ ದಂಪತಿಗಳು ತಮ್ಮ ರಕ್ತ ಸಂಬಂಧಿಗಳ ಅಥವಾ ಗೆಳೆಯರ ಮನೆಗೆ ಹೋಗಿದ್ದಾರೆ ಎಂದು ಇಟ್ಟುಕೊಳ್ಳೋಣ. ಅಲ್ಲಿ ಪುರುಷನೊಬ್ಬನೆ ಇರುತ್ತಾನೆ. ಅವರ ಮಡದಿ ತವರು ಮನೆಗೆ ಹೋಗಿರುತ್ತಾಳೆ. ಬಂದಿರತಕ್ಕಂತಹ ಅತಿಥಿಗಳಿಗೆ ತಿಂಡಿ, ಚಹ, ಮಾಡಲು ಕೈಗೊಳ್ಳುತ್ತಿರುತ್ತಾನೆ. ಅತಿಥಿಯಾಗಿ ಬಂದಿರತಕ್ಕಂತಹರಲ್ಲಿ ಮಹಿಳೆಯೂ ಮುಂದೆ ಬಂದು 'ನಾನು ಮಾಡುತ್ತೇನೆ ಬಿಡಿ, ನೀವು ಮಾತಾಡ್ತಾ ಇರಿ ಈಗ ಈಗ ಬಂದು ಬಿಟ್ಟೆ' ಎಂದು ತರಾತುರಿಯಲ್ಲಿ ತಮ್ಮ ಪಾತ್ರದಲ್ಲಿ ಸಿದ್ಧಗೊಂಡಿರುವ ಕೆಲಸ ಕೈಗೊಳ್ಳಲು ಪ್ರಾರಂಭಿಸುತ್ತಾಳೆ.

ಮಹಿಳೆಗೆ ಹಣೆಪಟ್ಟಿ ಹಚ್ಚಿರುವ ಮನೆಗೆಲಸಗಳಿಂದ ತಮ್ಮ ಪಾತ್ರದಲ್ಲೇ ಬೆಳೆದು ಬಂದಿರುವ ಹಿನ್ನೆಲೆಯು, ಪುರುಷರು ಸ್ತ್ರೀಯ ಕಾರ್ಯವನ್ನು ಮಾಡಬಾರದು ಎನ್ನುವ ಕಲ್ಪನೆ ಮಹಿಳೆಯರಲ್ಲಿಯೂ ಗಾಢವಾಗಿದೆ. ಇದರಿಂದ ಯಾವ ಕತೆ ಸಾಗಿದರೂ ತಮ್ಮ ಪಾತ್ರಗಳು ಮನಸ್ಸಿನಾಳದಲ್ಲಿ ಸತತ ಕಾರ್ಯವೆಸಗುತ್ತಲೇ ಇರುತ್ತವೆ. ಸೃಷ್ಟಿಗೊಂಡಿರುವ, ನಡುವಳಿಕೆ, ತರಬೇತಿಗಳು ಒತ್ತಡಕ್ಕೆ ಒಳಗಾಗಿರುವುದರಿಂದ ಸಂಕೋಚ ಸ್ವಭಾವಗಳು ಗಟ್ಟಿಗೊಂಡು 'ನಾನು ಇದೆ ಮಾಡಿದರೆ ಚಂದವೆಂದು'. ನಾನು ಹೀಗೆಯೇ ಇರಬೇಕೆಂದು ಮಾನಸಿಕವಾಗಿ ತಮ್ಮ ಕಾರ್ಯದ ಬಗ್ಗೆ ಬೆರೆತು ಹೋಗಿರುತ್ತಾರೆ. ಪುರುಷರ ಸಹ ಅಷ್ಟೇ ಮನೆಯಲ್ಲಿ ಗೃಹಿಣಿಯೂ ಅನಾರೋಗ್ಯದಿಂದ ಇದ್ದರೆ ಅಡುಗೆ ಮಾಡದೇ ಇದ್ದ ಸಂದರ್ಭದಲ್ಲಿ ಪುರುಷರು ಅಡುಗೆ ಮಾಡಲು ಹಿಂದೇಟು ಹಾಕುತ್ತಾರೆ. ಕೆಲವು ಸಂದರ್ಭಗಳು ಎಷ್ಟೇ ಕಷ್ಟಗಳಿದ್ದರೂ ಮಹಿಳೆನೇ ಮಾಡಬೇಕಾಗಿರುತ್ತದೆ.

ಲಿಂಗ ತಾರತಮ್ಯದ ಭಿನ್ನತೆ, ದ್ವಂದ್ವಗಳ ಸೃಷ್ಟಿಯಿಂದ ಗಂಡು-ಹೆಣ್ಣಿನ ವಿವಿಧ ಮನೋಭಾವಗಳು ಬೇರೆ ಬೇರೆ ಯೋಚನೆಗೆ ಸಿದ್ಧಪಡಿಸಿದ ಹಾಗಿವೆ. ಅವರು ಹಂಬಲ ಬೇರೆ ಬೇರೆಯಾಗಿರುವುದರಿಂದ ಮೊದಲಿನಿಂದಲೂ ಭಿನ್ನ ವಿಧಾನದಲ್ಲಿ ಬೆಳೆಯುವುದರಿಂದ ಸಿದ್ಧ ಮಾದರಿ ಯೋಜನೆಯು ಬೆಳೆದು ಬರುತ್ತದೆ ಮತ್ತು ಹಾಗೆ ಯೋಚಿಸಲು ಸಹ ಕಲಿಸಲಾಗಿದೆ.

ಪ್ರತಿ ಗಂಡು-ಹೆಣ್ಣಿನಲ್ಲಿ ಕುಟುಂಬ, ಸಮಾಜದ ಶಾಂತಿ-ಸೌರ್ಹದತೆಗೆ ಒಳ್ಳೆಯ ಗುಣಗಳು ಇಬ್ಬರಲ್ಲಿಯೂ ಇದ್ದು ಅದು ತೋರ್ಪಡಿಸುವಿಕೆಯಲ್ಲಿ ವ್ಯತ್ಯಾಸವು ಅನೇಕ ವಿಧಾನವಾಗಿ ರೂಪಗೊಳ್ಳುತ್ತದೆ. ಪ್ರತಿ ಪುರುಷನಲ್ಲಿ ಪ್ರೀತಿ, ಉತ್ಸಾಹ, ಚಿಲುಮೆ ಇದ್ದರೂ ಕೆಲವೂ ಸಂದರ್ಭಗಳಲ್ಲಿ ಅವು ಬತ್ತಿ ಒಣಗಿ ಹೋಗುವುದು ಕಾಣುತ್ತೇವೆ. ಹಾಗೇ ಮಹಿಳೆಯಲ್ಲಿ ಛಲವಂತಿಕೆ, ಬುದ್ಧಿವಂತಿಕೆ ಇದ್ದರೂ ನಿರಾಕರಿಸುವ ಸಂದರ್ಭಗಳು ಗಟ್ಟಿಗೊಳ್ಳುತ್ತವೆ. ಗಂಡು-ಹೆಣ್ಣಿನ ನಿಜವಾದ ಒಳ್ಳೆಯ ಗುಣಗಳು ಮನಸ್ಸಿನಾಳದಿಂದ ಹೊರತರಲು ಒಪ್ಪುದಿಲ್ಲ. ಕುಟುಂಬ, ಸಮಾಜದ ಸೃಷ್ಟಿಗಳು ಕೆಲವು ಲಿಂಗಕ್ಕೆ ಮಾತ್ರ ಪ್ರೋತ್ಸಾಹಿಸಿ ಉಳಿದವುಕ್ಕೆ ನಿರಾಕರಿಸುತ್ತವೆ. ಹೀಗಾಗಿ ತಮ್ಮ ಜೀವನದ ಸುಭದ್ರ ತಳಪಾಯ ಊರಲು, ಸಮಾಜದಲ್ಲಿ ನೈತಿಕ ಮೌಲ್ಯಗಳು ನಕರಾತ್ಮಕವಾಗಿ ಉದಯವಾಗುತ್ತವೆ.

ಕುಟುಂಬದಲ್ಲಿ ಬೆಳೆಸುವ ಪರಿ ಈ ಹಿನ್ನೆಲೆಯನ್ನು ಒಳಗೊಂಡಿದಲ್ಲದೆ ಈ ಪ್ರಕ್ರಿಯೆಗಳು ಜಾರಿಗೊಳ್ಳುತ್ತಲೇ ಇರುವುದು ಕಾಣುತ್ತೇವೆ. ಮುಖ್ಯವಾಗಿ ಆರ್ಥಿಕ ಶ್ರಮ ವಿಭಜನೆಯಿಂದ ರೂಪತಾಳಿದ್ದು ಜೈವಿಕ ವ್ಯತ್ಯಾಸಗಳು ಪಕ್ಕಕ್ಕೆ ಸರಿಸುತ್ತವೆ. ಕುಟುಂಬದಲ್ಲಿ ಭಿನ್ನ ಪಾತ್ರಗಳ ವಿಂಗಡಣೆಯಲ್ಲಿ ಬೆಳೆದಾಗ ಅದು ಜೀವನ ಪೂರ್ತಿ ನಡುವಳಿಗಳಾಗಿ ರೂಪ ತಾಳಬಹುದಾಗಿದೆ. ಈ ನಡುವಳಿಕೆಗಳು, ರೂಢಿಗಳು ಶಿಕ್ಷಣ ಕ್ಷೇತ್ರದಿಂದ ತೊಲಗಿಸಬಹುದು. ಅದು ಸಹ ಪುರುಷ ಚಿಂತನೆಯಲ್ಲಿ ಒಳಪಟ್ಟಿರುವುದು ಗೋಚರವಾಗುತ್ತದೆ. ಶಿಕ್ಷಣ ಕ್ಷೇತ್ರದ ಬಗ್ಗೆ ಅವಕಾಶದ ನೆರವುಗಳು ನೀಡಲು ನಿರಾಕರಿಸುತ್ತವೆ. ಶಿಕ್ಷಣದ ಅವಶ್ಯಕತೆ ಮಹಿಳೆಯರಿಗೆ ಯಾವ ರೀತಿ ಅವಶ್ಯವಾಗಿರುತ್ತದೆ. ಲಿಂಗ ತಾರತಮ್ಯ ವ್ಯತ್ಯಾಸದಲ್ಲಿ ಯಾವ ಬಗೆಯಾಗಿ ದೃಷ್ಟಿ ಹಾಯಿಸಿವೆ ಎನ್ನುವುದು ತಿಳಿದುಕೊಳ್ಳೋಣ.

ಶಿಕ್ಷಣ

ಸಮಾಜಿಕ ಸಂಸ್ಥೆಗಳಲ್ಲಿ ಶಿಕ್ಷಣವು ಒಂದು ಕ್ಷೇತ್ರವಾಗಿದ್ದು ಮಾನವರ ಅವಶ್ಯ ಬದುಕಿನ ರೂಪ ರೇಷಗಳು, ಜ್ಞಾನ ಶಿಸ್ತುಗಳು ಕಲಿಸಿಕೊಡುತ್ತದೆ. ಮಾನವ ಮೃಗವನ್ನು ಮನುಷ್ಯರಾಗಿ ರೂಪಿಸಲು ಶಿಕ್ಷಣದ ತತ್ವಗಳು ಬಹು ಮುಖ್ಯ ಪಾತ್ರವನ್ನು ವಹಿಸುತ್ತವೆ. ಇದರಲ್ಲಿ ಮಹಿಳಾ ಶಿಕ್ಷಣದ ಬಗ್ಗೆ ದೃಷ್ಟಿ ಹಾಯಿಸಿದಾಗ ಪುರುಷನಿಗಿಂತ ಪ್ರತಿಶತದಲ್ಲಿ ಕಡಿಮೆ ಇರುವುದು ಗೋಚರಿಸುತ್ತದೆ. ರೋಗ-ರುಜಿನಗಳಿಂದ ನರಳುತ್ತಿರುವ ಸಮಾಜದಲ್ಲಿ ಮಹಿಳಾ ಶಿಕ್ಷಣದ ಅವಶ್ಯಕತೆ ಇದ್ದರೂ ಅದು ಪ್ರಾಚೀನ ಕಾಲದಿಂದಲೇ ಶುದ್ಧ ಪರಿಪೂರ್ಣ

ಶಿಕ್ಷಣ ನೀಡಲು ನಿರಾಕರಿಸಿವೆ. ಗತ ಕಾಲದಲ್ಲಿ ಮನೆಗೆ ಸೀಮಿತವಿದ್ದ ಮಹಿಳೆ ಪುರುಷರ ಅಧೀನದಲ್ಲಿದ್ದು ಗೊತ್ತಾಗುತ್ತದೆ. ಅವಳಿಗೆ ನೀಡುವ ಶಿಕ್ಷಣವು ಪಾಕಶಾಸ್ತ್ರದ ಬಗ್ಗೆ ನೃತ್ಯ ಸಂಗೀತದ ಬಗ್ಗೆ, ಪ್ರೋತ್ಸಾಹಿಸುತ್ತಿದ್ದವು. ಈ ಶಿಕ್ಷಣವು ಮನೆಯಲ್ಲಿ ಇನ್ನಷ್ಟು ಚೊಕ್ಕವಾಗಿ ಅಡುಗೆಯ ತರಬೇತಿಗಳು ರೂಢಿಸಿಕೊಳ್ಳಲಿ, ಮಹಿಳೆ ಮಹಿಳೆಯಾಗಿಯೇ ಅವಳ ಕಾರ್ಯವು ಭದ್ರಪಡಿಸುವ ಸುಲಭ ಸಾಧನದ ಶಿಕ್ಷಣವು ದೊರೆಯುತ್ತಿತ್ತು ಎಂದರೆ ತಪ್ಪಾಗದು. "ಸಾಹಿತ್ಯ ಕ್ಷೇತ್ರಕ್ಕೆ ಪ್ರೋತ್ಸಾಹಿಸಿದರು. ಅದು ಮೇಲ್ವರ್ಗದವರಲ್ಲಿ ಮಾತ್ರ ಸೀಮಿತವಿದ್ದು, ಶೂದ್ರ ಮಹಿಳೆಯರಿಗೆ ಧಾರ್ಮಿಕ ಸಾಹಿತ್ಯವನ್ನು ಕಲಿಯಲು ಅವಕಾಶಗಳಿರಲಿಲ್ಲ. ಉನ್ನತ ವರ್ಗದಲ್ಲಿ ಹುಡುಗಿಯರು ಶಾಲೆಗೆ ಹೋಗುವುದು ನಿರಾಕರಿಸುತ್ತಿದ್ದರು. ಅದು ಕಲಿತರು ಮನೆಯಲ್ಲಿಯೇ ಇದ್ದು ಕಲಿಯುವ ಅವಕಾಶಗಳಿದ್ದವು. ಗುರುಗಳು ಮನೆಗೆ ಬಂದು ಕಲಿಸುತ್ತಿದ್ದರು."* ಸಾಹಿತ್ಯಿಕವಾಗಿ ಧಾರ್ಮಿಕವಾಗಿ ಅಲ್ಪ-ಸ್ವಲ್ಪ ಅವಕಾಶಗಳಿದ್ದರೂ ಗರಿಷ್ಠ ಪ್ರಮಾಣದಲ್ಲಿ ನಿರಾಕರಿಸಿವೆ. ಏನೇ ಆದರೂ ಈ ಅವಕಾಶದಿಂದ ತಮ್ಮ ಅಭಿವ್ಯಕ್ತವನ್ನು ಪ್ರಕಟಪಡಿಸಲು ಸಹಾಯಕವಾಯಿತು ಎನ್ನಬಹುದು. ಅದರಿಂದ ಶತಮಾನಗಳ ಹಿಂದೆ ಸಂಚಿ ಹೊನ್ನಮ್ಮ ಮಹಿಳಾ ದನಿಗೆ ದನಿಗೂಡಿಸಿ ಸಮಾಜದಲ್ಲಿ ಇದ್ದ ಪರಿಸ್ಥಿತಿಯನ್ನು ಪ್ರಕಟಿಸಲು ಪ್ರಯತ್ನಿಸಿದ್ದಾಳೆ. 'ಹದಿಬದಿಯ ಧರ್ಮ'ದಲ್ಲಿ ಲಿಂಗ ತಾರತಮ್ಯದ ಬಗ್ಗೆ ಪ್ರಸ್ತಾಪಿಸಿದ ಸಹಜ ಸ್ತ್ರೀವಾದಿ ಎಂದು ಹೇಳಿದರೆ ತಪ್ಪಾಗದು.

ಕುವಾರನಾದೊಡೆ ಬಂದ ಗುಣವೇನದರಿಂದೆ
ಕುವರಿಯಾದೊಡೆ ಕುಂದೆನು
ಇವರೀವಗರೊಳೆಳಿಗೆ ಪಡೆದವರಿಂದೆ
ಸವನಿಪುದಿಹ ಪರಸೌಖ್ಯ

ಈ ಸಾಲುಗಳ ಹಿನ್ನೆಲೆ ಮಕ್ಕಳ ನಡುವೆ ಲಿಂಗಭೇದವು ಏತಕ್ಕಾಗಿ ಮಾಡಬೇಕೆಂದು ಪ್ರಸ್ತಾಪಿಸುತ್ತಾಳೆ. ಮಗನಿಂದ ಪ್ರತಿಷ್ಠೆ ಪ್ರಾಬಲ್ಯಗಳೇನು ಮಗಳಿಂದ ಕಷ್ಟ ಪರಿಪಾಟಲುಗಳೇನು ಇವರಿಬ್ಬರನ್ನು ಸಮಾನವಾಗಿ ಕಾಣಬೇಕೆಂದು ಹೇಳುವುದರ ಮೂಲಕ ಮಾನವೀಯ ಏಳ್ಗೆಗೆ ಸಾಗಬೇಕೆಂದು ಕವಿತ್ರಿಯ ಮನೋವೇದನೆಯನ್ನು ಗತಕಾಲದಲ್ಲೇ ಸ್ತ್ರೀಪುರುಷರ ಭೇದದ ಸ್ವರೂಪವನ್ನು ದಾಖಲಿಸಿದ್ದಾಳೆ. ಈ ಭೇದವು ಪ್ರಾಚೀನ ಕಾಲದಲ್ಲಿ ಇದ್ದಿತು ಎನ್ನುವುದಕ್ಕೆ ಈ ಸಾಹಿತ್ಯಗಳೇ ಸಾಕು. ಯಾಕೆಂದರೆ ಇಂದಿಗೂ ಆ ಸ್ವರೂಪಗಳು ಗೋಚರಿಸುತ್ತಿರುವುದು ನಿಜರೂಪವಾಗಿದೆ. ಮಹಿಳಾ ಲೋಕವು ಪುರುಷ ಚಿಂತನೆಯಲ್ಲಿ ಒಳಪಟ್ಟಿದ್ದು ಸ್ಪಷ್ಟವಾಗಿ ಗೋಚರವಾಗುತ್ತದೆ. ಮಹಿಳೆಯರಿಗೂ ವಿವಿಧ ಬಗೆಯ ಬೇಡಿಕೆಗಳಿವೆ ಎಂದು ತಿಳಿದುಕೊಳ್ಳಲು ಪುರುಷ ಸಮಾಜ ವಿಫಲವಾಗಿವೆ. ಹೀಗಾಗಿ ಅಂದಿನ ಮಹಿಳೆಯರ ಶಿಕ್ಷಣ ಕಲಿಯುವುದು ದೊಡ್ಡ ಸಾಧನೆಯ ಸಂಕೇತವೇ ಆಗುತ್ತಿತ್ತು. ಮಹಿಳೆಯ ಕಲಿಕೆಯ ಆಸಕ್ತಿಗಳಿದ್ದು ಅವರ ಭಾವನೆಗಳ ಅಭ್ಯಿವ್ಯಕ್ತವು ವ್ಯಕ್ತಪಡಿಸಲು ಮರೆಮಾಚಿ ಹೆಣಗಾಡಬೇಕಿತ್ತು. ಹಲವು ಶತಕಗಳು ಗತಿಸಿದ ಮೇಲೆ ಸ್ತ್ರೀ ಶಿಕ್ಷಣಕ್ಕೆ ಅಲ್ಪಸ್ವಲ ಪ್ರೋತ್ಸಾಹ ಸಿಕ್ಕು ಅವಕಾಶವನ್ನು ಪಡೆಯುವಂತಾಯಿತು. ಅದಕ್ಕಾಗಿ ಅನೇಕ ಹೋರಾಟಗಳು ಸಹ ರೂಪಪಡೆದುಕೊಂಡವು.

ಸ್ತ್ರೀಪರವಾಗಿ ರಾಂ.ಮೋಹನ್ ರಾಯ್, ಈಶ್ವರ ಚಂದ್ರ ವಿಧ್ಯಾಸಾಗರ, ಧೋಂಡೋ ಕೇಶವ ಕರ್ವೆ, ಇನ್ನಿತರ ಸಮಾಜ ಸುಧಾರಕರಿಂದ ಮಹಿಳೆಯರಿಗೆ ಶಿಕ್ಷಣದ ಅವಕಾಶ ದೊರೆಯಲು ಅನುಕೂಲವಾಯಿತು.

ಲಿಂಗ ತಾರತಮ್ಯದ ಮಹಿಳೆಯ ಬೆಳವಣಿಗೆಯು ಎಲ್ಲಾ ಅವಕಾಶಕ್ಕೂ ಕುಂಟಿತವನ್ನೊಡ್ಡಲು ಮೂಲಕಾರಣವಾಗಿತ್ತು. ಶಿಕ್ಷಣವು ಮಹಿಳೆಗೆ ತಿಳುವಳಿಕೆ, ಲೋಕ ಜ್ಞಾನ ಮತ್ತು ಭವಿಷ್ಯದ ಅಡಿಪಾಯದ ಜೊತೆ ಸಮಾಜದಲ್ಲಿರುವ ಹಕ್ಕು ಭಾದ್ಯತೆಗಳ ಅರಿವು ಉಂಟಾಗುತ್ತದೆ. ನಿಜ ಆದರೆ ಬೆಳವಣಿಗೆಯ ಎರಡನೆಯ ದರ್ಜೆಯಾಗಿರುವುದರಿಂದ ತಮ್ಮ ಅರಿವಿನ ಮೂಲವು ಶಿಕ್ಷಣ ಕ್ಷೇತ್ರದ ವಂಚನೆಯಿಂದ, ಅಂಧಕಾರದಲ್ಲಿ ತೊಳಲಾಡುವ ಹಾಗೆ ಆಗಿದೆ. ಆರ್ಥಿಕ ಕ್ಷೇತ್ರದ ಹಿಡಿತ ಸ್ವಾವಲಂಬಿಯ ಬದುಕು ಸ್ವತಂತ್ರ ಕಲ್ಪಿಸುವ ವ್ಯವಸ್ಥೆ ಶಿಕ್ಷಣ ಕ್ಷೇತ್ರದಲ್ಲಿದೆ. ಅದು ಪುರುಷ ಚಿಂತನೆಯಲ್ಲಿ ಒಳಪಟ್ಟು ಮಹಿಳಾ ಲೋಕದ ಗ್ರಹಿಕೆಯನ್ನು ನಿರಾಕರಿಸಿವೆ. ಆ ನಿರಾಕರಣೆಯು ಮುಂಚಿತವಾಗಿ ಮದುವೆ ಎನ್ನುವ ಸಂಕೋಲೆ ಪ್ರಮುಖವಾಗಿ ಮಹಿಳೆಗೆ ಪೆಟ್ಟು ಬೀಳುವ ಹಾಗೆ ರೂಪತಾಳಿದೆ. ಮದುವೆಯು ಮಹಿಳೆಯ ಎಲ್ಲಾ ಸಮಸ್ಯೆಯ ಕೇಂದ್ರಬಿಂದು ಸ್ಥಾನವಾಗಿದೆ. ಇದರಿಂದ ಪುರುಷನು ಸ್ವತಂತ್ರವಾಗಿ ಶಿಕ್ಷಣ ಪಡೆಯಬಹುದು. ತಮ್ಮ ಅನುಕೂಲದ ಅವಕಾಶದ ಸಮಯವನ್ನು ನಿರಿಕ್ಷಿಸಿ ಮದುವೆ ನಿರ್ಣಯ ತೆಗೆದುಕೊಳ್ಳಬಹುದು. ಆದರೆ ಮಹಿಳೆಗೆ ನಿರ್ಧಾರ ತೆಗೆದುಕೊಳ್ಳುವುದು ದೂರದ ಮಾತಾಗಿ ಉಳಿಯುತ್ತಿದೆ. ಎದುರುತ್ತರ ನೀಡಿದರು, ಪ್ರತಿಕ್ರಿಯೆಗಳು ಒಪ್ಪಿಸಲು ಸದಾ ಸಿದ್ಧವಿರುತ್ತದೆ. ಸ್ವನಿರ್ಣಯ ತೆಗೆದುಕೊಂಡರು, ಸಮಾಜದಲ್ಲಿ, ಬದುಕಲು ನಿಂದನೆಗಳು ಸದಾ ಸಿದ್ಧವಿರುತ್ತವೆ. ಮೂಲವಾಗಿ ಮಹಿಳೆಯನ್ನು ಸಮಸ್ಯೆಗೆ ಸಿಲುಕಿಸುವ ಕೇಂದ್ರಬಿಂದುವಾಗಿದೆ.

ಸಮಾಜದ ಅಪಕಲ್ಪನೆಗೆ ಭಾವನೆಗಳು ಸಂಪ್ರದಾಯಿಕ ರೂಢಿನಿಯಮಗಳು ಬೇರುಬಿಟ್ಟಿರುವುದರಿಂದ, ಕಠಿಣ ಪಾರಂಪರಿಕ ಕೌಟುಂಬಿಕ ನಿಬಂರ್ಧಗಳು ಸ್ತ್ರೀ ಶಿಕ್ಷಣದಿಂದ ವಂಚಿತವಾಗಿಸುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಅವಲೋಕಿಸಿದಾಗ ಸ್ತ್ರೀ ಶಿಕ್ಷಣಕ್ಕೆ ವಿವಿದ ಸಂಕೋಲೆಗಳು ಬೆಸೆಯುತ್ತಾರೆ. ಮಹಿಳೆಗೆ ಶಿಕ್ಷಣ ನೀಡಿಯಾದರೂ ಏನು ಪ್ರಯೋಜನ, ನೀಡಿದರು ಅದು ಮುಂದೆ ಆಕೆಯ ಗಂಡನಿಗೆ ಉಪಯೋಗವಾಗುತ್ತದೆ. ನಾವಾದರೂ ಏಕೆ ನೀಡಬೇಕೆಂಬ ತಂದೆತಾಯಿಯ ಪೂರ್ವಗ್ರಹಗಳು ಬೇರುಬಿಟ್ಟಿವೆ. ಅದರಿಂದ ಶಿಕ್ಷಣದಿಂದ ನಿರಾಕರಿಸಿ ಮನೆಕೆಲಸಕ್ಕೆ ಹಚ್ಚುವುದು ಕಾಣುತ್ತೇವೆ. ಲಿಂಗ ತಾರತಮ್ಯದ ಪ್ರಕ್ರಿಯೆ ಎಷ್ಟು ಬೆರೆತು ಹೋಗಿವೆ ಅಂದ್ರೆ ಸಹಜ ಬದುಕು ಸಹ ನಿರ್ವಹಿಸದ ಹಾಗೆ ನಿರೂಪಿಸಿವೆ. ಅಂದರೆ ಪುರುಷನ ಆಧೀನಳಾಗಿ ಬದುಕು ನಿರ್ವಹಿಸಬೇಕು. ಒಂದು ವೇಳೆ ಹಾಗೇನಾದರೂ ತ್ಯಜಿಸಿದರೆ, ಸಹಜ ಬದುಕಿಗೂ ದಿಕ್ಕು ತಪ್ಪಿಸುವ ನೋಟಗಲಾಗಿವೆ. ಉದಾ: ವಿಧವೆ, ಮದುವೆ ಆಗದೆ ಹಾಗೆ ಉಳಿದರೆ ನಿಂದನೆ, ಶಿಕ್ಷಣದಿಂದಾದರೂ ಈ ಸಮಸ್ಯೆಗಳ ಸಂಕೋಲೆಯಿಂದ ಬಿಡುಗಡೆ ಹೊಂದಬಹುದು. ಪುರುಷನಕ್ಕಿಂತ ಹೆಚ್ಚಿನದನ್ನು ಸಾಧಿಸಬಾರದು, ಬೆಳೆಯಬಾರದು, ಬುದ್ಧಿವಂತಳಾಗಬಾರದು ಎನ್ನುವ ಅಪಕಲ್ಪಿತ ಭಾವನೆಯಿಂದ ಈ ಭಾವನೆಗೆ ಪ್ರತೀಕವಾಗಿಈ ನಡುವಳಿಕೆ, ಬೆಳವಣಿಗೆಗಳು ಇರುವುದರಿಂದ ಶಿಕ್ಷಣಕ್ಕೆ ಸರಳವಾಗಿ ಕುಂಟಿತಗೊಳಿಸುತ್ತವೆ. ಪುರುಷರಿಗೆ ಸದಾ

ಬೆಂಬಲವಾಗಿ ನಿಲ್ಲುವ ಕುಟುಂಬ ಅವರ ಪ್ರತಿ ಹೆಜ್ಜೆಯು ನಿರೀಕ್ಷಿಸುತ್ತದೆ. ಜೊತೆ ಜೊತೆಗೆ ಪ್ರೇರಣೆ ಸಹಕಾರಗಳು ನೀಡುತ್ತದೆ. ಯಾಕೆಂದರೆ ಅನಿರ್ವಾಯವಾಗಿ ಅವರು ಶಿಕ್ಷಣವನ್ನು ಪಡೆಯಬೇಕು. ಲೋಕಜ್ಞಾನವನ್ನು, ಸ್ವಾವಲಂಬಿ ಜೀವನದ ಸುಭದ್ರ ತಳಪಾಯಕ್ಕೆ ಅಗತ್ಯ ಮಾದರಿಯಾಗಿ ರೂಪ ತಾಳುತ್ತವೆ. ಪುರುಷರ ಬದುಕು ನಿರ್ವಹಿಸಲು ಅಗತ್ಯವೆನ್ನುವಷ್ಟರ ಮಟ್ಟಿಗೆ, ಶಿಕ್ಷಣಕ್ಕಾಗಿ, ನೌಕರಿಗಾಗಿ, ಉದ್ದೇಶಪೂರ್ವಕ ಒತ್ತಡ ಸಹಜ ಮಾದರಿಯಲ್ಲೆ ಕುಟುಂಬದ ಸಮಾಜೀಕರಣ ತರಬೇತಿ ಪ್ರಕ್ರಿಯೆ ಜಾರಿಗೊಳ್ಳುತ್ತವೆ. ಇದರಿಂದ ಸ್ವತಂತ್ರ ಸ್ವ-ಇಚ್ಛೆಗಳು ಪುರುಷನಿಗೆ ದೊರಕಿದರೆ, ಮಹಿಳೆಗೆ ಸ್ವ ಇಚ್ಛೆಯ ಆಸೆಗಳು, ಬಯಕೆಗಳಿಗೆ ಕಡಿವಾಣ ಬೀಳುತ್ತವೆ. ಪಿತೃ ಪ್ರಧಾನ ವ್ಯವಸ್ಥೆ ಇರುವುದರಿಂದ ಈ ಉದ್ದೇಶಗಳು ಅನಿವಾರ್ಯವಾಗಿ ರೂಪ ಪಡೆದುಕೊಳ್ಳುತ್ತವೆ.

ಧರ್ಮ

ಧರ್ಮವು ನಮ್ಮ ಸಾಮಾಜಿಕ ಶಿಸ್ತನ್ನು ಮೂಡಿಸಲು ರೂಢಿಗೆ ಬಂದಿರುವ ಸಾಮಾಜಿಕ ಪ್ರಕ್ರಿಯೆಯು ಒಂದು ಸಂಸ್ಥೆಯಾಗಿ ರೂಪ ಪಡೆದುಕೊಂಡಿದೆ. ಮಾನವರ ವಿವಿಧ ರೀತಿಯ ಶಿಸ್ತು, ಚೌಕಟ್ಟು, ನಡುವಳಿಕೆಗಳನ್ನು ಕಲಿಸಿಕೊಡುವ ಒಂದು ಸಾಧನವಾಗಿ ಮನಸ್ಸಿನಲ್ಲಿ ಇಳಿದುಬಿಟ್ಟಿದೆ. ಅದನ್ನು ಆಚರಣೆಗೆ ಮಾಡದೆ ಇದ್ದರೆ ಮಾನಸಿಕವಾಗಿ ಕಸಿವಿಸಿಯ ಒತ್ತಡಕ್ಕೊಳಗಾಗುತ್ತಾರೆ. ಯಾಕೆಂದರೆ ಅದು ಒಟ್ಟಿಗೆ ಕೂಡಿ ಆಚರಿಸುವ, ರೂಢಿಸುವ ಪ್ರಕ್ರಿಯೆಯಾಗಿದ್ದು ಅದಕ್ಕೆ ನಾವು ಹೊರತಾದರೆ ಅಪಕಲ್ಪಿತ ಭಾವನೆ ಸಹಜವಾಗಿ ಮೂಡುತ್ತವೆ. ಧರ್ಮವು ಸಾಮಾಜಿಕರಣದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತದೆ. ಶ್ರದ್ಧೆ, ಶ್ರಮಗಳು ಜೀವನದ ವಿಧಾನಗಳು, ಆಚರಣೆಗಳು, ನಂಬಿಕೆಗಳು ಕಲಿಸುವ ಪ್ರಕ್ರಿಯೆಯಾಗಿದೆ. ಸಮಾಜೀಕರಣವು ಮಗು ಚಿಕ್ಕವರಿರುವಾಗ ನೀಡುವ ಶಿಸ್ತು, ಶ್ರದ್ಧೆ, ನಿಯಮಗಳ ತರಬೇತಿಯು ವಯಸ್ಸಾದ ನಂತರ ಧರ್ಮದಿಂದ ಸಮುದಾಯಕ್ಕನುಗುಣವಾಗಿ ಕಲಿಯುತ್ತಾ ಬರುತ್ತಾರೆ. ಧರ್ಮವು ಮನುಷ್ಯರ ವ್ಯಕ್ತಿತ್ವ ರೂಪಿಸಲು ಸ್ವಯಂ, ತಾಳ್ಮೆ, ಸ್ಥೈರ್ಯಗಳು ಕಲಿಸಿಕೊಡುತ್ತದೆ. ಗುರುಹಿರಿಯರಿಗೆ ಗೌರವದ ಜೊತೆ ಸಮಾಜಕ್ಕನುಗುಣವಾಗಿ ಯಾವ ಮಾರ್ಗದಲ್ಲಿ ಬೆಳೆಯಬೇಕೆನ್ನುವುದು ಪ್ರೇರೇಪಿಸುವ ಪ್ರಮುಖ ಸಾಧನವಾಗಿದೆ. ಇವುಗಳೆಲ್ಲ ಒಳಗೊಂಡ ಪರಿಕಲ್ಪನೆಗಳು ಒಳ್ಳೆಯದೇ ಎನಿಸಬಹುದು. ಮೇಲಿನ ಹಿನ್ನೆಲೆಯಿಂದ ಒಳ್ಳೆಯದೆನಿಸುತ್ತದೆ. ಆದರೂ ಇದರಲ್ಲಿಯೂ ಸಹ ತಾರತಮ್ಯದ ನೋಟಗಳು ಅಡಕವಾಗಿವೆ. ಬಹುಪ್ರಧಾನವಾಗಿ ಪ್ರಪಂಚದಲ್ಲೆಲ್ಲ ಧರ್ಮವು ಪುರುಷರಿಂದಲೇ ರಚನೆಗೊಂಡಿದ್ದು, ಸ್ತ್ರೀಯ ಸ್ಥಾನವು ಎರಡನೆಯದಾಗಿಸಿವೆ. ಎಲ್ಲಾ ಧರ್ಮಗಳಲ್ಲಿ ಹೆಚ್ಚಾಗಿ ಸ್ತ್ರೀಯನ್ನು ಲೆಕ್ಕಕ್ಕಿಲ್ಲದ ಹಾಗೆ ಕಂಡಿವೆ. ಪುರುಷರು ಬೆಳೆದು ಬಂದ ಹಿನ್ನೆಲೆಯಲ್ಲಿಯೇ ಧರ್ಮದ ರಚನೆಗಳು ರಚಿಸಿರುವುದರಿಂದ ಮಹಿಳೆಯನ್ನು ಸಮಾನತೆಯ ತತ್ವದಲ್ಲಿ ಅಳವಡಿಸಿಕೊಂಡಿಲ್ಲ. ಒಂದು ಕಡೆ ಸ್ತ್ರೀಯನ್ನು ಮಾತೆ, ದೇವತೆಯೆಂದು ಪ್ರತಿರೂಪವನ್ನು ಹಚ್ಚಿ ಇನ್ನೊಂದು ಕಡೆ ಆಕೆಗೆ ಯಾವುದೇ

ಸ್ವತಂತ್ರ್ಯವಿಲ್ಲ ಚಂಚಲೆ, ಮಾಯಾವಿನಿ, ಮೋಸಗಾರ್ತಿ, ಕನಿಷ್ಟಳು ಎಂದೆಲ್ಲಾ ಹೇಳಿ ಜಗಿ ಒತ್ತಡಕ್ಕೆ ಸಿಲುಕಿಸಿವೆ.

ಧರ್ಮವನ್ನು ಮಹಿಳೆಯ ಬಗ್ಗೆ ವಕ್ರದೃಷ್ಟಿಕೋನದಿಂದ ಪ್ರತಿರೂಪಿಸಿವೆ. ನೈಸರ್ಗಿರ್ಕವಾಗಿ ಮಹಿಳೆಯ ದೈಹಿಕ ಬದಲಾವಣೆಗಳಾದ ಮುಟ್ಟು, ಬಾಣಂತಿತನ, ಸಹಜ ಪರಿವರ್ತನೆಗೆ ಅಪಕಲ್ಪಿತ ಭಾವನೆಗಳು ಹಚ್ಚಿ ಪ್ರಾಣಿಗಳಿಗಿಂತ ಕನಿಷ್ಟವೆನ್ನುವಂತೆ ದೂರದ ಪ್ರತ್ಯೇಕ ಕೋಣೆಯಲ್ಲಿ ಇಡುವ ವ್ಯವಸ್ಥೆಗಳು ಇದ್ದವು. ಸ್ತ್ರೀಯನ್ನು ಇಂತಹ ಸಂದರ್ಭದ ಏಕಾಂತದ ಸಮಯದಲ್ಲಿ ಎಂತಹ ಮನೋ ವೇದನೆಯನ್ನು ಅನುಭವಿಸರಬಹುದು. ಇದು ಜನರ ಅಜ್ಞಾನವೇ ಈ ಮಾರ್ಗಕ್ಕೆ ದೂಡಲು ಕಾರಣವಾಗಿತ್ತು. ಜೊತೆ ಧರ್ಮದ ಸಹಕಾರವಿರುವುದರಿಂದ ಅದು ಸಹಜವೆನ್ನುವ ಮಾದರಿಯಲ್ಲಿ ಜಾರಿಗೊಳ್ಳುತ್ತಿತ್ತು. ಈ ತಾರತಮ್ಯಗಳು ಕುಟುಂಬದಲ್ಲದೆ, ಸಮಾಜಕ್ಕೂ, ವ್ಯಾಪಿಸಿರುವ ವಿಧಿವಿಧಾನಗಳಾಗಿವೆ.

ಸತಿಸಹಗಮನದಂತಹ ಪದ್ಧತಿಗಳು ಹುಟ್ಟಿದ್ದು, ಈ ಧರ್ಮದಿಂದಲೇ ಎನ್ನಬಹುದು. ಗಂಡನು ಸತ್ತಮೇಲೆ ಚಿತೆಯನ್ನು ಏರಿ ಹೆಂಡತಿಯು ಸಾಯುವ ದುಷ್ಟ ಪದ್ಧತಿಗಳು, ಮುತ್ತೈದೆ ಸೌಭಾಗ್ಯವತಿ ಎನ್ನುವ ಬಿರುದುಗಳು ಜೇರೆಲ್ಲಾ ಸತ್ತಮೇಲೆ ನೀಡುತ್ತಿದ್ದರು. ಸಜೀವವಾಗಿ ದಹಿಸುವ ಹಾಗೆ ಎಲ್ಲಾ ವ್ಯವಸ್ಥೆಗಳು ಸಿದ್ಧಪಡಿಸುತ್ತಿದ್ದರು. ಅಸಹಾಯಕಳಾದ ಮಹಿಳೆ ಪುರುಷ ಚಿಂತನೆಗೆ ಒಳಪಟ್ಟು ತನ್ನ ಪರಿಟಾಲ ಹೇಳತೀರದಿದ್ದರೂ ಅದು ಒತ್ತಾಯ ಪೂರ್ವಕವಾಗಿ ಬಂದಿತ್ತು. ಗಂಡನೇ ಸರ್ವಸ್ವ ಅವನೇ ದೇವರು ಏಳೇಳು ಜನ್ಮದಲ್ಲಿ ಪತಿಯಾಗಿ ಇರಬೇಕು ಎಂದು ಕೇಳಿಕೊಳ್ಳುವ ಪ್ರತೀತಿ ಇನ್ನು ಇದೆ ಎಂದರೆ ತಪ್ಪಿಲ್ಲ. ಅವನು ಎಷ್ಟೇ ಕ್ರೂರಿಯಾಗಿದ್ದರೂ ಆತನನ್ನು ತ್ಯಜಿಸದೆ, ಆತನ ಕಟ್ಟಪ್ಪಣೆಗಳಿಗೆ ಇವಳು ತಲೆಬಾಗಿಸುತ್ತಾಳೆ. ಪುರುಷನು ಹಾಗೆ ಸಲಿಸಾಗಿ ತ್ಯಜಿಸಬಹುದು. ಪುರುಷರಿಗೆ ಸ್ವತಂತ್ರ ಮಹಿಳೆಗೆ ಅತಂತ್ರ ಪರಿಸ್ಥಿತಿಗೆ ಒದಗಿಸುವ ಗಾಢ ನಂಬಿಕೆ ಇದರಲ್ಲಿ ಒಳಗೊಂಡಿದೆ. ಹಲವು ಕಾನೂನುಗಳಿಗೆ ಸತಿಸಹಗಮನ ಇನ್ನಿತರೆ ಪದ್ಧತಿಗಳು ತಟಸ್ಥವಾಗಿವೆ. ಹಲವು ಹೋರಾಟಗಳ ಮೂಲಕ ಸುಧಾರಣೆಯನ್ನು ಕಂಡುಕೊಂಡರು ವಿಧವೆ ಎನ್ನುವ ಪಟ್ಟಿ, ಇಂದು ಸತಿ ಸಹಗಮನದ ಮಾದರಿಯಾಗಿ ರೂಪಗೊಂಡಿದೆ. ವಿಧುರನೆಂಬ ಹೆಸರು ಕೇಳದೆ ಇರುವವರು ಎಷ್ಟೋ ಜನ ದಕ್ಕುತ್ತಾರೆ. ಹಾಗೆಂದರೆ ಏನು ಅನ್ನುವವರು ಇದ್ದಾರೆ, ಸತಿಸಹಗಮನವು ಗಂಡ ಸತ್ತ ಮೇಲೆ ಚಿತೆ ಏರಿ ಪ್ರಾಣ ಬಿಡುವುದು ಇದ್ದರೆ ವಿಧವೆಯು ಜೀವನಪೂರ್ತಿ ಜೀವಂತ ಶವವಾಗಿ ಸಮಾಜದಲ್ಲಿ ಬಾಳಿ ಬದುಕುವ ವ್ಯವಸ್ಥೆಗಳು ಜಾರಿಯಲ್ಲಿವೆ. ಹೆಂಡತಿ ತೀರಿದ ಬಳಿಕ ಕೆಲವೇ ದಿನಗಳಲ್ಲಿ ಮತ್ತೊಂದು ಮದುವೆಗೆ ಸಿದ್ಧತೆ ನಡೆಸುವ ಪುರುಷರು ಸಂಸಾರದ ಹೊರೆಯಾಗಿದೆ ಎನ್ನುವ ಎದುರುತ್ತರ ನೀಡುತ್ತಾರೆ. ಮಹಿಳೆಯು ಸಂಸಾರದ ಭಾರದ ಬಗ್ಗೆ ಪ್ರಕಟಿಸಿ ಮದುವೆ ಬಗ್ಗೆ ಕೇಳಿಕೊಂಡರೆ ಅಪಕಲ್ಪಿತ ಭಾವನೆಗಳು ಅಂಟಿಸುತ್ತಾರೆ. ಇಲ್ಲಿ ಪುರುಷನು ಯಾವ ಮಾದರಿಯಲ್ಲಿಯೂ ಜೀವಿಸಬಹುದು. ಮಹಿಳೆ ಅಸಾಯಕ ಪರಿಸ್ಥಿತಿಯಲ್ಲಿ ಪುರುಷ

ಚಿಂತನೆಯು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಸಮಾಜೀಕರಣದ ಪ್ರಕ್ರಿಯೆ ಲಿಂಗ ತಾರತಮ್ಯದ ವ್ಯತ್ಯಾಸಗಳು ಈ ಚಿಂತನೆಯಲ್ಲಿಯೇ ಬೆಳವಣಿಗೆ ಕಂಡಿವೆ. ಅತಂತ್ರ, ಭಯ, ಆತಂಕದ ಪರಿಸ್ಥಿತಿಗಳು, ಬದುಕಿನ ಬಗ್ಗೆ ಎದುರು ನೋಡುವ ಘಟ್ಟಗಳು ಮಾತ್ರ ಮಹಿಳೆಗೆ ಸೀಮಿತಗೊಳಿಸಿವೆ. ಪುರುಷರಿಗೆ ಈ ಆತಂಕಗಳು ಇರುವುದಿಲ್ಲ. ಇವುಗಳೆಲ್ಲಾ ಸಾಮಾಜದ ಕ್ರಿಯಾ ವಿಧಿವಿಧಾನಗಳಾಗಿ ರೂಪಗೊಂಡಿವೆ. ಧರ್ಮವು ಇನ್ನು ಕೆಲವು ವ್ಯತ್ಯಾಸಗಳಲ್ಲಿ ಮಹಿಳೆಗೆ ಕಟ್ಟಪ್ಪಣೆ ವಿಧಿಸುತ್ತವೆ. ಹುಟ್ಟಿನಿಂದ ಜೀವನದ ಅಂತ್ಯದವರೆಗೆ ಪುರುಷರ ಅಧೀನಳಾಗಿ ಇರಬೇಕಾದ ಆಕೆಗೆ ಯಾವುದೇ ಸ್ವಾತಂತ್ರ್ಯವಿಲ್ಲವೆಂದು ಧರ್ಮದ ಕಟ್ಟಳೆಗಳಲ್ಲಿಯೆ ಮಕ್ಕಳಿಗೆ ಕುಟುಂಬದಲ್ಲಿ ಬೆಳೆಸುತ್ತಾರೆ. ಈ ತತ್ವದ ಹಿನ್ನೆಲೆಯಲ್ಲಿಯೇ ಸ್ವತಂತ್ರ್ಯವಿಲ್ಲದ್ದನ್ನು ಕಂಡು ಮತ್ತು ಸಮಾಜದಲ್ಲಿ ಇರುವ ಪರಿಸ್ಥಿತಿಯನ್ನು ಗ್ರಹಿಸಿ ಅನಿವಾರ್ಯ ಪ್ರಸಂಗಗಳು ಸಿದ್ಧಮಾದರಿಯಾಗುತ್ತವೆ. ಸ್ತ್ರೀಯ ಬಯಕೆ ಆಕಾಂಕ್ಷೆಗಳು ಬದಿಗೊತ್ತುವ ಪ್ರಸಂಗಗಳು ಬರುತ್ತವೆ. ಸ್ತ್ರೀಯ ನಿರ್ಧಾರಗಳು ಸುಲಭವಾಗಿ ಪುರುಷ ಚಿಂತನೆಯ ಒಪ್ಪಿಗೆ ತೆಗೆದುಕೊಳ್ಳಬೇಕಾಗುತ್ತದೆ. ಧರ್ಮವು ಸಮಾಜೀಕರಣ ಕಾರ್ಯದ ಪ್ರತಿರೂಪವಾಗಿ ಕಾರ್ಯನಿರ್ವಹಿಸುವುದರ ಜೊತೆ ಲಿಂಗತಾರತಮ್ಯದ ನೋಟಗಳು ಸಹ ಗಾಢವಾಗಿ ಒಳಗೊಂಡಿವೆ. ಇದರಿಂದ ಮಹಿಳೆಯ ಉಜ್ವಲ ಭವಿಷ್ಯ ನಿರ್ಮಾಣಕ್ಕೆ ತೊಡಕಾಗಿವೆ. ಧರ್ಮವು ಶಿಸ್ತು, ಶ್ರದ್ಧೆ, ನೀತಿ, ನಿಯಮಗಳು ಹೇಳುತ್ತದೆ ನಿಜ. ಅದು ಮಹಿಳೆಯರಿಗೆ ಗಾಢ ಪ್ರಮಾಣವಾಗಿ ಒಳಮೂಡತ್ತವೆ. ಅಂದರೆ ಶಿಸ್ತು, ಶ್ರದ್ಧೆ, ನೀತಿ ನಿಯಮಗಳು ಇರಬಾರದು ಎಂಬ ಅನಿಸಿಕೆಯಲ್ಲ ಇದ್ದರೆ ಸ್ತ್ರೀ ಪುರುಷರಿಗೆ ಸಮವಾಗಿರಬೇಕು. ಇದರಿಂದ ಸಮಾಜವು ಸಮತೋಲನದಲ್ಲಿ ಚಲಿಸುತ್ತದೆ. ಹಲವಾರು ವಿವಿಧ ಸಂಕೋಲೆಗಳಲ್ಲಿ ಮಹಿಳೆ ಇರುವಾಗ ಸಂಕೋಲೆಗಳು ಬಿಡಿಸಿಕೊಳ್ಳಲು ಕೆಲವು ಅವಕಾಶಗಳು ದೊರೆತಾಗ ಸ್ತ್ರೀಯರ ಜೀವನದಲ್ಲಿ ಬದಲಾವಣೆ ಕಂಡುಕೊಳ್ಳಬಹುದು. ಇಲ್ಲಿದಿದ್ದರೆ ತಾರತಮ್ಯ ಸೃಷ್ಟಿಯು ಸ್ತ್ರೀಯ ಸಹಜ ವ್ಯಕ್ತಿತ್ವ ವಿಕಾಸಕ್ಕೆ ತೊಡಕಾಗುತ್ತದೆ.

ಅಡಿಟಿಪ್ಪಣಿಗಳು

೧. ಫ್ರೆಡರಿಕ್ ಎಂಗಲ್ಸ್, ವಾನರರಿಂದ ಮಾನವರವರೆಗೆ, ಪುಟ: ೮

೨. ಟಿ.ಆರ್. ಚಂದ್ರಶೇಖರ, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪುಟ: ೯

೩. ಡಾ. ಎಚ್.ಎಸ್. ಶ್ರೀಮತಿ, ಚಹರೆ, ಪುಟ: ೨

೪. ಡಾ. ಆರ್. ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪುಟ: ೪

೫. ಡಾ. ಎಚ್.ಎಸ್. ಶ್ರೀಮತಿ, ಮೂಲ: ಜೇರಾಲ್ಡಿನ್ ಫೋರ್ಬ್ಸ್, ಆಧುನಿಕ ಭಾರತದಲ್ಲಿ ಮಹಿಳೆ, ಪುಟ : ೫೫

❑

ಅಧ್ಯಾಯ ೩
ಸಮಾಜೀಕರಣ

ಸಮಾಜೀಕರಣ

ಮನುಷ್ಯರು ಮೃಗಗಳಿಗಿಂತ ಭಿನ್ನವಾಗಿ ಬದುಕಲು ಸಮಾಜೀಕರಣದ ಪ್ರಕ್ರಿಯೆ ಅನಿವಾರ್ಯವಾಗಿ ರೂಪತಾಳಿದೆ. ಪೂರಕ ಬದುಕಿನ ಪ್ರತಿರೂಪ ಕಾಪಾಡಲು ಹುಟ್ಟಿಕೊಂಡು ಬಂದ ಸಿದ್ಧತೆ. ಮಾನವರಿಗೆ ಅಗತ್ಯದ ಮಾದರಿಯಾಗಿ ರೂಪತಾಳಿದೆ. ಈ ಸಮಾಜೀಕರಣದ ಅಗತ್ಯ ಎಷ್ಟು ಮುಖ್ಯವೆಂದರೆ ಮಾನವರ ಬದುಕಿನ ಬದಲಾವಣೆಗಳು ಇದರಲ್ಲಿ ಒಳಗೊಂಡಿವೆ. ಪೂರ್ವಯೋಜಿತವಾಗಿ ನೆಲೆಗೊಂಡಿರುವ ಈ ಸಿದ್ಧತೆಗಳ ಕುಟುಂಬದಿಂದಲೇ ಮೂಲವಾಗಿ ಬಂದದ್ದಾಗಿದೆ. ಒಂದು ಮಡಿಕೆ ತಯಾರಿಕೆಗೆ ಕೆಸರನ್ನು ಒಂದು ಹಂತದ ರೂಪಕ್ಕೆ ತರಲು, ಅದು ಮಾಡುವ ಕಾರ್ಯದಿಂದ ಮಡಿಕೆಯ ರೂಪವನ್ನು ಅಳೆಯಬಹುದು. ಹಾಗೆ ಮಾನವರಿಗೂ ತಾವು ಬೆಳೆದು ಬಂದ ಹಿನ್ನೆಲೆಯ ಪ್ರತಿರೂಪಗಳು ಬಿಂಬಿಸಲು ಸಮಾಜೀಕರಣದ ತರಬೇತಿಯಿಂದ ಗುರುತಿಸಬಹುದು. ಈ ತರಬೇತಿಗಳು ಕುಟುಂಬದಲ್ಲಿಯ ಸ್ತ್ರೀಪುರುಷರಿಗೆ ನೀಡುವುದು ಕಾಣುತ್ತೇವೆ. ಯಾವ ಬಗೆಯಲ್ಲಿ ರೂಪಿಸುತ್ತವೆ ಎನ್ನುವುದಕ್ಕಿಂತ ಸಮಾಜೀಕರಣವೆಂದರೆ ಏನು ಎನ್ನುವುದು ತಿಳಿದುಕೊಳ್ಳುವುದು ಒಳಿತು.

ಸಮಾಜೀಕರಣದ ಬಗ್ಗೆ ಹಲವಾರು ಸಮಾಜಶಾಸ್ತ್ರಜ್ಞರು ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅದರಲ್ಲಿ ಲುಂಡಬರ್ಗ್ ಅವರು ಹೇಳಿರುವಂತೆ "ಸಾಮಾಜಿಕ ಸಮೂಹಗಳು ಮತ್ತು ಸಮುದಾಯಗಳಲ್ಲಿ ಪರಿಣಾಮಕಾರಿಯಾಗಿ ಪಾತ್ರವಹಿಸಲು ಅಗತ್ಯವಾದ ಹವ್ಯಾಸಗಳು ನಂಬುಗೆಗಳು, ಕೌಶಲ್ಯಗಳು ಮತ್ತು ಸರಿತಪ್ಪುಗಳ ನಿರ್ಣಯಗಳನ್ನು ವ್ಯಕ್ತಿಯು ಕಲೆತುಕೊಳ್ಳಲು ನೆರವಾಗುವ ಸಂಕೀರ್ಣಮಯವಾದ ಅಃ ತಕ್ರಿಯೆಯ ಪ್ರಕ್ರಿಯೆಗಳನ್ನು ಒಳಗೊಂಡಿರುವುದೇ ಸಮಾಜೀಕರಣ"[೧] ಎಂದಿದ್ದಾರೆ.

ಸಾಮಾನ್ಯವಾದ ಅರ್ಥದಲ್ಲಿ ಹೇಳಬೇಕೆಂದರೆ ಮಾನವರ ಬೆಳವಣಿಗೆಯ ಹಂತಗಳಲ್ಲಿ ಒಬ್ಬರಿಗೊಬ್ಬರು ಹೇಗೆ ಸಹಾಯಕಾರಿಯಾಗಿ ಬಾಳಬೇಕು. ಸಮಾಜದೊಂದಿಗೆ ಹೇಗೆ ಜೀವಿಸಬೇಕು. ಗುರುಹಿರಿಯರಿಗೆ ಹೇಗೆ

ಗೌರವಿಸಬೇಕು. ಒಳ್ಳೆಯ ಕೆಟ್ಟ ಕೆಲಸಗಳು ಯಾವುವು ಶಿಷ್ಟಾಚಾರಗಳನ್ನು ಹೇಗೆ ಪಾಲಿಸಬೇಕು ಈ ಸಮಾಜದ ರೂಢಿಗಳನ್ನು ಪಾಲಿಸಿ ಅಂತರ್ಗತಿಸಿಕೊಳ್ಳುವುದು ಈ ರೀತಿ ನೀತಿಗಳು ಇಷ್ಟವಿರಲಿ ಇಲ್ಲದಿರಲಿ ಪ್ರಕೃತಿ ಸಹಜ ಹುಟ್ಟಿದರನ್ನೂ, ಇದ್ದ ವ್ಯವಸ್ಥೆಗೆ ಬದ್ಧವಾಗಿ ಬದುಕುವುದು. ಈ ಎಲ್ಲಾ ಕಟ್ಟುಪಾಡುಗಳನ್ನು ಚಿಕ್ಕಮಕ್ಕಳಿರುವುದರಿಂದ ರೂಢಿಸಲಾಗುತ್ತದೆ.

ಮನುಷ್ಯರು ಸಂಘಜೀವಿ ಸಮಾಜ ಜೀವಿಗಳಾಗಿ ರಚನೆಗೊಳ್ಳಲು ಮೂಲ ಕಾರಣ ಕುಟುಂಬದ ಮಾನವೀಕರಣದ ಅಂಶಗಳು. ಮನುಷ್ಯತ್ವದ ತಳಹದಿಯನ್ನು ಮುಂದುವರಿಸಲು ಇದು ಜನನವಾದಾಗಿನಿಂದ ಮರಣವಪ್ಪುವವರೆಗೆ ಮುಂದುವರಿಯುವ ಪ್ರಕ್ರಿಯೆಯಾಗಿದೆ. ವ್ಯಕ್ತಿಯ ಭವಿಷ್ಯ ನಿರೂಪಿಸುವಲ್ಲಿ ಕುಟುಂಬದಲ್ಲಿಯ ಸಮಾಜೀಕರಣವು ತುಂಬಾ ಮಹತ್ವವಾದ ಪಾತ್ರ ವಹಿಸುತ್ತದೆ. ಒಂದು ಎಳೆಯ ಮಗುವಿಗೆ ಸಮಾಜೀಕರಣದ ತರಬೇತಿ ನೀಡದೆ ಇದ್ದ ಸಂದರ್ಭದಲ್ಲಿ ಸಮಾಜ ಮತ್ತು ದೇಶ ಅಪಾರ ಪ್ರಮಾಣದ ನಷ್ಟವನ್ನು ಎದುರಿಸಬೇಕಾಗುತ್ತದೆ. ಹುಟ್ಟಿದ ಮಗು ಮಾನವ ಎನಿಸಿಕೊಳ್ಳುವುದು ಈ ಸಮಾಜದಿಂದ ಮಗುವಿನ ವ್ಯಕ್ತಿತ್ವಕ್ಕೆ ಸಮಾಜವು ಅಣಿಯಾಗುತ್ತದೆ. ಬದುಕುವ, ಬೆಳೆಯುವ ಅವಕಾಶಗಳನ್ನು ಕಲ್ಪಿಸುವುದರಿಂದ ಸಮಾಜವು ಮುಖ್ಯ ಪಾತ್ರವನ್ನು ವಹಿಸುತ್ತದೆ. ಮಗುಹುಟ್ಟಿದಾಗ ಅದು ಪ್ರಾಣಿಗಳ ಹಾಗೆ ಇರುತ್ತದೆ. ಮಾನವರ ಕಟ್ಟಳೆಗಳೂ ರೂಢಿಸಲು ಅನೇಕ ರೀತಿಯ ತರಬೇತಿಗಳು ಕುಟುಂಬದ ತಂದೆತಾಯಿಗಳು ಮತ್ತು ಜೊತೆಯಲ್ಲಿ ವಾಸಿಸುವ ಇತರ ಸದಸ್ಯರಿಂದ ಮಗು ಕಲೆತುಕೊಳ್ಳುತ್ತದೆ. ತಮ್ಮ ಮನೆಯ ಸಂಪ್ರದಾಯಕ್ಕೆ ಅನುಗುಣವಾಗಿ ನಡೆದುಕೊಂಡರೆ ಮೆಚ್ಚುಗೆ ಪ್ರೋತ್ಸಾಹ ವ್ಯಕ್ತಪಡಿಸುತ್ತಾರೆ. ಇಲ್ಲದಿದ್ದರೆ ಅಸಮದಾನ ಕೋಪದಿಂದ ಅನೇಕ ರೀತಿಯಲ್ಲಿ ವ್ಯಕ್ತಪಡಿಸುವುದರಿಂದ ಯಾವ ನಡತೆಗಳು ಕುಟುಂಬದವರು ನಿರೀಕ್ಷಿಸುತ್ತಾರೋ ಅದನ್ನು ಕಲಿಯುತ್ತದೆ. ಜೊತೆ ಸುತ್ತಮುತ್ತಲಿನ ವಾತಾವರಣ ಮನೆಯ ವಾತವರಣ ಎರಡನ್ನು ರೂಢಿಸಿಕೊಂಡು ನಿಯಮಬದ್ಧವಾಗಿ ಪ್ರತಿಕ್ರಿಯಿಸುತ್ತದೆ.

ವ್ಯಕ್ತಿಯು ಬೆಳೆಯುತ್ತಾ ಹೋದ ಹಾಗೆಲ್ಲ ಅವರು ಸಮಾಜೀಕರಣಕ್ಕೆ ಒಳಗಾಗಲೇ ಬೇಕಾಗುತ್ತದೆ. ನಾವು ಪ್ರತಿಕ್ರಿಯಿಸುವ ರೀತಿ, ಜೀವನಶೈಲಿ, ದೃಷ್ಟಿ ಆಗುಹೋಗುಗಳು ಮಃನನ ಬೇಕು ಬೇಡಗಳ ಕ್ರಮ. ಬಹಳಷ್ಟನ್ನು ಕುಟುಂಬದಿಂದ ಶಾಲೆ ಗೆಳೆಯರಿಂದ, ಸಮೂಹ ಮಾಧ್ಯಮದಿಂದ ಕಲೆತು ಅವುಗಳಿಗೆ ಒಳಗಾಗಲೇ ಬೇಕಾಗುತ್ತದೆ. ಅದು ಸರಿತಪ್ಪು ಕೆಲವೊಂದು ಒಪ್ಪಿಸಿ ಬಿಡುತ್ತವೆ. ಅದು ಬೆಳವಣಿಗೆಯ ವ್ಯಕ್ತಿಗನುಗುಣವಾಗಿ ನಡೆಯುತ್ತಾ ಬರುತ್ತದೆ. ಅಂತರ್ಗತಿಸಿಕೊಂಡ ವಿಚಾರ ಕಟ್ಟುಪಾಡುಗಳು ಗೊತ್ತು ಗೊತ್ತಿಲ್ಲದ ರೀತಿಯಲ್ಲಿ ಮುಂದೆ ಸಾಗುತ್ತಾ ಇರುತ್ತವೆ. ಅದಕ್ಕಾಗಿ ಮಾನವ ಜೀವಿಯನ್ನು ಮನುಷ್ಯತ್ವದ ಮೌಲ್ಯದ ಕಡೆಗೆ ವಾಲಿಸಲು ಸಮಾಜೀಕರಣದ ಪಾತ್ರ ಗಮನಾರ್ಹವಾದರೂ ಅದರಲ್ಲಿ ಅಗೋಚರವಾಗಿ ನಡೆಯುವ ಅಸಮಾನ ಕಾರ್ಯಗಳು ಅಂಧಕಾರದಲ್ಲಿ ಮುಂದುವರಿಯುತ್ತಲೇ ಬರುತ್ತಿರುವುದನ್ನು ಕಾಣಬಹುದು.

ಅದು ಕುಟುಂಬದಲ್ಲಿ ಲಿಂಗತಾರತಮ್ಯದ ದೃಷ್ಟಿಯಲ್ಲಿ ಮಕ್ಕಳ ಬೆಳವಣಿಗೆಯ ವಿಧಾನಗಳಲ್ಲಿ ರೂಪಿಸುವ, ಕಲಿಸುವ ಕ್ರಮಗಳಲ್ಲಿ ಕಂಡುಕೊಳ್ಳಬಹುದು.

ಕುಟುಂಬದಲ್ಲಿ ಮಕ್ಕಳ ಬೆಳವಣಿಗೆಯು ಸಮಾನ ಪ್ರಮಾಣದಲ್ಲಿಲ್ಲ. ಅದು ತಾರತಮ್ಯದಿಂದ ಕೂಡಿದುದಾಗಿದೆ. "ಒಂದು ಮಗು ಹುಟ್ಟಿದಾಗ ಅದು ಗಂಡು ಅಥವಾ ಹೆಣ್ಣು ಎಂದು ಗುರುತಿಸುತ್ತಾರೆ ಹೊರತು ಒಬ್ಬ ಮಾನವ ಎಂದಲ್ಲ."[3] ಇದು ಕೇವಲ ನಮ್ಮ ದೇಶಕ್ಕಷ್ಟೆ ಸೀಮಿತವಲ್ಲ. ಪ್ರಪಂಚಕ್ಕೂ ಸಂಬಂಧಿಸಿದಾಗಿದೆ. ಕುಟುಂಬದಲ್ಲಿ ಗಂಡುಮಗುವಿಗೆ ತೋರಿಸುವಷ್ಟು ಪ್ರೀತಿಪ್ರೇಮ ಸಹಕಾರಗಳು ಹೆಣ್ಣು ಮಗುವಿಗೆ ದಕ್ಕುವುದಿಲ್ಲ. ಅವರಿಗೆ ಬೆಳೆಸುವ ರೀತಿಯು ಸಹ ಭಿನ್ನ ಪ್ರಮಾಣದಲ್ಲಿ ತರಬೇತಿಗಳು ಕುಟುಂಬದಲ್ಲಿ ರೂಢಿಸುತ್ತಾರೆ. ಸಮಾಜೀಕರಣದ ಪ್ರಕ್ರಿಯೆಗಳು ಹೆಣ್ಣನ್ನು ಲೆಕ್ಕಕ್ಕಿಲ್ಲದ ಹಾಗೆ ಗೋಚರಿಸಿವೆ. ಅಂದರೆ ಹೆಣ್ಣು ಮಗುವಿನ ಗುಣ ಸ್ವಭಾವ ವರ್ತನೆಗಳನ್ನು ರೂಪಿಸುವಲ್ಲಿ ಕುಟುಂಬದ ಪಾತ್ರ ಗಮನಾರ್ಹವಾದರೂ ಅದು ಲಿಂಗ ತಾರತಮ್ಯದ ದೃಷ್ಟಿ ಕೋನದಲ್ಲಿರುವುದು ಗೋಚರಿಸುತ್ತದೆ.

ಮಕ್ಕಳ ಗುಣಸ್ವಭಾವ ರೂಪಿಸುವ ಕುಟುಂಬ

ಮಕ್ಕಳಿಗೆ ನೀಡುವ ಸಮಾಜೀಕರಣ ತರಬೇತಿಯಲ್ಲಿ ಇದ್ದ ವ್ಯವಸ್ಥೆಯ ಪರಿಸ್ಥಿತಿಗೆ ಪೂರಕವಾಗಿ ಭಾವಪೂರ್ಣ ಚಿಂತನೆಗಳನ್ನು ಮಕ್ಕಳ ಮನಸ್ಸಿನಲ್ಲಿ ಬಿತ್ತುತ್ತಿವೆ. ಹೆಣ್ಣು ಮಗುವು ಭಿನ್ನ ಪ್ರಮಾಣದಲ್ಲಿ ಬೆಳೆಯುವ ಹಾಗೆ ಗಂಡುಮಗುವು ಬೇರೆ ಪ್ರಮಾಣದಲ್ಲಿ ಬೆಳೆಯುವ ತಾರತಮ್ಯದ ಸ್ವರೂಪಗಳು ಕುಟುಂಬದ ಸಮಾಜೀಕರಣ ತರಬೇತಿಗಳಲ್ಲಿ ಒಡಮೂಡಿ ಬರುತ್ತಿವೆ. ಹೆಣ್ಣು ಮಗುವಿನ ಬಗ್ಗೆ ಭೇದಗಳು ಹುಟ್ಟಿನಿಂದಲೇ ಪ್ರಾರಂಭವಾಗುತ್ತದೆ. ಮಗು ಹುಟ್ಟಿದ ತಕ್ಷಣದಿಂದ ಕಣ್ಣು ನೋಟದ ಬಗ್ಗೆ ಆಟವಾಡುತ್ತಿರುವಾಗ ಬಟ್ಟೆಯಿಂದ ಶರೀರ ಮುಚ್ಚುವುದು ಇವುಗಳೆಲ್ಲ ಸಹಜದಿಂದ ಸಿದ್ದ ಮಾದರಿಗೆ ತರಲು ಪೂರ್ವಯೋಜಿತ ತರಬೇತಿ ಕುಟುಂಬದಲ್ಲಿ ದೊರೆಯುತ್ತದೆ.

ಮೊದಲ ಅಧ್ಯಯದಲ್ಲಿ ತಿಳಿದುಕೊಂಡಿರುವ ಲಿಂಗ ತಾರತಮ್ಯ ವ್ಯತ್ಯಾಸದ ಚಿಂತನೆಯ ಕುಟುಂಬದ ಸಮಾಜೀಕರಣದಲ್ಲಿ ಮೂಲವಾಗಿ ಹೇಗೆ ಭಿನ್ನವಾಗುತ್ತದೆ ಎನ್ನುವುದು. ಇಲ್ಲಿ ಮಗು ತಂದೆತಾಯಿಯ ಸಲಹೆ. ಸೂಚನೆ, ನಂಬಿಕೆ ಕ್ರಿಯೆಗಳು ವಿಮರ್ಶಿಸದೇ ಒಪ್ಪಿಕೊಂಡು ಬಿಡುತ್ತದೆ. ಹುಡುಗಿಗೆ, ನಯ ನಾಜೂಕತನ ತರಬೇತಿ ನೀಡಿದರೆ. ಹುಡುಗನಿಗೆ ಒರಟು, ಸ್ವಪ್ರತಿಷ್ಠೆಯ ತರಬೇತಿಗಳು ಚಿಕ್ಕವರಿರುವಾಗಲೇ ರೂಢಿಸಿ ಬಿಡಲಾಗುತ್ತದೆ. ಮಕ್ಕಳ ಮನಸ್ಸು ಹಿರಿಯರನ್ನು ಅನುಕರಿಸಿ ಕಲಿಯುವ ಮನಸ್ಸಾಗಿರುತ್ತದೆ. ಯಾವುದೇ ಮಾದರಿಯ ರಚನೆಯನ್ನು ಬೆಳೆಸುವ ವಿಧಾನದಿಂದ ಗುರುತಿಸಬಹುದು. ತಂದೆತಾಯಿಯರ ಸಲಹೆಯು ಹೀಗೆ ಮಾಡು, ಹೀಗೆ ಇರು ಮೇಲೇರಬೇಡ ಮನಬಂದ ಹಾಗೆ ವರ್ತಿಸಬೇಡವೆನ್ನುವ ರೂಪರೇಷಗಳು ಸ್ತ್ರೀಗೆ ಇಲ್ಲಿ ಹೆಚ್ಚು ಚೌಕಟ್ಟುಗಳು ರಚನೆಗೊಳ್ಳುತ್ತವೆ. ಕಟ್ಟುಪ್ಪಣೆಗೆ ಅನುಗುಣವಾಗಿ ಬೆಳವಣಿಗೆ ಹೊಂದಲು ಸಲಹೆಗಳು

ನೀಡುತ್ತಿರುತ್ತಾರೆ. ಸಲಹೆಗೆ ಅನುಗುಣವಾಗಿ ಹೆಣ್ಣು ಮಗು ಕಲಿಯುತ್ತಿರುತ್ತದೆ. ತಪ್ಪು ಸರಿ ವಿಕ್ಷೀಸಲು ಹೋಗುವುದಿಲ್ಲ. ತಂದೆತಾಯಿಯರ ನಿರ್ಣಯವೇ ಮಗುವಿನ ರೂಢಿಗತವಾಗುತ್ತದೆ. ಅವಲಂಬಿತವಾಗಿರುವ ಮಗು ಸೂಚನೆಗೆ ಅನುಗುಣವಾಗಿ ನಡೆಯುತ್ತಿರುತ್ತದೆ. ಚಿಕ್ಕವರಿರುವಾಗ ರೂಢಿಸುವ ಗುಣಗಳು ಮುಂದುವರಿಯುತ್ತ, ಗಟ್ಟಿಗೊಳ್ಳುತ್ತಾ ಸಾಗುವ ಪ್ರಕ್ರಿಯೆಯಾಗಿ ಜಾರಿಗೊಳ್ಳುತ್ತದೆ.

ಹೆಣ್ಣು ಮಗುವಿನ ಬಗ್ಗೆ ಕುಟುಂಬದಲ್ಲಿ ಹೆಚ್ಚು ಮಾತನಾಡಬಾರದು, ಅಪಹಾಸ್ಯವಾಗಿ ನಗಬಾರದು, ಬಾಲ್ಯದಲ್ಲಿ ಮೂಲಭೂತ ಸಮಾರ್ಥ್ಯಗಳು ವಿಕಸನಗೊಳಿಸಲು ಅದಕ್ಕೆ ಅವಕಾಶ ನೀಡುವುದಿಲ್ಲ. ಕುಟುಂಬದಲ್ಲಿಯ ಈ ಮಾದರಿಯ ಬೆಳವಣಿಗೆಯು ಸೂಕ್ಷ್ಮದಾಗಿರುತ್ತದೆ. ತಿಳಿದು ತಿಳಿಯದೆಯೋ ನಡೆಯುತ್ತಿರುತ್ತವೆ. ಯಾಕೆಂದರೆ ಸೃಷ್ಟಿಗೊಂಡಿರುವ ಪರಿಸರವೇ ಅದೇ ಮಾದರಿಯಲ್ಲಿರುವಾಗ ಅದಕ್ಕೆ ಪೂರಕವಾಗಿ ರಚನೆಗೊಳ್ಳುವ ಹಾಗೆ ಮಕ್ಕಳಲ್ಲಿ ತರಬೇತಿಯು ಮೂಲವಾಗಿ ಸಾಗುತ್ತಿರುತ್ತವೆ.

ಮಕ್ಕಳ ಸ್ವಭಾವಗಳು ಸೂಕ್ಷ್ಮವಾಗಿದ್ದು ಕಲಿಕೆಯ ಮಾದರಿಯನ್ನು ಅನುಸರಿಸುವವಾಗಿರುತ್ತವೆ. ಯಾವ ರೀತಿಯ ಸ್ವಭಾವಗಳು ಬೆಳವಣಿಗೆಗನುಗುಣವಾಗಿ ಪ್ರೋತ್ಸಾಹಿಸುತ್ತಾರೆ. ಆ ನಿಟ್ಟಿನಲ್ಲಿ ಮಕ್ಕಳು ಕಲಿಯಲು ಪ್ರಾರಂಭಿಸುತ್ತವೆ. ಮಕ್ಕಳ ಸಹಜ ಸ್ವಭಾವದಲ್ಲಿ ಸ್ತ್ರೀಗೆ ಪ್ರೋತ್ಸಾಹವನ್ನು ನೀಡುವುದಿಲ್ಲ. ಸಮಾಜೀಕರಣವು ಜೀವನಪೂರ್ತಿಯಾಗಿ ಒಳಗಾಗುವ ಅನುವು ಮಾಡಿಕೊಟ್ಟ ಹಾಗೆ ಆಗುತ್ತದೆ. ಇದೇ ಮಾದರಿಯಾಗಿ ಬೆಳವಣಿಗೆಯು ಕಂಡಾಗ ಒಳ್ಳೆಯ ಚಟುವಟಿಕೆಗಳು ಪ್ರತಿಭೆಗಳು ಕೆಲವು ಸಂದರ್ಭದಲ್ಲಿ ಬಾಡಿ ಹೋಗುವ ಸಂದರ್ಭಗಳು ಇರುತ್ತವೆ. ಸ್ಪರ್ಧೆಯು ಪ್ರತಿ ಜೀವಿಯಲ್ಲಿ ಇರುತ್ತದೆ. ಅದಕ್ಕೆ ಸೂಕ್ತ ಪ್ರತಿಕ್ರಿಯೆ ಪ್ರೋತ್ಸಾಹಗಳು ದೊರೆತಾಗ ಸಹಜತೆಯನ್ನು ಹೊರಹಾಕಲು ಅಡ್ಡಿ ಆತಂಕಗಳಾಗದೂ. ಆ ಪ್ರತಿಕ್ರಿಯೆಗಳು ರಚನೆಗೊಳ್ಳಲು ಗುಣಸ್ವಭಾವಗಳು ಉತ್ತಮ ಮಾರ್ಗದಲ್ಲಿದ್ದಾಗ ಒಳ್ಳೆಯ ವ್ಯಕ್ತಿತ್ವ ವಿಕಸನಗೊಳಿಸಬಹುದು. ಇಲ್ಲದಿದ್ದರೆ, ಭಯ ಅಂಜಿಕೆಯಿಂದ ಹಿಂಜರಿಕೆಗಳು ಹುಟ್ಟಿಕೊಂಡು ಬಿಡುತ್ತವೆ. ಒಳ್ಳೆಯ ವಾತಾವರಣ ಕುಟುಂಬದಲ್ಲಿ ಸಿಗದೇ ಇದ್ದ ಪಕ್ಷದಲ್ಲಿ ಮಕ್ಕಳ ಮನಸ್ಸು ಗೊಂದಲಕ್ಕೆ ಕಾರಣವಾಗುತ್ತದೆ. ಗುಣ ಸ್ವಭಾವ ರಚನೆಯಲ್ಲಿ ಸ್ತ್ರೀಗೆ ಪ್ರೋತ್ಸಾಹದಾಯಕ ಪ್ರೇರಣೆಗಳು ಇರುವುದು ತುಂಬಾ ಕಡಿಮೆ.

ಮಕ್ಕಳ ವರ್ತನೆ

ಮಕ್ಕಳ ವರ್ತನೆ ನಿಶ್ಚಲವಾಗಿದ್ದು ಮೂಲ ಪ್ರೇರಣೆ ಆಧರಿಸಿ ಅವಲೋಕಿಸುವುದರ ಮೂಲಕ ಕಲಿಯುತ್ತದೆ. ಒಬ್ಬರ ನಡುವಳಿಕೆಗಳನ್ನು ಅನುಕರಿಸಿ ಕಲಿಸುವ ಪರಿಪಾಠ ಮಾನವರ ವರ್ತನೆಯಲ್ಲಿ ಇದೆ. ನಡವಳಿಕೆಗಳು ಮತ್ತು ಇರುವ ಸ್ಥಿತಿಯನ್ನು ಒಬ್ಬರಿಂದ ಮತ್ತೊಬ್ಬರಿಗೆ ದಾಟಿಸುವುದೇ ಆಗಿದೆ. ಮಕ್ಕಳ ವರ್ತನೆಗಳು ವ್ಯಕ್ತಿತ್ವ ವಿಕಾಸದ ಮೂಲ ತಳಪಾಯವು ಆಗುವ ಸಂದರ್ಭವಿರುತ್ತದೆ. ಪ್ರೀಯವೆನಿಸಿದ ನಡುವಳಿಕೆಗಳು ಅವೇ ಮುದುವರಿದಾಗ ವ್ಯಕ್ತಿತ್ವ ಉತ್ತಮಗೊಳ್ಳಬಹುದು. ಇಲ್ಲವೆ ಗೊಂದಲಕ್ಕೆ ಸಿಲುಕಬಹುದು. ಕುಟುಂಬದ ಪರಿಸರಕ್ಕನುಗುಣವಾಗಿ ವರ್ತನೆಗಳು ರೂಪಗೊಳ್ಳುತ್ತವೆ.

ಉದಾ: ತಾಯಿಯು ಅಡುಗೆ ಪಾತ್ರದಲ್ಲಿ ಸಿದ್ಧಗೊಂಡರೆ ಹೆಣ್ಣು ಮಗುವು ನಾನು ಅಡುಗೆ ಮಾಡಬೇಕು ಎನ್ನುವ ಕಲಿಕೆ ಗುರುತಿಸುತ್ತದೆ. ಅದೇ ಮಾದರಿಯಾಗಿ ಕಲಿಯುವುದು ಸಹ ಇರುತ್ತದೆ. ಸಾಮಾನ್ಯವಾಗಿ ಚಿಕ್ಕಮಕ್ಕಳು ಆಟವಾಡುವ ಸಂದರ್ಭದಲ್ಲಿ ಹೆಣ್ಣು ಮಗು ಚಿಕ್ಕ ಚಿಕ್ಕ ಮಡಿಕೆ ಎಲೆಯಿಂದ ಕೂಡಿಸಿ ಅಡುಗೆ ಮಾಡುವುದು ಕಾಣುತ್ತೇವೆ. ಹಾಗೆ ಶೃಂಗಾರಿಸಿಕೊಳ್ಳುವುದು, ಸೀರೆ ಉಟ್ಟುಕೊಳ್ಳುವುದು, ಸಾಮಾನ್ಯವಾಗಿ ನಾಚಿಕೊಳ್ಳುವುದು ಇವು ಮಕ್ಕಳು ತಾಯಿಯನ್ನು ಅನುಸರಿಸಿ ಕಲಿತರೆ ತಂದೆಯನ್ನು ಅನುಸರಿಸಿ ಮಗನು ಕಲಿಯುತ್ತಾನೆ.

ಶಿಸು ಸಮಾಜದಲ್ಲಿ ಮುಂದುವರಿಯುವುದರಿಂದ ತಂದೆತಾಯಿಯರ ವರ್ತನೆಯೂ ಅನ್ಯರಿಗೂ ದಾರಿದೀಪವಾಗುತ್ತದೆ. ಸನ್ನಿವೇಶಕ್ಕೆ ತಕ್ಕಂತೆ ವರ್ತಿಸುವ ಸಾಮಾನ್ಯಗುಣ ಮಗುವಿನಲ್ಲಿ ಇರುತ್ತದೆ. ತಂದೆತಾಯಿಯರ ರೀತಿ ನೀತಿಗಳು ನಡುವಳಿಕೆಗಳು ತೋರುವ ಪ್ರೀತಿ ಪ್ರೇಮದ ಅಧಿಕಾರದ ನಿರ್ದೇಶನಗಳು ಮಕ್ಕಳು ತಮ್ಮ ಮನೋಸ್ಥಿತಿಗೆ ಅನುಗುಣವಾಗಿ ಕಲಿಯುತ್ತಾರೆ. ಸಮಾಜದಲ್ಲಿ ರೂಪಿತವಾಗಿರುವ ಹೆಣ್ಣು ಗಂಡಿನ ಪಾತ್ರಗಳು ಈ ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುವ ಅಂಶಗಳು ಸಹ ಆಗುತ್ತವೆ. ಭಾವುಕ ಮನಸ್ಸಿನ ಮಕ್ಕಳಲ್ಲಿ ಕಲಿಕೆಯ ಸಿದ್ಧಾಂತಕ್ಕನುಗುಣವಾಗಿ ರೂಡಿಸಿಕೊಳ್ಳುವುದು ಮಾದರಿಯಾಗುತ್ತದೆ.

ಬಾಲ್ಯವಧಿಯ ಈ ಸಮಾಜೀಕರಣದ ತರಬೇತಿ ಪ್ರಕ್ರಿಯೆಯು ವ್ಯಕ್ತಿಯ ಅಗತ್ಯವಾದ ಕೌಶಲ್ಯಗಳನ್ನು ರೂಢಿಸುವುದಲ್ಲದೆ ತನ್ನತನದ ಗುರುತಿಸುವಿಕೆಯನ್ನು ಜವಾಬ್ದಾರಿಯುತ ಪಾತ್ರನಿರ್ವಹಣೆಯಲ್ಲಿ ಕಲಿಯುವುದೇ ಆಗಿದೆ. ತಂದೆಮಾಡುವ ಕಾರ್ಯ ಮಗನು ಮಾಡುವುದು ತಾಯಿ ಮಾಡುವ ಕಾರ್ಯ ಮಗಳು ಮಾಡುವುದು ಹಾಗೆ ರೂಪಿಸಿ ಬಿಡಲಾಗುತ್ತೆ. ಇದರಿಂದ ಇತರೆ ಸಲಹೆ ಸೂಚನೆ ವಿಮರ್ಶಿಸದೆ ಒಪ್ಪುವುದರಿಂದ ಲಿಂಗ ತಾರತಮ್ಯಗಳು ಸೃಷ್ಟಿಯಾಗಿ ಬಿಡುತ್ತದೆ.

ಕುಟುಂಬದಲ್ಲಿ ಮಕ್ಕಳ ಭೇದದ ಸ್ವರೂಪ

ಮಕ್ಕಳ ಗುಣ,ಸ್ವಭಾವ, ವರ್ತನೆಗನುಗುಣವಾಗಿ ಲಿಂಗ ತಾರತಮ್ಯದ ಬೆಳವಣಿಗೆಗನುಗುಣವಾಗಿ ಮಕ್ಕಳ ನಡುವೆ ಭೇದಗಳೂ ರೂಪ ತಾಳುತ್ತವೆ. ಸಮಾಜೀಕರಣದಲ್ಲಿ ಮಕ್ಕಳ ತರಬೇತಿಗಳಿಗನುಗುಣವಾಗಿ ಭೇದಗಳು ವಿಕಾಸಗೊಳ್ಳುತ್ತಾ ಹೋಗುತ್ತವೆ. ನಮ್ಮ ಸಮಾಜದಲ್ಲಿ ಮಹಿಳೆ ಮತ್ತು ಪುರುಷರ ಭಿನ್ನತೆಗಳು ಮಕ್ಕಳಿಗೂ ದಾಟಿಸುವ ಪ್ರಕ್ರಿಯೆಯಾಗಿ ಮುಂದುವರಿಯುತ್ತಿದೆ. ಕುಟುಂಬದಲ್ಲಿ ತಂದೆತಾಯಿಗಳು ಅಸಮಾನತೆಯಲ್ಲಿ ಬೆರೆತು ಹೋಗಿದ್ದರೆ. ಅದನ್ನು ಮಕ್ಕಳಿಗೆ ಕಲಿಸುವ, ರೂಢಿಸುವ, ಮಾದರಿಯಾಗಿ ರಚನೆಗೊಳ್ಳುತ್ತದೆ.

ಕುಟುಂಬದಲ್ಲಿ ಮಕ್ಕಳ ನಡುವೆ ಬೇದಗಳು ಕಾಣುತ್ತೇವೆ. ಹುಡುಗನು ಸ್ವತಂತ್ರವಾಗಿರುವ ಹುಡುಗಿ ಕೆಲಸ ಕಾರ್ಯದಲ್ಲಿ ನಿರತವಾಗಿರುವ ನೋಟಗಳಿವೆ. ತಂದೆತಾಯಿಯ ಹೇಳಿಕೆ ಸಲಹೆಗೆ ಅನುಗುಣವಾಗಿ ಕಾರ್ಯನಿರ್ವಹಿಸುವುದರಿಂದ ಅಸಮಾನತೆ ಇದ್ದರೂ ಮುಂದುವರಿಯುತ್ತಿರುತ್ತವೆ. ತಂದೆತಾಯಿಗಳು ಮಗನನ್ನು

ಕಸ ಗುಡಿಸಲು ಹೇಳುವುದಿಲ್ಲ. ಮಗಳನ್ನು ಸ್ವತಂತ್ರ್ಯವಾಗಿ ಹೊರಗಡೆ ಚಲಿಸುವ ಪ್ರೇರೇಪಿಸುವುದಿಲ್ಲ. ಇದರಿಂದ ಹೆಣ್ಣು ಮಗು ಈ ಪಾತ್ರಗಳು ತೊಳೆಯುವುದು, ಮನೆಯಲ್ಲಿ ಇರುವುದು, ಸನ್ನ ಕಾರ್ಯವೆಸ್ನುವಷ್ಟರ ಮಟ್ಟಿಗೆ ಬೆರೆಯಲು ಕಾರಣವಾಗುತ್ತದೆ. ಯಾಕೆಂದರೆ ತಂದೆತಾಯಿಯ ಮೂಲ ಪ್ರೇರಣೆ ಪಾತ್ರಕ್ಕನುಗುಣವಾಗಿ ಇರುವಾಗ ತಾರತಮ್ಯಗಳು ಸಹಜವಾಗಿ ಕುಟುಂಬದಲ್ಲಿ ತರಬೇತಿಗಳನ್ನು ಪಡೆದುಕೊಂಡು ಅಂತರ್ಗತಿಸಿಕೊಳ್ಳುತ್ತವೆ. ಸರಿತಪ್ಪುಗಳು ಒಪ್ಪಿಗೆಗಳನ್ನು ಸೂಚಿಸುವ ಹಾಗಿರುವುದಿಲ್ಲ. ಸಮಾಜದಲ್ಲಿ ಹುಟ್ಟಿಕೊಂಡಿರುವ ಭೇದವು ವಿಸ್ತಾರವಾಗುತ್ತಿರುವುದು ಕಾಣುತ್ತವೆ. ಕುಟುಂಬದ ಅವಶ್ಯಕತೆಗೆ ಅನುಗುಣವಾಗಿ ಕೆಲಸಕಾರ್ಯಗಳು ನಿರ್ವಹಿಸುವ ಸಂದರ್ಭದಲ್ಲಿ ತಾರತಮ್ಯಗಳು ಬೆರೆಸುವುದು ಕಾಣುತ್ತೇವೆ.

ಮಕ್ಕಳಲ್ಲಿನ ಸಿಟ್ಟು ಕೋಪಗಳು ಧ್ವಂಸ ಮಾಡಲು ತಂದೆತಾಯಿಗಳು ವಿಶೇಷವಾಗಿ ಹೆಣ್ಣು ಮಗುವಿಗೆ ಕಟ್ಟಪ್ಪಣೆಗಳು ಬೀರುತ್ತಾರೆ. ಗಂಡು ಮಗು ಈ ರೀತಿ ವರ್ತಿಸಿದರೆ, ಸಂತೋಷಪಡುವ ಎಷ್ಟೋ ತಂದೆತಾಯಿಗಳು ಗೋಚರಿಸುತ್ತಾರೆ. ಅಂದರೆ ಈ ತಾತ್ಪರ್ಯದ ಹಿನ್ನೆಲೆ ಹೆಣ್ಣು ಮಗು ಸಿಟ್ಟು, ಕೋಪ, ದ್ವೇಷ ಇರಬಾರದು. ಈ ರೀತಿ ವರ್ತಿಸಿದರೆ ಸೂಕ್ತ ಕಟ್ಟಪ್ಪಣೆ ಬೀರಿ ಮುಂದೆ ಮಾರಕವಾಗುವ ಸೂಚನೆಗಳು ಬೇರೆ ತಂದೆತಾಯಿಗಳು ನೀಡುತ್ತಾರೆ. ಇದನ್ನು ರೂಢಿಸಿ ಬಂದಿರತಕ್ಕಂತಹ ಹೆಣ್ಣು ಮಗು ಅಂಜಿಕೆ ಸಂಕೋಚಗಳಿಗೆ ಎಡೆಮಾಡಿಕೊಡುತ್ತದೆ. ಗಂಡು ಮಗುವಿಗೂ ಸಿಟ್ಟು, ಕೋಟ, ದ್ವೇಷ ಮಾರ್ಗದಲ್ಲಿ ಪ್ರೇರೇಪಣೆ ನೀಡಬಾರದು. ಅದು ಯಾರಿಗೂ ಒಳಿತೂ ಸಹ ಅಲ್ಲ ಗಂಡು ಮಗನ ಪ್ರತಿಷ್ಠೆಗೋಸ್ಕರ ಈ ರೀತಿ ಪ್ರೋತ್ಸಾಹಗಳು ಕುಟುಂಬದ ಸಮಾಜೀಕರಣದಲ್ಲಿದೆ. ಮಹಿಳೆ ಪ್ರತಿಷ್ಠೆಯ ಪ್ರತೀಕವಲ್ಲದ ಹಾಗೆ ಪ್ರೇರೇಪಿಸಿದ ತಾರತಮ್ಯಗಳು ಹುಟ್ಟುಹಾಕಲು ಕಾರಣವಾಗುತ್ತದೆ.

ಪ್ರೀತಿ ಪ್ರೇಮ ಸಹಕಾರದ ಅನುಕರುಣೆಗಳು ತಂದೆತಾಯಿಯರ ಮನಸ್ಸಿನಲ್ಲಿ ಹೆಣ್ಣು ಗಂಡು ಮಗುವಿನ ಬಗ್ಗೆ ಮುಂಚಿತವಾಗಿ ಅರಿತುಕೊಂಡಿರುತ್ತಾರೆ. ಯಾಕೆಂದರೆ ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳು, ವ್ಯವಸ್ಥೆಗಳು, ಹೆಣ್ಣು ಮಗುವಿನ ಅಪ ಪ್ರಚಾರಗಳ ಸಮಸ್ಯೆಗಳು ಅರಿತಿರುವುದರಿಂದ ಪ್ರೀತಿ ಪ್ರೇಮ, ಸಹಕಾರ ತರಬೇತಿಗಳು ಭಿನ್ನವಾಗಿ ನೀಡುತ್ತಾರೆ. ಗಂಡು ಮಗುವಿಗೆ ಪ್ರೀತಿಸುವುದರ ಹಿನ್ನೆಲೆ ವಂಶ ವೃದ್ಧಾಪಕ, ವಯೋ ವೃದ್ಧ ಸಂದರ್ಭದಲ್ಲಿ ಅನುಕೂಲಗಳು, ಸರ್ವಾಧಿಕಾರದ ಪಾತ್ರಗಳು, ಗಂಡುಮಗುವಿನ ಬಗ್ಗೆ ಸಮಾಜದಲ್ಲಿ ಗೌರವದ ಸ್ಥಾನಮಾನ ಕುಟುಂಬದ ಶಕ್ತಿಯ ಪ್ರತೀಕ, ಸಮಾಜದ ಹೆಚ್ಚು ನಿರ್ಬಂಧಗಳಿಲ್ಲ. ಇನ್ನಿತರ ವ್ಯವಸ್ಥೆಗಳು ಸಮಾಜದಲ್ಲಿ ಗಂಡು ಮಗುವಿನ ಪಾಲಿಗೆ ಇರುವುದರಿಂದ ಅವನ ಹುಟ್ಟು ಸಹ ಸಂತೋಷವಾಗಿ ಸ್ವಾಗತಿಸುತ್ತಾರೆ. ಹೆಣ್ಣು ಮಗು ವಂಶವೃದ್ಧಾಪಕಳಲ್ಲ, ತಂದೆ ತಾಯಿಯನ್ನು ಪೋಷಿಸುವ ಹಾಗಿಲ್ಲ. ಅಧಿಕಾರದ ಸ್ಥಾನಮಾನಗಳಿಲ್ಲ. ವರದಕ್ಷಿಣೆ ಭಾರ ಸಮಾಜದಲ್ಲಿ ನಿರುತ್ಸಾಹದ ಮನೋಭಾವ, ಹೆಣ್ಣು ಮಗು ಶಕ್ತಿಯ ಪ್ರತೀಕವಲ್ಲ. ಸಮಸ್ಯೆಗಳ ಪ್ರತೀಕವಾಗಿ ಗೋಚರಿಸುವುದರಿಂದ ಹೆಣ್ಣು ಮಗುವಿನ ಹುಟ್ಟು ಸಹ

ಸಂತೋಷವಾಗಿ ಸ್ವೀಕರಿಸುವವರು ವಿರಳ. ಉಳಿದವರು ತೋರಿಕೆಗಾಗಿ ಸಂತೋಷ ವ್ಯಕ್ತಪಡಿಸಿದರು. ಮನಸ್ಸಿನಲ್ಲಿ ಕಪ್ಪುಕಲೆ ಮೂಡಿರುತ್ತದೆ. ಆದರೂ ಅನಿವಾರ್ಯವೆಂದು ಬೆಳೆಸಲು ಪ್ರಯತ್ನಿಸುತ್ತಾರೆ. ಇದು ಸಮಾನತೆಯಿಂದ ಸುಧಾರಣೆ ಹೊಂದಿದ ಕುಟುಂಬಗಳನ್ನು ಹೊರತುಪಡಿಸಿ ಕಾಣುತ್ತೇವೆ.

ಹೆಣ್ಣು ಎಂದಾಕ್ಷಣ ಉದಾಸೀನ ತೋರುವ ಈ ಸಮಾಜ ಅವಳಿಂದ ಯಾವ ಅಪೇಕ್ಷೆಯು ಬಯಸುವುದಿಲ್ಲ. ಅವಳ ಪ್ರತಿಭೆಗೆ ತಣ್ಣೀರೆರಚುವ ನಾನಾ ವಿವಿಧ ವಲಯಗಳು ಅಲ್ಪ ಸ್ವಲ್ಪ ಪ್ರೋತ್ಸಾಹಿಸಿದರು. ಅಪಾರ ಪ್ರಮಾಣ ನಷ್ಟವೇ ಕಾಣುತ್ತೇವೆ. ಈ ಹಂತಗಳು ಕುಟುಂಬದಿಂದ ವಿಘಟಿತಗೊಳ್ಳುತ್ತವೆ. ಹೆಣ್ಣು ಮಗುವನ್ನು ಕಾಣುವ ರೀತಿ ಬೇರೆ ಪ್ರಮಾಣದಾಗಿರುತ್ತದೆ. ೪-೫ ವರ್ಷದಲ್ಲಿ ಹೆಣ್ಣು ಮಗುವೇ ಮಗುವಾಗಿರುವಾಗ, ಮತ್ತೊಂದು ಮಗುವನ್ನು ಎತ್ತಿಕೊಂಡು ಆಡಿಸಬೇಕು. ಅದಕ್ಕೆ ಜೋಪಾಗಿಸಬೇಕು, ಕಸ ಗುಡಿಸಬೇಕು, ಪಾತ್ರೆಗಳನ್ನು ತೊಳೆಯಬೇಕು, ಅಡುಗೆ ಕೆಲಸದಲ್ಲಿ ಸಹಾಯ ಮಾಡಬೇಕು. ನಾನಾ ರೀತಿಯ ಕೆಲಸಗಳು ಬೆಳಿಗ್ಗೆಯಿಂದ ರಾತ್ರಿಯವರೆಗೆ ನಡೆದೆ ಇರುತ್ತವೆ. ಹುಡುಗನಿಗಿಂತಲೂ ಸ್ವಚ್ಛಂದ ಸ್ವತಂತ್ರ್ಯ ಸವಲತ್ತುಗಳು ಒದಗಿಸುತ್ತಲೇ ಕುಟುಂಬವು ಅವಕಾಶಗಳು ಒದಗಿಸುತ್ತಲೇ ಬರುತ್ತವೆ. ಈ ಮಗು ನಮ್ಮ ವಂಶವೃದ್ಧಾಪಕ ಜೀವನ ಪೂರ್ತಿ ನಮ್ಮ ಜೊತೆಯಲ್ಲಿಯೇ ಕಳೆಯುವವನು. ಇವನಿಗೆ ಚೆನ್ನಾಗಿ ಓದಿಸಿ ಯಾವುದೇ ಕೆಲಸ ತಾಪತ್ರಯ ಹಚ್ಚದೆ ವಿದ್ಯಾವಂತ ಬುದ್ಧಿವಂತನನ್ನಾಗಿ ಮಾಡಬೇಕು. ಇವನು ನಮ್ಮ ರಕ್ಷಕ ಎನ್ನುವ ಮನೋಭಾವನೆಗಳು ಬೇರು ಬಿಟ್ಟಿವೆ. ಸ್ತ್ರೀಯನ್ನು ತಾರತಮ್ಯ ದೃಷ್ಟಿಯಲ್ಲಿ ಕಂಡರಿಯದ ನೋಟಗಳು ಬೆಳವಣಿಗೆ ಪೂರ್ವದಲ್ಲಿಯೇ ಈ ಹಂತಗಳನ್ನು ಕಾಣುತ್ತೇವೆ. ಕುಟುಂಬದ ಹಿರಿಯರು ಹೇಳಿದುದನ್ನು ಕೇಳುವ ಪರಿಗುಣ ಸಮಾಜೀಕರಣದಲ್ಲಿದೆ. ಗಂಡು ಮಗು ಬೆಳೆಸುವ ರೀತಿಯಾಗಲಿ, ಹೆಣ್ಣು ಮಗು ಬೆಳೆಸುವ ರೀತಿಯಾಗಲಿ ಅಸಮಾನತೆಯು ಆಗರವಾದರೂ ಕಲೆತು ಬರಲು ಮಕ್ಕಳು ನಿರಂತರವಾಗಿರುತ್ತವೆ. ಮಕ್ಕಳ ಮನಸ್ಸು, ಬುದ್ಧಿ ವಿಕಾಸವಾಗಿರುವುದಿಲ್ಲ. ಸರಿ ತಪ್ಪುಗಳ ಕಲ್ಪನೆಯು ಗಾಢ ಪ್ರಮಾಣದಲ್ಲಿ ಇರುವುದಿಲ್ಲ. ಕುಟುಂಬದ ಹೇಳಿಕೆಗೆ ಅನುಗುಣವಾಗಿ ಅನುಸರಿಸಿ ಬರುವುದರಿಂದ ಅವೇ ರೂಢಿಗಳಾಗಿ ಹೆಣ್ಣು ಮಗುವನ್ನು ಶೋಷಿಸುವಲ್ಲಿ ತಾರತಮ್ಯವೂ ನಿರಂತರವಾಗುತ್ತದೆ.

ಮಗುವಿಗೆ ಪ್ರಥಮಹಂತದಲ್ಲಿ ಅವರನ್ನು ಬೆಳೆಸುವುದರಿಂದ ಕಠಿಣ ಕಟ್ಟುಪ್ಪಣೆಯ ಮತ್ತು ಅತಿ ಸ್ವತಂತ್ರ್ಯವು ಮಗುವಿನ ಬೆಳವಣಿಗೆ ಅಡ್ಡಿಯಾಗಿರುತ್ತವೆ. ಮತ್ತು ಒಳ್ಳೆಯ ವ್ಯಕ್ತಿಯಾಗಿ ನಿರ್ಮಾಣವಾಗಲೂ ಅವು ತೊಡಕಾಗಿವೆ. ಅತಿ ಸ್ವತಂತ್ರ್ಯದಿಂದ ಮಗು ತನಗೆ ತಿಳಿದ ಹಾಗೆ ವರ್ತಿಸಲು ಪ್ರಾರಂಭಿಸುತ್ತದೆ. ಅದೇ ರೀತಿ ಕಠಿಣ ಕಟ್ಟುಪ್ಪಣೆಯಿಂದಲೂ ಅದು ಇತರರನ್ನು ಹೊರಗಡೆ ಸ್ವತಂತ್ರ್ಯವಾಗಿ ಚಲಿಸುವುದನ್ನು ನೋಡಿ ತನಗೆ ಸ್ವತಂತ್ರವಿಲ್ಲವೆಂದು ನೊಂದುಕೊಳ್ಳುತ್ತದೆ. ಹೆಣ್ಣು ಮಗುವಿಗೆ ಹೊರಗಡೆ ಸ್ವಾತಂತ್ರ್ಯದ ಅವಕಾಶವಿಲ್ಲದ ಕಾರಣ ತನ್ನ ಬಯಕೆ, ಆಸೆ ಆಕಾಂಕ್ಷೆಗಳು ಎಷ್ಟಿದ್ದರೂ ಅದನ್ನು ಬದಿಗೊತ್ತಿ ಅನಿವಾರ್ಯ ಪ್ರಸಂಗಗಳಿಗೆ ಅಣಿಯಾಗಬೇಕಾಗುತ್ತದೆ. ಇಂತಹ ಪ್ರಸಂಗಗಳು ಮಕ್ಕಳ ಮನಸ್ಸಿನಲ್ಲಿ ಸ್ಥಿರವಾಗಿ ದಿನನಿತ್ಯದ ಚಟುವಟಿಕೆಗಳು

ಮುಂದುವರಿಯುತ್ತಲೇ ಬರುತ್ತವೆ. ಅಸಮಾನತೆಯು ರೂಢಿಯನ್ನೇ ಮುಂದುವರಿಸುವುದರಲ್ಲೇ ನಿರತವಾಗಿರುವಾಗಿರುವಾಗ ಒಂದು ಮಗುವನ್ನು ಮಾವರನ್ನಾಗಿ ಮಾಡುವಲ್ಲಿ ಹುಟ್ಟಿಕೊಂಡ ಕುಟುಂಬದ ನಡವಳಿಕೆಗಳು ತಾರತಮ್ಯದಿಂದ ಕೂಡಿದುದರಿಂದ ಆಶಕ್ತ ರೂಪದಲ್ಲಿ ಕಂಡು ಅಬಲೆಯ ರೂಪದಲ್ಲಿ ಪ್ರತಿರೂಪಿಸಲಾಗಿದೆ. ಗಂಡು ಮಗುವಿಗೆ ಸವಲತ್ತು ಅವಕಾಶಗಳು ಒದಗಿಸಿ ಜೀವನದ ಭವಿಷ್ಯ ರೂಪಿಸಲು ಪ್ರೇರೇಪಿಸಲು ಕುಟುಂಬದ ಸಮಾಜೀಕರಣದಲ್ಲಿ ಇರುತ್ತವೆ.

ಸಮಾಜೀಕರಣದ ಪ್ರಕ್ರಿಯೆ ರೂಢಿಗಳು ಯಾವುದೇ ಮಾದರಿಯಾದರೂ ಲಿಂಗ ತಾರಮತ್ಯವಂತೂ ನಡೆದೇಯಿರುವುದನ್ನು ಕಾಣುತ್ತೇವೆ.

ಅಡಿಟಿಪ್ಪಣಿಗಳು

೧. ಚ.ನ. ಶಂಕರರಾವ್, ಸಾಮಾಜಿಕ ಪ್ರಕ್ರಿಯೆ ಮತ್ತು ಸಾಮಾಜಿಕ ಪರಿವರ್ತನೆ, ಪುಟ: ೮೩

೨. ಮಹೇಶ್.ಎಚ್, ಲಿಂಗ ಸೂಕ್ಷ್ಮತೆ ಮತ್ತು ನ್ಯಾಯ ತರಬೇತಿದಾರರ ಕೈಪಿಡಿ, ಪುಟ: ೧೦೪

❑

ಅಧ್ಯಾಯ ೪
ವ್ಯಕ್ತಿತ್ವ ವಿಕಸನ

ವ್ಯಕ್ತಿತ್ವ ವಿಕಸನ

ಮಾನವರ ವ್ಯಕ್ತಿತ್ವ ಸಮಾಜದ ಸರ್ವತೋಮುಖ ಅಭಿವೃದ್ಧಿಯ ಒಂದು ಸಾಧಕ. ಯಾವ ವ್ಯಕ್ತಿಯಲ್ಲಿ ಒಳ್ಳೆಯ ವ್ಯಕ್ತಿತ್ವ ಅಡಗಿರುತ್ತದೆಯೋ. ಅದು ಸಂದರ್ಭಕ್ಕನುಸಾರವಾಗಿ ಪ್ರಕಟಗೊಳಿಸಿದಾಗ ಅದರ ಮೌಲ್ಯವನ್ನು ಅಳೆದು ಸಮಾಜದ ಪ್ರಗತಿಗೆ ಮಾದರಿ ಎನಿಸಿಕೊಳ್ಳುತ್ತದೆ. ವ್ಯಕ್ತಿತ್ವದ ಉತ್ತಮ ನಡೆ-ನುಡಿ, ಆಚಾರ-ವಿಚಾರ ಸಮಯೋಚಿತ ಗುಣಧರ್ಮಗಳು ವ್ಯಕ್ತಿತ್ವವನ್ನು ಪುಷ್ಟಿಕರಿಸುವ ಮೌಲ್ಯಗಳಾಗಿವೆ. ಬೌದ್ಧಿಕ ಶಿಸ್ತು, ಸಾಮಾಜಿಕ ಜ್ಞಾನ ಮಾನಸಿಕ ಸ್ಥೈರ್ಯ, ಗುಣ, ಸ್ವಭಾವ, ವರ್ತನೆಗಳು ಇವುಗಳೆಲ್ಲ ಉತ್ತಮ ವ್ಯಕ್ತಿತ್ವಕ್ಕೆ ಪ್ರಚೋದಿಸುವ ಅಂಶಗಳಾಗಿವೆ. ಇವುಗಳೆಲ್ಲವನ್ನು ಒಳಗೊಂಡ ವ್ಯಕ್ತಿಯನ್ನು ಸಮಯ ಸಂದರ್ಭಕ್ಕನುಸಾರವಾಗಿ ಉತ್ತಮ ನಡುವಳಿಕೆಗಳು ವ್ಯಕ್ತಪಡಿಸಿದರೆ ನಿಜವಾದ ವ್ಯಕ್ತಿತ್ವವೆಂದು ಗುರುತಿಸಬಹುದು. ಉತ್ತಮ ವ್ಯಕ್ತಿತ್ವವು ಹಲವು ಜನರ ಮಾರ್ಗದರ್ಶಿಯಾಗಿ ರೂಪತಾಳುತ್ತದೆ. ಸಾಮಾಜಿಕ ಪ್ರಕ್ರಿಯೆಯ ನಡುವಳಿಕೆಯಲ್ಲಿ ಸಮೃದ್ಧ ವ್ಯಕ್ತಿತ್ವ ಉತ್ತಮ ಭವಿಷ್ಯದ ಅಡಿಪಾಯವಾಗಿದೆ. ಸಮಾಜದಲ್ಲಿ ಸ್ಥಿರತೆಯನ್ನು ಕಾಪಾಡುವ ಮಾರ್ಗವಾಗಿದೆ. ಸಮಾಜದಲ್ಲಿನ ಅಸಮಾನತೆಯನ್ನು ತೊಲಗಿಸಲು ಉತ್ತಮ ವ್ಯಕ್ತಿತ್ವ ಅವಶ್ಯವಾಗಿರುತ್ತದೆ. ಇಲ್ಲದಿದ್ದರೆ ರೋಗ ರುಜಿನಿಗಳಿಂದ ನರಳುತ್ತಿರುವ ಸಮಾಜ ಅಂಧಕಾರದಲ್ಲಿಯೇ ಮುಳುಗಿ ಅಸಮಾನತೆ, ಅನ್ಯಾಯ, ದುಃಖ ಸಂಕಷ್ಟಗಳ ಪರಿಪಾಟಲನ್ನು ಎದುರಿಸಬೇಕಾಗುತ್ತದೆ. ಒಬ್ಬ ವ್ಯಕ್ತಿಯ ವ್ಯಕ್ತಿತ್ವ ವಿಕಸನಗೊಳಿಸಲು ಕುಟುಂಬ ಶಿಕ್ಷಣ, ಸಮಾಜ, ಸಂಸ್ಕೃತಿಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮಾನವರ ನಡುವಳಿಕೆಗಳು ಒಬ್ಬರಿಂದ ಇನ್ನೊಬ್ಬರಿಗೆ ದಾಟಿಸುತ್ತಾ ಪೂರಕವಾಗಿ ಬಂದಿರತಕ್ಕಂತಹವು ಮತ್ತು ಚಲನೆಯಲ್ಲಿ ಇರುವಂತಹವು. ಇವು ಒಂದೊಂದು ಸಮುದಾಯಕ್ಕೆ ಭಿನ್ನವಾಗಿರುತ್ತವೆ. ಕೆಲವು ಅಭಿವೃದ್ಧಿ ಹೊಂದಿ ಆರೋಗ್ಯ ಸ್ಥಿತಿಯಲ್ಲಿದ್ದರೆ, ಇನ್ನು ಕೆಲವು ಚಲನೆಯಲ್ಲಿ ತಟಸ್ಥ ರೀತಿಯಲ್ಲಿ ನಡುವಳಿಕೆಗಳ ಪರಿವರ್ತನೆಗೊಳ್ಳದೆ ಸಾಗುತ್ತಿರುತ್ತವೆ.

ವ್ಯಕ್ತಿಯ ವ್ಯಕ್ತಿತ್ವ ಅಳೆಯಲು ಮೂಲವಾಗಿ ಕುಟುಂಬವು ಹಿನ್ನೆಲೆಯಾಗಿರುತ್ತದೆ. ಮಾನವರಿಗೆ ಮೊದಲ ಪಾಠ ಮನೆ, ಅದಕ್ಕಾಗಿ ಒಬ್ಬರ ವ್ಯಕ್ತಿತ್ವ ರೂಪಿಸಲು ಮನೆಯ ನಡುವಳಿಕೆ, ರೂಢಿ, ಜ್ಞಾನ ಶಿಸ್ತು, ಸಮಾನತೆ, ಅನುಕರಣೆ, ಕಲಿಕೆ, ಸಲಹೆ, ಗುಣ, ಸ್ವಭಾವ, ವರ್ತನೆ ಎಲ್ಲವನ್ನು ಒಳಗೊಂಡಿರುತ್ತದೆ. ಮಾನವನ ಮೂಲ ತರಬೇತಿ ಮನೆಯಲ್ಲಿಯೇ ಅಡಕವಾಗಿರುವುದರಿಂದ ಉತ್ತಮ ವ್ಯಕ್ತಿತ್ವ ನಿರೂಪಿಸಲು ಕುಟುಂಬವು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಇದು ಚಿಕ್ಕವರಿರುವಾಗಲೇ ರೂಪಿಸುವ ತರಬೇತಿಯಾಗಿದ್ದು ವಯಸ್ಸಾದ ನಂತರ ಶಿಕ್ಷಣ, ಸಮುದಾಯ, ಸಮಾಜ, ಸಂಸ್ಕೃತಿಗಳು ಪ್ರತಿಬಿಂಬಿಸುತ್ತವೆ.

ಸಮಾಜಿಕರಣದ ಪ್ರಕ್ರಿಯೆಗೆ ಬಂದಾಗ ಕುಟುಂಬದಲ್ಲಿಯ ಲಿಂಗ ತಾರತಮ್ಯದ ದೃಷ್ಟಿಕೋನಗಳು ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಅಡ್ಡಿಪಡಿಸುವ ವಿಧಾನಗಳಾವವು ಅದು ಮಕ್ಕಳು ಹೇಗೆ ಅನುಕರಿಸುತ್ತಾರೆ. ಇದರಿಂದ ಯಾವ ವ್ಯತ್ಯಾಸಗಳು ಸೃಷ್ಟಿಯಾಗುತ್ತವೆ. ಹಾಗೆಯೇ ಬೆಳೆದು ಬಂದ ಹಿನ್ನೆಲೆಯಲ್ಲಿ ಹದಿಹರೆಯ ವಯಸ್ಸಿನಲ್ಲಿ ಆಗುವ ಬದಲಾವಣೆಗಳೇನು ಪ್ರಮುಖ ವಯಸ್ಸಾದ ಇದು ಜೀವನ ಪೂರ್ತಿ ಪಾಲಿಸುವುದರಿಂದ ಮುಖ್ಯವಾದ ತಿರುವುಗಳು ಹೇಗೆ ಪಡೆದುಕೊಳ್ಳುತ್ತವೆ. ವ್ಯಕ್ತಿತ್ವ ಹೇಗೆ ವಿಕಸನವಾಗುತ್ತದೆ ? ಎನ್ನುವುದರಿಂದ ಯೌವ್ವನ, ಪ್ರೌಢ, ವೃದ್ಧಾಪ್ಯದಲ್ಲಿ ಈ ಸಮಾಜೀಕರಣದ ದಾಟಿ ಬಂದ ಲಿಂಗತಾರತಮ್ಯ ಹೇಗೆ ಬೆರೆತುಹೋಗಿರುತ್ತವೆ ಎನ್ನುವುದನ್ನು ತಿಳಿದುಕೊಳ್ಳೋಣ.

ಬಾಲ್ಯ

ಸಮಾಜಿಕರಣದ ಪ್ರಕ್ರಿಯೆಯ ತರಬೇತಿಯು ಬಾಲ್ಯದಲ್ಲಿ ನೀಡುವುದರಿಂದ ಇದು ನಿರೀಕ್ಷೆಯನ್ನು ಅಪೇಕ್ಷಿಸುವ ವಯಸ್ಸಾಗಿರುತ್ತದೆ. ಹೀಗಾಗಿ ಮರುಪ್ರಶ್ನಿಸದೆ ಸಾಮಾನ್ಯವಾಗಿ ಅನುಸರಿಸುವ ವಯಸ್ಸಾಗಿರುತ್ತದೆ. ಮಗು ಹುಟ್ಟಿನಿಂದ ಹನ್ನೆರಡು ಹದಿಮೂರು ವರ್ಷದವರೆಗೆ ಮಕ್ಕಳೆಂದೇ ಪರಿಗಣಿಸಿರುತ್ತಾರೆ. ಈ ವಯಸ್ಸಿನ ಅಂತರದಲ್ಲಿ ಬುದ್ಧಿಯು ಪಕ್ವದ ಹಂತದಲ್ಲಿರುತ್ತವೆ. ದೀರ್ಘ ಆಲೋಚನೆಯ ವಯಸ್ಸು ಇದಾಗಿರುವುದಿಲ್ಲ. ತಂದೆತಾಯಂದಿರು ನೀಡುವ ತರಬೇತಿಯ ಕಲಿಕೆ, ರೂಢಿ, ನಿಯಮಗಳು ಅಂತರ್ಗತಗೊಳಿಸಿಕೊಳ್ಳುತ್ತದೆ. ಮಕ್ಕಳಲ್ಲಿ ಹುಡುಗ ಹುಡಗಿಯ ಕಲ್ಪನೆ ಗಾಢವಾಗಿ ಇರುವುದಿಲ್ಲ. ಕೂಡಿ ಆಡುವುದು, ನಲಿಯುವ. ಚಟುವಟಿಕೆಗಳಲ್ಲಿ ಭಾಗವಹಿಸುವುದು ಇರುತ್ತದೆ. ತಂದೆತಾಯಿ, ಸಹೋದರರ ನಡೆ, ಹೇಳಿಕೆಗಳು ತರ್ಕಿಸದೇ ಒಪ್ಪಿಕೊಳ್ಳುತ್ತವೆ. ಯಾಕೆಂದರೆ ಸ್ವಅಸ್ತಿತ್ವದ ಕಲ್ಪನೆ ಇರುವುದಿಲ್ಲ. ಇದು ಅವಲಂಬನೆಯ ವಯಸ್ಸಾಗಿದ್ದು, ಹುಡುಗ ಹುಡುಗಿಯು ತಂದೆ ತಾಯಿಯರ ನಿರೀಕ್ಷೆಯನ್ನು ಅನುಸರಿಸುತ್ತವೆ. ಅದು ಸರಿ ತಪ್ಪು ಪ್ರಶ್ನೆ ಕೇಳುವ ಕಲ್ಪನೆ ಇರುವುದಿಲ್ಲ.

ಮನೆಯ ಹಿರಿಯರ ಅನುಕರಣೆಯಲ್ಲಿಯೇ ಹುಡುಗಿ ಬೆಳವಣಿಗೆ ಹೊಂದುವುದರಿಂದ ಅವರ ಪ್ರತಿ ಆದರ್ಶಗಳು ವಿಚಾರಗಳು, ಚಿಂತನೆಗಳಿಗೆ, ಒಳಪಡುತ್ತವೆ. ಸಮಾಜಿಕರಣದ ಪ್ರಕ್ರಿಯೆ ಹುಡುಗಿಯ ಬಗ್ಗೆ

ನಿರಾಕರಣೆ ಮನೋಭಾವವಿರುತ್ತದೆ. ಸಮಾಜ, ಸಂಸ್ಕೃತಿಗಳಲ್ಲಿ ಈ ವಿಚಾರಗಳು ಗಾಢವಾಗಿರುವಾಗ ಅದನ್ನು ಪರಿಪಾಲಿಸಲು, ವಿಮರ್ಶಿಸಲು ತಂದೆತಾಯಿಯರು ಹೋಗುವುದಿಲ್ಲ. ಯಾಕೆಂದರೆ ಪ್ರಸ್ತುತ ಪರಿಸ್ಥಿಯು ಸಮಾಜ ನಿರ್ಮಾಣ ಮಾಡಿರುವಾಗ ಅದೇ ಮಾದರಿಯಲ್ಲಿಯೇ ತರಬೇತಿ ಹುಡುಗಿಗೆ ದಕ್ಕುತ್ತದೆ. ಸಾಮಾನ್ಯವಾಗಿ ಶಿಕ್ಷಣದ ಬುನಾದಿಯು ಗಾಢ ಪ್ರಮಾಣವಾಗಿ ನೀಡುವುದಿಲ್ಲ. ಇದು ಒಂದು ಸಮುದಾಯದಿಂದ ಇನ್ನೊಂದು ಸಮುದಾಯಕ್ಕೆ ಬದಲಾವಣೆಯನ್ನು ಪಡೆದಿರುತ್ತದೆ. ನಗರ ಪ್ರದೇಶಗಳಲ್ಲಿ ಹುಡುಗಿಯರ ಬಗ್ಗೆ ತಾವು ತಿಳುವಳಿಕೆ ಹೊಂದಿರುವುದರಿಂದ ಗಮನ ಹರಿಸುತ್ತಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಇದ್ದ ಪರಿಸ್ಥಿತಿಯನ್ನು ಮುಂದುವರಿಸಲು ನಿರತರಾಗಿರುತ್ತಾರೆ. ಶಿಕ್ಷಣ ವ್ಯವಸ್ಥೆಯಲ್ಲಿ ಗ್ರಾಮೀಣ ಪ್ರದೇಶಗಳನ್ನು ಅವಲೋಕಿಸಿದಾಗ ಶಾಲೆಯ ಅಸ್ಥವ್ಯಸ್ಥವಾಗಿ ಸುಮಾರು ಜನ ಮಕ್ಕಳಿಗೆ ಒಬ್ಬರೆ ಶಿಕ್ಷಕರು ನಿಭಾಯಿಸುವುದನ್ನು ಸಾಕಷ್ಟು ಪತ್ರಿಕೆಗಳಲ್ಲಿ ನೋಡುತ್ತೇವೆ, ಕೇಳುತ್ತೇವೆ. ಇದರಿಂದ ಹುಡಿಗಿಗೆ ಶಿಕ್ಷಣದ ಮುಂದುವರಿಕೆಯನ್ನು ನಿರಾಕರಿಸಿ ಮನೆಕೆಲಸಕ್ಕೆ ಅಣಿಗೊಳಪಡಿಸುತ್ತಾರೆ. ಹುಡುಗನಿಗೆ ಸ್ವಲ್ಪ ಕಲಿಯಲು ಪ್ರೋತ್ಸಾಹಿಸುತ್ತಾರೆ. ಕುಟುಂಬದ ಹೆಣ್ಣುಮಕ್ಕಳ ಸಹಜ ಬೆಳವಣಿಗೆಗೆ ತೊಡಕಾಗುತ್ತದೆ. ವ್ಯಕ್ತಿಯ ಭದ್ರಬುನಾದಿಗೆ ಕುಟುಂಬದ ತರಬೇತಿಗನುಗುಣವಾಗಿ ಮೂರು ವರ್ಷದ ಬುದ್ಧಿ ನೂರು ವರ್ಷದ ತನಕ ಎನ್ನುವ ಹೇಳಿಕೆಯು ಅಷ್ಟೇ ಸತ್ಯವಾದುದಾಗಿದೆ. ಮಕ್ಕಳಿಗೆ ಮೂಲವಾಗಿ ನೀಡಿದ ತರಬೇತಿಗಳು ಜೀವನಪೂರ್ತಿಯಾಗಿ ಮುಂದುವರಿಯಲು ಸಾಧ್ಯವಿರುತ್ತದೆ. ಉತ್ತಮ ಪರಿಸರ ದೊರೆತರೆ ಬದಲಾವಣೆ ಹೊಂದಬಹುದು. ಸಾಮಾನ್ಯವಾಗಿ ಅಸ್ತವ್ಯಸ್ಥ ಪರಿಸರವು ಮಕ್ಕಳಿಗೆ ಅದೇ ಮಾದರಿಯಾಗಿ ರೂಪ ನೀಡುತ್ತದೆ. ಅವರಲ್ಲಿ ಕಲಿಯುವ ಶಿಕ್ಷಣ ಮುಂದುವರಿಸುವ ಹಂತವಿರುವುದರಿಂದ ಮಕ್ಕಳು ಪ್ರಶ್ನಿಸಲು ಅವರ ಬುದ್ಧಿ ವಿಕಾಸವಾಗಿರುವುದಿಲ್ಲ. ಇದರಲ್ಲಿ ಹುಡುಗಿಗೆ ನಕರಾತ್ಮಕ, ಸಲಹೆ, ಹೇಳಿಕೆಗಳು ಒಳಗೊಂಡಿರುತ್ತವೆ. ಇದರಿಂದ ಕೆಲವು ಸಂದರ್ಭಗಳು ಜೀವನಪೂರ್ತಿ ಮುಂದುವರಿಯುವ ಸಾಧ್ಯತೆಗಳಿರುತ್ತವೆ. ತಂದೆತಾಯಿಯರು., ಯಾವ ಕಾರ್ಯಕ್ಕೆ ಪ್ರೊತ್ಸಾಹ ನೀಡುತ್ತಾರೆ. ಅದನ್ನು ಮಾಡಲು ಮುಂಚೂಣಿಯಲ್ಲಿರುವ ಮಕ್ಕಳ ತಂದೆತಾಯಿಯರ ಸಂತೋಷ ಪ್ರೀತಿ ಗಳಿಸಲು ಹಾತೊರೆಯುತ್ತವೆ. ಉದಾ ಹುಡುಗಿ ಅಡುಗೆಯ ತರಬೇತಿ ನೀಡಿ, ಅದಕ್ಕೆ ಪ್ರಯತ್ನಿಸಿದರೆ ತಂದೆತಾಯಿಯರ ಹೊಗಳಿಕೆಯಿಂದ ಇನ್ನೂ ಉತ್ತಮವಾಗಿ ಮಾಡಬೇಕೆಂದು ಪ್ರಯತ್ನಿಸುತ್ತಾಳೆ. ಮಕ್ಕಳ ಸಂಪೂರ್ಣ ಜೀವನದ ತಿರುವು ತಂದೆತಾಯಿ ಕುಟುಂಬದ ಸಾಮಾಜೀಕರಣದ ಪ್ರಕ್ರಿಯೆಯಲ್ಲಿ ಜಾರಿಗೊಳ್ಳುವುದರಿಂದ ಮಕ್ಕಳನ್ನು ಯಾವ ಮಾದರಿಯ ರೂಪದಲ್ಲಿ ಬೆಳೆಯುತ್ತವೆ. ಅದಕ್ಕೆ ತಕ್ಕ ನಿರೀಕ್ಷೆಗಳು ತಂದೆತಾಯಿಯರಿಂದಲೇ ಸಿಗುತ್ತದೆ.

ಮಕ್ಕಳ ಭವಿಷ್ಯವು ಸಮಾಜದ ಅಡಿಪಾಯವಾಗಲೂ, ಅವರು ಕಳೆದು ಬರುವ ದಿನಗಳಿಂದ ಉತ್ತಮ ಪರಿಸರವು ಕಾರಣವಾಗುತ್ತದೆ. 'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎಂದೆಲ್ಲಾ ಹೇಳುವ ನಾವು ಮಕ್ಕಳನ್ನು

ಯಾರ ರೀತಿಯಲ್ಲಿ ಕಾಣುತ್ತಿದ್ದೇವೆ ಎಂದಾಗ ಕಸ ಗುಡಿಸುವುದು, ತಾನು ಮಗುವಾಗಿರುವಾಗ ಇನ್ನೊಂದು ಮಗುವನ್ನು ಆಡಿಸುತ್ತಿರುವುದು, ಬಾಲಕಾರ್ಮಿಕರಾಗಿ ದುಡಿಯುತ್ತಿರುವುದು ಗೋಚರಿಸಿತು. ಕೆಲವು ಕಡೆ ಶಿಕ್ಷಣ ಅವಕಾಶಗಳು ಇದ್ದರೂ, ತಂದೆತಾಯಿಯರ ಪ್ರೀತಿಯಿಂದ ವಂಚನೆಗೀಡಾದ ಮಕ್ಕಳನ್ನು ಕಾಣುತ್ತೇವೆ. ಈ ಮಕ್ಕಳು ಜೀವನದಲ್ಲಿ ಜವಬ್ದಾರಿಯಾಗಿ ಬಾಳಲು, ಸಮಾಜವನ್ನು ಕಾಪಾಡಲು ಮುಂಬರುವ ದಿನಗಳಲ್ಲಿ ತಾವು ಬೆಳೆದು ಬಂದ ಹಿನ್ನೆಲೆಯ ಕಾರಣವಾಗುತ್ತದೆ. ಇದರಿಂದ ತಂದೆತಾಯಿಯರ ಯಾವುದೇ ನಿರ್ಣಯಗಳು ನೀಡಿದರೂ ಅದಕ್ಕೆ ಕಟುಬದ್ದವಾಗಿ ವರ್ತಿಸಲು ಮಕ್ಕಳು ಪ್ರಯತ್ನಿಸುತ್ತವೆ. ಅವರ ಹೇಳಿಕೆಗೆ ಅನುಗುಣವಾಗಿ ಸಾಗುವಾಗ ಸ್ವತಂತ್ರವಾಗಿ ಕೆಲವು ಚಟುವಟಿಕೆಗಳಿಗೆ ನಿರ್ಭಂದಗಳಿರುತ್ತವೆ. ತಪ್ಪು ಮಾಡಿದಾಗ ಶಿಕ್ಷೆ ಸಿಗುವುದರಿಂದ ಅದು ಮಾಡಬಾರದು ಎನ್ನುವ ಪ್ರಜ್ಞೆ ಬರುವುದು ಈ ವಯಸ್ಸಿನಲ್ಲೇ. ಇದರಿಂದ ಮಕ್ಕಳ ಬೇಡಿಕೆಗಳನ್ನು ಸ್ವೀಕರಿಸುವ ಆಪೇಕ್ಷಿಸುವ, ತವಕಿಸುವ, ಅನುಸರಿಸುವ ವಯಸ್ಸು ಇದಾಗಿರುತ್ತದೆ. ಬಾಲ್ಯದಲ್ಲಿ ವ್ಯಕ್ತಿಯ ಭವಿಷ್ಯವನ್ನು ಬಿತ್ತುವುದು ಪ್ರಥಮ ಹಂತವಾಗಿರುತ್ತದೆ. ಇದರಲ್ಲಿ ಹುಡುಗಿಗೆ ವೈಚಾರಿಕ ನೆಲೆಗಟ್ಟಿಗೆ ಗಟ್ಟಿಯಾದ ಭವಿಷ್ಯವನ್ನು ನಿರೂಪಿಸಲು ಪ್ರಯತ್ನಿಸುವುದು ವಿರಳ ತಂದೆತಾಯಿಯರ ಮನಸ್ಸಿನಲ್ಲಿ ಹುಡುಗಿಯ ಬಗ್ಗೆ ನಕರಾತ್ಮಕ ಭಾವನೆಗಳಿರುವುದರಿಂದ ನಿರುತ್ಸಾಹದ ತರಬೇತಿಗಳು ಸಿಗುತ್ತದೆ. ಸಮಾಜಕ್ಕೆ ಮಾದರಿಯಾಗುವ ರೀತಿಯಲ್ಲಿಯೇ ಬೆಳೆಸುತ್ತಾರೆ. ಸಮಾಜದಲ್ಲಿ ಹುಡುಗಿಯರ ಬಗ್ಗೆ ಹೊಂದಿದ ವಿಚಾರ, ನಡುವಳಿಕೆ ಸಂಸ್ಕೃತಿಗನುಗುಮವಾಗಿ ಮನೆಯಲ್ಲಿಯೂ ಆ ರೀತಿಯ ಒತ್ತಾಸೆಗಳು ಮೂಡಿ ಬರುತ್ತವೆ. ಸಮಾಜದಲ್ಲಿ ಹುಡುಗಿಯ ಕಲ್ಪನೆಗಳನ್ನು ಅನುಸರಿಸಿ, ಅದೇ ಮಾದರಿಯಾಗಿಯೇ ತಮ್ಮ ಮಕ್ಕಳನ್ನು ಬೆಳೆಸುತ್ತಾರೆ. ಇದು ಅವರ ಭವಿಷ್ಯಕ್ಕೆ ಪೆಟ್ಟಾದರೂ ಸಹ ತರ್ಕಿಸುವ ಗೋಜಿಗೆ ಹೋಗುವುದಿಲ್ಲ. ಹುಡುಗಿಯನ್ನು ಹುಡುಗಿಯ ಮಾದರಿಯಲ್ಲಿಯೆ ಹುಡುಗನು ತರಬೇತಿಗಳು ಹುಡುಗನು ಮಾದರಿಯ ಪಾತ್ರ ಸಿದ್ಧತೆ ರೂಪಿಸುವ ತಂದೆತಾಯಿಗಳು ಅದರಲ್ಲಿರುವ ವ್ಯತ್ಯಾಸ ಅಸಮಾನತೆಯನ್ನು ತೌಲನಿಕ ಮಾಡುವುದಿಲ್ಲ. ಹುಡುಗಿಯ ಭವಿಷ್ಯ ಮತ್ತೊಬ್ಬರ ಪಾಲಾಗುವಾಗ ಉತ್ತಮ ತಳಪಾಯವಿರಲು ಉತ್ತಮ ಭವಿಷ್ಯ ನಿರೂಪಿಸಲು ಉದಾಸೀನತೆಗಳು ತಂದೆತಾಯಂದಿರಲ್ಲಿ ಇರುತ್ತವೆ. ಇದರಿಂದ ಮಕ್ಕಳಿಗೆ ತರಬೇತಿಯು ಅದೇ ಮಾದರಿಯಲ್ಲಿಯೇ ದೊರೆಯುತ್ತದೆ. ಹೀಗಾಗಿ ತಂದೆತಾಯಿಯರು ಮುಂದಿನ ದಿನಗಳ ಬಗ್ಗೆ ಯಾವ ಅಂಶಗಳನ್ನು ಪಾಲಿಸಿಕೊಂಡು ತರಬೇತಿ ನೀಡುತ್ತಾರೋ, ಅದೇ ಮಾರ್ಗವಾಗಿ ಮಕ್ಕಳು ಅನುಸರಿಸುವರು ಆಗಿರುತ್ತಾರೆ. ಹುಡುಗಿಗೆ ಬಾಲ್ಯವಿರುವುದರಿಂದ ತನ್ನ ಅರಿವಿನ ಸ್ವಾವಲಂಬಿ ಜೀವನದ ಬಗ್ಗೆ ತಿಳುವಳಿಕೆ ಇಲ್ಲದೆ ಇದ್ದಾಗ ತಂದೆತಾಯಿಯೇ ಸರ್ವಸ್ವ ಎನ್ನುವ ಮಕ್ಕಳು, ಅವರ ನಿರ್ಣಯಕ್ಕೆ ಒಪ್ಪಿಕೊಳ್ಳುವ ಹಂತದಲ್ಲಿ ಬರುತ್ತಾರೆ. ಸಾಮಾನ್ಯವಾಗಿ ಹುಡುಗಿಯ ವ್ಯಕ್ತಿತ್ವ ಚಿಕ್ಕವರಿರುವಾಗಲೇ ಸೂಕ್ಷ್ಮ ರೀತಿಯಲ್ಲಿ ಧ್ವಂಸ ಮಾಡಿದ ಹಾಗೆ ಆಗುತ್ತದೆ.

ಹದಿಹರೆಯ

ಪ್ರಕೃತಿಯ ಪರಿವರ್ತನೆಯ ನಿಯಮಗಳಲ್ಲಿ ಹದಿಹರೆಯದ ವಯಸ್ಸು ಒಂದು ಪ್ರಮುಖ ಕಾಲಘಟ್ಟವಾಗಿದ್ದು, ಇದು ಬಾಲ್ಯಗಳ ನೆನಪನ್ನು ದಾಟಿ ಹೊಸ ಪ್ರಪಂಚಕ್ಕೆ ಕಾಲಿಡುವ ಹಂತವಾಗಿದೆ. ಈ ವಯಸ್ಸನ್ನು ಸಾಮಾನ್ಯವಾಗಿ ೧೨ ೧೩ರಿಂದ ೧೯-೨೦ ವಯಸ್ಸಿನ ಅಂತರದಲ್ಲಿ ಬರುತ್ತದೆ. ಈ ವಯಸ್ಸಿನ ಅಂತರದಲ್ಲಿ ಜೀವನದ ಬಹುಮುಖ್ಯ ಬದಲಾವಣೆಗಳು ಕಾಣುತ್ತವೆ. ದೈಹಿಕ ಬದಲಾವಣೆ, ಮಾನಸಿಕ ಬದಲಾವಣೆಯ ಜೊತೆ ಹದಿಹರೆಯದವರು ಸಾಮಾಜಿಕ ಚಿಂತನೆ, ಪ್ರಗತಿಯ ಹಂತಗಳು, ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಪ್ರಶ್ನಿಸುವ, ತರ್ಕಿಸುವ ವಯಸ್ಸಾಗಿರುತ್ತದೆ. ಮಾನಸಿಕವಾಗಿ ಕೋಪ, ದ್ವೇಷ, ಶಾಂತಿ, ಸಹನೆಗಳ ಸಮ್ಮಿಶ್ರಣದಿಂದ ತೀವ್ರಗೊಂದಲದ ವಯಸ್ಸು ಇದಾಗಿರುತ್ತದೆ. ಈ ವಯಸ್ಸಿನ ಅಂತರದಲ್ಲಿ ಚಿತ್ರ ವಿಚಿತ್ರದ ನಡುವಳಿಕೆಗಳಾಗಿ ವಿಚಾರಗಳು ಜೀವನದ ತಿರುವುಗಳೆ ಒಳಗೊಂಡಿರುತ್ತದೆ. ನಮ್ಮ ಸಮಾಜ ಆರೋಗ್ಯ ಸ್ಥಿತಿಯಲ್ಲಿ ಬದುಕಲು ಹದಿಹರೆಯದವರನ್ನು ಕಾಪಾಡಿಕೊಂಡು, ಒಳ್ಳೆಯ ಮಾರ್ಗದೆಡೆಗೆ ಬದುಕಲು ಹುರಿದುಂಬಿಸಿದರೆ ಮುಂಬರುವ ದಿನಗಳ ಸಮಾಜವನ್ನು ಸಾಕಷ್ಟು ಸುಧಾರಣೆ, ಅಭಿವೃದ್ಧಿಯನ್ನು ವೃದ್ಧಿಪಡಿಸಬಹುದು.

ಹದಿಹರೆಯದವರ ಚಂಚಲತೆಯ ಮನಸ್ಸನ್ನು ಸೆರೆ ಹಿಡಿದು ಸೂಕ್ತಮಾರ್ಗದೆಡೆಗೆ ಹುರಿದುಂಬಿಸುವುದರ ಜೊತೆಗೆ ಅವರ ಆಚಾರ, ವಿಚಾರಗಳು ಸೂಕ್ಷ್ಮವಾಗಿ ಗಮನಿಸಿ ಆದೇಶಾತ್ಮಕ ಹೇಳಿಕೆಗಿಂತ, ಪ್ರೀತಿ ಪ್ರೇಮ. ವಾತ್ಸಲ್ಯದ ಮಾರ್ಗದರ್ಶನ ನೀಡಬೇಕು. ಆಗ ಸಹಜವಾಗಿ ಅವರ ಸುಭದ್ರ ವ್ಯಕ್ತಿತ್ವ ನಿರ್ಮಾಣಕ್ಕೆ ಯಾವುದೇ ಅಡ್ಡಿ ಆತಂಕಗಳು ಎದುರಾಗುವುದಿಲ್ಲ. ಅವರ ಬಯಕೆ, ಆಸೆ, ಆಕಾಂಕ್ಷೆಗಳು ಸಮಾಜದ ಕಟ್ಟುಪಾಡು ರೀತಿ ನೀತಿಗಳ ಬಗ್ಗೆ ಹದಿಹರದೆಯದ ಮನಸ್ಸಿನಲ್ಲಿ ಚಿಂತಾಕ್ರಾಂತರಾಗಿ ಇರುವ ಹಂತವಿರುತ್ತದೆ. ಇವುಗಳಲ್ಲಿ ಹದಿಹರೆಯದವರು ಬೆಳೆದು ಬಂದ ಹಿನ್ನೆಲೆಯನ್ನು ಆಧರಿಸಿ ಪರಿಸರಕ್ಕನುಗುಣವಾಗಿ ಮಾಪನ ಮಾಡಬಹುದು. ಒಳ್ಳೆಯ ಪರಿಸರದಿಂದ ಉತ್ತಮ ಅಡಿಪಾಯ ವ್ಯಕ್ತಿತ್ವಕ್ಕೆ ಸಹಾಯಕಾರಿಯಾದರೆ, ಕನಿಷ್ಟ ಪರಿಸರದಿಂದ ಕಷ್ಟ ಪರಿಪಾಟಲತೆ ಎದುರಿಸುವ ಹಂತಗಳಿರುತ್ತವೆ. ಯಾವುದೇ ಪರಿಸರವಿದ್ದರೂ ಅವರ ಮನಸ್ಸನ್ನು ಅರ್ಥೈಸಿಕೊಂಡು ಉತ್ತಮ ನಾಗರಿಕನಾಗಲೂ ಪ್ರೇರಪಿಸಿದಾಗ ಸುಲಭವಾಗಿ ಅವರು ಅದಕ್ಕೆ ಒಪ್ಪಿ ಬದಲಾವಣೆಯನ್ನು ತರಲು ಉತ್ತಮ ಭವಿಷ್ಯ ನಿರೂಪಿಸಿಕೊಳ್ಳಲು ಕಾರ್ಯಮಗ್ನರಾಗುತ್ತಾರೆ.

ಸಮಾಜದ ಕೆಲವು ರೂಢಿ ಸಂಪ್ರದಾಯ ಕಟ್ಟ ನಿರ್ಬಂಧಗಳು, ಮಾಧ್ಯಮಗಳ ಅಪಪ್ರಚಾರ, ಕೌಟುಂಬಿಕ ಒತ್ತಡಗಳು, ಶಿಕ್ಷಣವಉತ್ತಮ ಪರಿಸರವಿಲ್ಲದಿದ್ದಾಗ, ಹದಿಹರೆಯದವರಿಗೆ ಗೊಂದಲಕ್ಕೆ ಸಿಲುಕಿಸುವ ಸಂದರ್ಭಗಳಿರುತ್ತವೆ. ಸಮಾಜದ ರೂಢಿಸಂಪ್ರದಾಯದ ನಿರ್ಬಂಧಗಳು ಸ್ವತಂತ್ರ್ಯತೆಗೆ ನಿರಾಕರಣೆಯನ್ನಿಟ್ಟು ಕಟುಬದ್ಧವಾಗಿ ತಾರತಮ್ಯ ದೃಷ್ಟಿಕೋನಗಳು ಒಳಮೂಡಿದರೆ, ಮಾಧ್ಯಮಗಳು ಅಪಪ್ರಚಾರಗೈದು,

ಹದಿಹರೆಯದ ಹುಚ್ಚುಮನಸ್ಸಿನ ಹತ್ತು ಹಲವು ಕಲ್ಪನೆಗೆ ಎಡೆಮಾಡಿ ದಾರಿ ತಪ್ಪಿಸಲು ಸೂಚಿತಗಳು ಆಗಿವೆ. ಹಾಗೆಯೇ ಶಿಕ್ಷಣವು ಹದಿಹರೆಯದವರ ಆಸೆ, ಆಕಾಂಕ್ಷೆಗನುಗುಣವಾಗಿ ದೊರೆಯದೇ ಇರುವ ಸಂದರ್ಭಗಳಿದ್ದು, ನಿರೀಕ್ಷೆಗನುಗುಣವಾಗಿ ಪರೀಕ್ಷೆ ಫಲಿತಾಂಶ ಬರದೇ ಇದ್ದಾಗ ಆತ್ಮಹತ್ಯೆಗೆ ಮಾನಸಿಕ ಒತ್ತಡಗಳಿಗೆ ಕುಟುಂಬವು ಒಡ್ಡುವ ಹಲವು ಕಾರಣಗಳಿರುತ್ತವೆ. ಕುಟುಂಬದಲ್ಲಿ ಸಾಮಾಜಿಕರಣದ ಪ್ರಕ್ರಿಯೆಗಳ ಲಿಂಗ ತಾರತಮ್ಯದಿಂದ ಕೂಡಿದುದಾಗಿದೆ. ಹುಡುಗನಿಗೆ ಪ್ರೋತ್ಸಾಹ, ಹುಡುಗಿಯಲ್ಲಿ ನಿರುತ್ಸಾಹ ನೀಡುವ ಅವರ ಸಹಜ ವ್ಯತ್ಯಾಸವು ಉದ್ದೇಶಪೂರ್ವಕವಾಗಿ ಪ್ರೇರೇಪಿಸುವ, ಚಿವುಟುವ ನೋಟಗಳಿವೆ. ಸಮಾಜದಲ್ಲಿ ಉತ್ತಮ ಪರಿಸರ ನಿರ್ಮಾಣಕ್ಕೆ ವಿಶೇಷವಾಗಿ ತೊಡಕುಗಳಿರುತ್ತವೆ. ಇದರಿಂದ ಹದಿಹರೆಯದ ವಯಸ್ಸಿನ ಮೇಲೆ ಲಿಂಗ ತಾರತಮ್ಯದ ಪರಿಣಾಮಗಳು ಯಾವ ರೀತಿಯಾಗಿ ಬೀಳುತ್ತವೆ ಎನ್ನುವುದು ತಿಳಿದುಕೊಳ್ಳೋಣ.

ದೈಹಿಕ ಬದಲಾವಣೆಗಳು

ಬಾಲ್ಯದ ಕೊನೆಯ ಘಟ್ಟ, ಯೌವ್ವನದ ಪೂರ್ವಕಾಲವೇ ಹದಿಹರೆಯವಾಗಿರುವುದರಿಂದ ಈ ವಯಸ್ಸಿನ ಅಂತರದಲ್ಲಿ ದೈಹಿಕ ಮಾರ್ಪಾಡು ಆಗುತ್ತವೆ. ಹುಡುಗಿ ಋತುಮತಿಯಾಗುವುದು, ಹುಡುಗನಲ್ಲಿ ವೀರ್ಯಸ್ಖಲನವಾಗುವುದರಿಂದ ದೇಹದ ವಿಶಿಷ್ಟ ಬದಲಾವಣೆಗಳು ಹರೆಯವನ್ನು ಗುರುತಿಸಬಹುದು. ಹುಡುಗರಲ್ಲಿ ಮುಖದ ಮೇಲೆ ಮೊಡವೆ, ಗುಪ್ತಾಂಗಗಳಲ್ಲಿ ರೋಮಗಳು ಕಾಣಿಸಿಕೊಂಡು ಧ್ವನಿಯು ಗಡುಸಾಗಿ ದೇಹದ ವಿವಿಧ ಅಂಗಾಂಗಗಳು ವೃದ್ಧಿಯಾಗುತ್ತವೆ. ಹಾಗೆಯೇ ಹುಡಿಗಿಗೆ ಸ್ತನ ಉಬ್ಬುವಿಕೆ. ಮುಖದ ಮೇಲೆ ಮೊಡವೆ ಮತ್ತು ಗಂಟಲಿನಿಂದ ಮಧುರವಾದ ಧ್ವನಿ ಕಾಣಿಸಿಕೊಳ್ಳುತ್ತದೆ. ಹುಡುಗಿಯರ ಹರದೆಯ ದೈಹಿಕ ವ್ಯತ್ಯಾಸಗಳಲ್ಲಿ ಹುಡುಗರಿಗಿಂತ ಎರಡು ಮೂರು ವರ್ಷಗಳ ಮೊದಲೇ ಆಗುತ್ತದೆ. ಈ ದೈಹಿಕ ಬದಲಾವಣೆಯಿಂದ ಹುಡುಗಿಯರಲ್ಲಿ ಸಾಮಾನ್ಯವಾಗಿ ನಾಚಿಕೆ ಸ್ವಭಾವ, ಸಂಕೋಚ ಹುಟ್ಟಿಕೊಳ್ಳುತ್ತವೆ. ಇವು ಹುಡುಗಿಯರಿಗೆ ಹೆಚ್ಚಾಗಿ ಇರುತ್ತವೆ. ಇದು ಅವರು ಬೆಳೆದು ಬಂದ ಪರಿಸರಕ್ಕನುಗುಣವಾಗಿ ಎಂದು ಹೇಳಬಹುದು. ಹಾಗೆಯೇ ಹುಡುಗರು ಹಿರಿಯರು ತಮ್ಮ ಲಿಂಗಕ್ಕನುಗುಣವಾಗಿ ನಡುವಳಿಕೆಗಳು ಕೋಪ. ಮುಂಗೋಪತನ ರೂಪಗೊಳ್ಳುತ್ತಾ ಬರುತ್ತವೆ.

ಕುಟುಂಬದಲ್ಲಿ ಹದಿಹರೆಯದವರಿಗೆ ಲಿಂಗ ತಾರತಮ್ಯಗಳು

ಸಮಾಜಿಕರಣದ ಪ್ರಕ್ರಿಯೆ ಕುಟುಂಬದಲ್ಲಿ ಬೆಳವಣಿಗೆಗನುಗುಣವಾಗಿ ತರಬೇತಿಯು ಬಾಲ್ಯದಕ್ಕಿಂತ ಹರೆಯ ವಯಸ್ಸಿನ ಅಂತರದಲ್ಲಿ ಕಟ್ಟುನಿಟ್ಟಿನ ನಿರ್ಬಂಧಗಳು ಹುಡುಗಿಗೆ ದೊರೆತು, ಹುಡುಗನಿಗೆ ಸ್ವತಂತ್ರವಾಗಿ ವರ್ತಿಸುವ ಕೆಲವು ಅವಕಾಶಗಳು ಕುಟುಂಬದಿಂದ ದೊರೆಯುತ್ತದೆ. ಅವರ ಉತ್ತಮ ವ್ಯಕ್ತಿತ್ವವು ಪ್ರಮುಖವಾಗಿ ಇಲ್ಲಿಂದಲೇ ವಿಕಸನಗೊಂಡು ಜೀವನ ಪೂರ್ತಿಯಾಗಿ ಮುಂದುವರೆಯುವ ಹಂತವಾಗಿರುತ್ತದೆ.

ಈ ಹದಿಹರೆಯವು ಎಂತಹ ಪರಿಸರದಿಂದ ಬಂದವು, ಅದು ಮನಸ್ಸಿನ ಮೇಲೆ ಯಾವ ರೀತಿಯ ಪರಿಣಾಮ ಬೀರಿತು ಎಂಬುದರ ಮೇಲಿನಿಂದ ಮನುಷ್ಯರ ವ್ಯಕ್ತಿತ್ವ ರೂಪಗೊಳ್ಳುತ್ತದೆ. ಅದು ಪ್ರತಿ ಒಬ್ಬರ ಜೀವನದಲ್ಲಿ ಬಂದುಹೋಗುವ ಕಾಲಘಟ್ಟವಾಗಿರುತ್ತದೆ. ಮನೆಯಲ್ಲಿ ನಡುವಳಿಕೆ ಕಂಡದ್ದು ಕೇಳುವುದು. ರೂಢಿಸಿಕೊಳ್ಳುವುದು, ಅನುಸರಿಸುವುದು, ಸಹಪಾಠಿಗಳ ವರ್ತನೆಗಳ ಗಮನಿಸಿ ಕಲಿಯುವುದು, ಈ ಹಂತದಲ್ಲಿಯೇ, ಈ ವಯಸ್ಸಿನಲ್ಲಿ ಹುಡುಗ ಹುಡುಗಿಯರು ಬೇರೆ ಬೇರೆಯಾಗಿ ವರ್ತನೆಗಳು ರೂಪಗೊಳ್ಳುತ್ತವೆ. ತಂದೆಯ ಪಾತ್ರದಲ್ಲಿ ಮಗನು ಸಿದ್ಧಗೊಂಡರೆ, ತಾಯಿಯ ಪಾತ್ರದಲ್ಲಿ ಮಗಳನ್ನು ಸಿದ್ಧಗೊಳಿಸಲು ಸಮಾಜೀಕರಣದಲ್ಲಿ ರೂಢಿಸಲು ಸಲಹೆ ನೀಡುತ್ತಾರೆ. ತಂದೆತಾಯಿಯ ನಿರೀಕ್ಷೆಗಳು ಅನುಸರಿಸಿ, ಪ್ರಶ್ನಿಸಿ ಇರುವ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ರೂಪಿಸಿಕೊಳ್ಳುವ ಹಂತ ಇಲ್ಲಿ ಒಡಮೂಡಿಸುತ್ತದೆ. ಸ್ವ ಇಚ್ಛೆಗೆ ಪ್ರಶ್ನೆಗಳು ಸಂದೇಹಗಳು ಸಹ ಬೀರುತ್ತವೆ. ಇದಕ್ಕೆ ಆಧಾರವಾಗಿ ಡಾ.ಸಿ.ಆರ್. ಚಂದ್ರಶೇಖರ್ ಅವರು ಹದಿಹರೆಯದವರ ಬಗ್ಗೆ ಒಡಮೂಡಿಸಿದ ಒಂದು ಮುಖವನ್ನು ನೋಡೋಣ.

"ಸಂಜೆಯ ಏಳು ಗಂಟೆಯ ಸುಮಾರಿಗೆ ಕತ್ತಲಾವರಿಸಿತು. ಬೀದಿ ದೀಪಗಳು ಹತ್ತಿಕೊಂಡಿದ್ದವು. ಅಂತಹ ಸಮಯದಲ್ಲಿ ವಿಜಿ ಗೆಳತಿಯ ಮನೆಗೆ ಹೋಗುವ ತುರಾತುರಿಯಲ್ಲಿ ಇದ್ದಳು. ಅದಕ್ಕೆ ತಾಯಿಯ ಗೌರವ ಪ್ರಶ್ನೆ ಮಾಡುತ್ತಾಳೆ. 'ಏನೇ ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೊರಟಿದ್ದೀಯಾ? ವಿಜಿಯ ೧೪ ವರ್ಷದ ಮಗಳನ್ನು ಕೇಳುತ್ತಾಳೆ. ಅದಕ್ಕೆ ವಿಜಿ 'ಪ್ರಶಾಂತಿ ಮನೆಗೆ ಹೋಗಿ ಬರ್‍ತೇನಮ್ಮ, ಒಟ್ಟಿಗೆ ಓದಿಕೊಳ್ಳೋಣ ಬಾರೆ ಅಂತ ಕರೆದಿದ್ದಾಳೆ', ಕಾಲಿನ ಚಪ್ಪಲಿ ಸರಿಪಡಿಸಿಕೊಳ್ಳುತ್ತಾ ಹೇಳಿದಳು.

'ಒಳಕ್ಕೆ ನಡಿಯೇ ಪ್ರಶಾಂತಿ ಮನೆಗೆ ಈ ಕತ್ತಲಲ್ಲಿ ಹೋಗ್ತಾಳಂತೆ ಬುದ್ಧಿ ನೆಟ್ಟಗಿದೆ ತಾನೇ? ಪ್ರಶಾಂತಿ ಮನೆ ಹತ್ತಿರದಲ್ಲಿದೆ ಏನು? ಇಲ್ಲೆ ಕುಕ್ಕರಿಸಿ ಓದ್ಕೋ' ಎಂದು ಗೌರಮ್ಮ ಸಿಡುಕಿದಳು.

'ಯಾಕಮ್ಮ ಹೋಗಬಾರದು, ಏನಾಗಿದೆ ನಿನಗೆ ಈ ಹೊತ್ತು ಪ್ರಶಾಂತಿ ಮನೆ ನನಗೇನು ಹೊಸದೇ ಎಷ್ಟು ಸಲ ಹೋಗಿಲ್ಲ, ಬರ್‍ತೀನಿ ಅಂತ ಹೇಳಿಬಿಟ್ಟಿದ್ದೀನಿ, ಕಾಯ್ತಿರ್‍ತಾಳೆ, ನಾನು ಹೋಗ್ಲೇಬೇಕು' ಎಂದು ವಿಜಿ ತುಟಿ ಉಬ್ಬಿಸಿದಳು

ಅದಕ್ಕೆ ತಾಯಿ ನೀನಿನ್ನೂ ಎಳೇ ಹುಡುಗಿ ಅಂತ ತಿಳಿದ್ಕೊಂಡಿದ್ದೀಯ ದೊಡ್ಡವಳಾಗಿದ್ದಿ, ನಿನ್ನದು ಹಸಿಮೈ, ಈ ಮುಸ್ಸಂಜೆ ಹೊತ್ನಲ್ಲಿ ಹೊರಗಡೆ ಹೋದರೆ ಕೆಟ್ಟದಾದೀತು, ನೋಡಿದವರು ಏನಂದಾರು? ಹೋಗು ಮರ್ಯಾದೆಯಿಂದ ರೂಮ್ನಲ್ಲಿ ಕುಳಿತು ಓದಿಕೊ. ಆಗೋಲ್ಲ ಅಂದೆಯೋ ನಿಮ್ಮ ತಂದೆಗೆ ಹೇಳಿ ಸ್ಕೂಲ್ ಬಿಡಿಸಿ ಬಿಡ್ತೇನೆ, ನೀನು ಓದಿ ಡಿಗ್ರಿ ತೊಗೊಂಡು, ಈ ಪ್ರಪಂಚವನ್ನು ಆಳಬೇಕಾಗಿಲ್ಲ. ಲಕ್ಷಣವಾಗಿ ಮನೆಯೊಳಗಿದ್ದುಕೊಂಡು ಅಡುಗೆ, ಹಾಡು, ಹಸೆ ಕಲಿತ್ಕೋ" ಎಂದು ಗೌರಮ್ಮ ಅಜ್ಞಾಪಿಸಿದಳು.

ಅದಕ್ಕೆ ವಿಜಿ ಹೋಗಮ್ಮ ಹಳೆ ಮುದ್ಗಿಗೊಡ್ಡಿನ ತರಹ ಮಾತಾಡ್ತೀಯ, ದೊಡ್ಡವರಾದ ತಪ್ಪಿಗೆ ಜೈಲಿನ ಖೈದಿ ತರ ಮನೆಯೊಳಗೆ ಇರೋದಿಕ್ಕೆ ನಾನು ತಯಾರಿಲ್ಲ. ಸ್ಕೂಲಿಗೂ ಹೋಗ್ತೇನೆ, ಕಾಲೇಜಿಗೂ ಹೋಗ್ತೇನೆ. ನನ್ನನ್ನು ತಡೆಯೋಕೆ ಸಾದ್ಯವಿಲ್ಲ. ನನ್ನ ಸ್ನೇಹಿತರ ದೊಡ್ಡವರಾಗಿದ್ದಾರೆ. ಅವರು ನಿನ್ನ ತರಹ ಆಡೋದಿಲ್ಲ ತಿಳಿಕೋ ಎಂದು ವಿಜಿ ಪ್ರತಿಭಟಿಸಿದಳು

ಅದಕ್ಕೆ ತಾಯಿಯು ಹೇಳುತ್ತಾ 'ನಿನ್ನ ಪಾಲಿಗೆ ಉದ್ದವಾಗ್ತಿದೆ, ನಿನ್ನ ತಂದೆ ಹೆಚ್ಚು ಸ್ವಾತಂತ್ರ್ಯಕೊಟ್ಟು ಮದುವೆ ಮಾಡಿ ಹಾಳು ಮಾಡಿಬಿಟ್ರು. ನಿನ್ನ ತಂದೆ ಬರಲಿ ಅವಳಿಗೆ ಸ್ಕೂಲಿಗೆ ಕಳುಹಿಸಬೇಡಿ ಅಂತ ಹೇಳಿಬಿಡ್ತೀನಿ.'

"ನಾನು ನಿನ್ನ ಮಾತು ಕೇಳುವಳಲ್ಲ, ನನ್ನ ಜವಬ್ದಾರಿ ನನಗೆ ಗೊತ್ತಿದೆ. ಸ್ನೇಹಿತೆ ಮನೆಗೆ ಹೊದಾಕ್ಷಣ ಕೆಟ್ಹೋಗ್ತೀನಾ ಅಲ್ಲೇನು ಹುಲಿಕರಡಿಗಳಿಲ್ಲ. ನನ್ನನ್ನು ತಿಂದು ಹಾಕ್ಬಿಡೋಕೆ. ಈ ಮನೆಗಿಂತ ಆ ಮನೆಯವರೇ ನನ್ನ ಹೆಚ್ಚು ಪ್ರೀತಿ ವಿಶ್ವಾಸದಿಂದ ನೋಡ್ತಾರೆ. ಈಗ ನಾನು ಹೋಗುವಳೇ" ಎಂದು ವಿಜಿ ಹೊರಟುಬಿಟ್ಟಳು

ತಾವು ಹೆತ್ತ ಮಕ್ಕಳು ತಮ್ಮ ಮಾತಿಗೆ ಬೆಲೆ ಕೊಡದೇ ಇದ್ದರೆ ಹೇಗೆ? ನಾನು ಹೇಳಿದರಲ್ಲಿ ಏನು ತಪ್ಪಿದೆ. ಮೈ ನೆರೆದ ಹುಡುಗಿ, ಕತ್ತಲಲ್ಲಿ ಒಂಟಿಯಾಗಿ ಹೋಗುವುದು ಅಪಾಯವಲ್ಲವೇ ಇಷ್ಟನ್ನು ಅವಳು ಅರ್ಥಮಾಡಿಕೊಳ್ಳಲಿಲ್ಲವಲ್ಲ. ಇನ್ನೇನು ಗತಿ? ಮುಂದೆ ಇವಳು ತಮ್ಮ ಕೈಗೆ ಸಿಗುತ್ತಾಳೆಯೇ? ಏನಾದರೂ ಹೆಚ್ಚು ಕಡಿಮೆಯಾದರೆ ತಾವಲ್ಲವೇ ಕಷ್ಟವನ್ನು ಅನುಭವಿಸುವರು ಎಂದು ಉದಾಸಿನ ತೋರಿದಳು."

ಈ ಹದಿಹರೆಯದ ಒಂದು ಮುಖದ ಹಿನ್ನೆಲೆ ಕೇವಲ ಒಂದು ಕುಟುಂಬಕ್ಕೆ ಸಂಬಂಧಿಸಿದ್ದಲ್ಲ. ಹಲವಾರು ಕುಟುಂಬಗಳಲ್ಲಿ ಬೆರೆತು ಹೋಗಿರುತಕ್ಕಂತಹ ತಾತ್ಪರ್ಯವಾಗಿದೆ. ಹುಡುಗಿಯ ವಯಸ್ಸಿನಲ್ಲಿ ದೊಡ್ಡವಳಾಗಿರುವುದರಿಂದ ಕುಟುಂಬದ ಕೆಲವು ಚೌಕಟ್ಟುಗಳು ನಿರ್ಮಾಣ ಮಾಡಿ ಬಿಡುತ್ತಾರೆ. ಬಾಲ್ಯದಲ್ಲಿ ಸ್ವತಂತ್ರ್ಯವಾಗಿ ಚಲಿಸಿದ ಹುಡುಗಿಗೆ ಈ ವಯಸ್ಸಿನಲ್ಲಿ ಮನೆಯಲ್ಲಿಯೇ ಇರುವ ಶಿಸ್ತು ಕಟಿಬದ್ಧತೆಯ ತರಬೇತಿಗಳನ್ನು ತಂದೆತಾಯಿಯರು ನೀಡುತ್ತಾರೆ. ಅಂದರೆ ಹರೆಯದ ಹುಡುಗಿ ದಾರಿ ತಪ್ಪಿದರೆ (ಸ್ವ ಇಚ್ಛೆಯಾಗಿ ವರ್ತಿಸಿದರೆ) ಸಮಾಜದ ನಿಂದನೆಗಳು ಇರುವುದರಿಂದ ತಂದೆತಾಯಿಯರೂ ಅವರು ಸ್ವತಂತ್ರ್ಯವಾಗಿ ಚಲಿಸುವ ಬೀಡುವುದಿಲ್ಲ ದೈಹಿಕವಾಗಿ ಬೆಳೆದಿರುವುದರಿಂದ ಕುಟುಂಬದ ಮರ್ಯಾದೆಯನ್ನು ಕಳೆದು ಬಿಡುವ ಆತಂಕ ತಂದೆತಾಯಿಯರ ಮನಸ್ಸಿನಲ್ಲಿ ಒಡಮೂಡತ್ತದೆ. ಹುಡುಗಿಯ ಸ್ವನಿರ್ಣಯಕ್ಕೆ ಯಾವುದೇ ರೀತಿಯ ಆಸ್ಪದ ನೀಡುವುದಕ್ಕೆ ನಿರಾಕರಿಸುತ್ತಾರೆ. ಕುಟುಂಬದ ಸಮಾಜೀಕರಣದ ಪ್ರಕ್ರಿಯೆಗಳು ಹುಡುಗಿಯ ಸ್ವತಂತ್ರ್ಯವನ್ನು ನಿರಾಕರಿಸಿ, ತಂದೆತಾಯಿಯರ ಅಂಕೆಯಲ್ಲಿ ಇರಬೇಕೆನ್ನುವ ನೋಟಗಳು ಇರುತ್ತದೆ. ಹುಡುಗಿಯರು ಕೆಲವು ಸೃಜನಾತ್ಮಕ ಚಟುವಟಿಕೆ ವ್ಯಕ್ತಪಡಿಸುವ ಹಾಗಿರುವುದಿಲ್ಲ. ಶಿಕ್ಷಣ

ಕಲಿಕೆಯ ಸಂದರ್ಭದಲ್ಲಿ ಹುಡುಗರಿಗೆ ಸ್ವತಂತ್ರವಾಗಿ ಅಲೆದಾಡುವುದು ಸರಳವಾಗಿದ್ದರೆ ಸ್ತ್ರೀಗೆ ಉದ್ದೇಶಪೂರ್ವಕವಾಗಿ ಅಲೆದಾಡುವ ಹಾಗಿಲ್ಲ. ಶಿಕ್ಷಣ ಇನ್ನಿತರೆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಅವಕಾಶವು ನಿರಾಕರಣೆಯದಾಗಿರುತ್ತದೆ. ಒಂದು ವೇಳೆ ಆ ನಿಟ್ಟಿನಲ್ಲಿ ಸ್ವತಂತ್ರ್ಯದಿಂದ ಇರುವ ಹುಡುಗಿಗೆ, ಸಮಾಜವು ಇಲ್ಲದ ನಿಂದನೆ ಅಪಪ್ರಚಾರಗಳು, ಸೃಷ್ಟಿಸಿ ಬಿಡುತ್ತಾರೆ. ಅವಳ ವ್ಯಕ್ತಿತ್ವಕ್ಕೆ ಕಪ್ಪುಮಸಿ ಬಳಿಯುತ್ತಾರೆ. ಸಮಯ ಮೀರಿ ಮನೆಗೆ ಬರಬಾರದು, ಹೋಗಬಾರದು. ಈ ನಿರ್ಬಂಧಗಳು ಕೆಲವು ಸಂದರ್ಭದಲ್ಲಿ ಮೀರಿ ಬಂದಾಗ ತಂದೆತಾಯಿಯರ ಪ್ರಶ್ನೆಗಳು ಅನುಮಾನಸ್ಪದವಾಗಿ ಪ್ರವೇಶಿಸುವುದಕ್ಕೆ ಮುಂಚೆ ಪ್ರಾರಂಭವಾಗುತ್ತವೆ. ಈ ರೀತಿಯ ಕುಟುಂಬದ ಚೌಕಟ್ಟುಗಳು ಹುಡುಗಿ ಒಳ್ಳೆಯ ಉದ್ದೇಶಕ್ಕಾಗಿ ಹೋಗಿದ್ದರೆ ತಪ್ಪುಕಲ್ಪನೆಗಳು ಸೃಷ್ಟಿಯಾಗಿ ಬಿಡುತ್ತವೆ. ಇದರಿಂದ ಪ್ರತಿಭೆಯು ಬೆಳೆಯುವುದರಲ್ಲೆ ಹಾಗೆ ಆಗುತ್ತದೆ. ಸಹಜ ವ್ಯಕ್ತಿತ್ವಕ್ಕೆ ತೊಡಕಾಗುತ್ತದೆ. ಕೆಲವು ಸಂದರ್ಭದಲ್ಲಿ ಸಮಯ ಮೀರಿದಾಗ ಆತಂಕ, ಭಯಗಳು, ಹುಡುಗಿಯರ ಮನಸ್ಸಿನಲ್ಲಿ ಮೂಡುತ್ತವೆ. ಅದಕ್ಕೆ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಗಾಂಧೀಜಿ ಅವರ ಮಾತು ಸ್ಪಷ್ಟವಾಗಿ ನೆನಪಿಸಿಕೊಳ್ಳಬೇಕಾಗುತ್ತದೆ. ಸ್ತ್ರೀಯರು ಮಧ್ಯರಾತ್ರಿಯಲ್ಲಿ ಸ್ವತಂತ್ರವಾಗಿ ಯಾವಾಗ ನಿರ್ಭೀತಿಯಿಂದ ಚಲಿಸುತ್ತಾರೊ ಆಗ ನಮ್ಮ ದೇಶ ಸಂಪೂರ್ಣ ಸ್ವಾತಂತ್ರ್ಯ ಪಡೆದ ಹಾಗೆ ಎನ್ನುವ ಮಾತು ಮಹಿಳೆಯರ ಸ್ವಾತಂತ್ರ್ಯದ ಬಗ್ಗೆ ಹಿಡಿದ ಕನ್ನಡಿಯಾಗಿದೆ.

ಉದಾ: ಹರೆಯದ ಹುಡುಗಿಯು ಹೊರಗಡೆ ಹೋಗಬೇಕಾದ ಸಂದರ್ಭವಿದ್ದಾಗ ಚಿಕ್ಕ ಹುಡುಗನ ಜೊತೆ ಇಲ್ಲವೇ ಅವಳ ಅಣ್ಣನ ಜೊತೆ ಮಾಡಿ ಕುಟುಂಬದವರು ಕಳುಹಿಸಿ ಕೊಡುವುದು ಕಾಣುತ್ತೇವೆ.

ಹುಡುಗಿಯ ರಕ್ಷಣೆಗಾಗಿ ಚಿಕ್ಕ ಹುಡುಗ ಇಲ್ಲವೆ ಅವಳ ಅಣ್ಣ ಸಹಾಯಕನಾಗಿ ಹೋಗಬೇಕು ಎನ್ನುವ ವಿಪರ್ಯಾಸದ ಸಂಗತಿ ಎಷ್ಟು ಗಾಢವಾಗಿರುತ್ತದೆ ಎಂದರೆ ಹದಿಹರೆಯದ ಹುಡುಗಿಗೆ ಸ್ವರಕ್ಷಣೆಯ ಅವಕಾಶವಿಲ್ಲ ಅವಳು ಸಹಾಯವನ್ನು ಯಾಚಿಸುವವಳು ಎನ್ನುವ ಮಟ್ಟಿಗೆ ಲಿಂಗ ಭೇದದ ನೋಟಗಳು ಗಾಢವಾಗಿದೆ. ಹುಡುಗನಿಗೆ ಈ ವಯಸ್ಸಿನಲ್ಲಿ ಸ್ವತಂತ್ರ್ಯವಾಗಿ ಚಲಿಸುವ ಅವಕಾಶಗಳು ಇರುತ್ತವೆ.

ಕುಟುಂಬದ ಕೆಲವು ಸಂದರ್ಭದಲ್ಲಿ ಹಿರಿಯರು ಕೆಲವು ವಿಷಯಗಳ ಬಗ್ಗೆ ಚರ್ಚೆ ನಡೆಸುತಿರುತ್ತಾರೆ. ಈ ಸಂದರ್ಭಗಳ ನಡುವೆ ಹದಿಹರೆಯದ ಹುಡುಗಿ ಮಾತನಾಡಿ ಸಲಹೆ ನೀಡಿದರೆ ಅದು ಉತ್ತಮ ಸಲಹೆಯಾದರೂ ಹಿರಿಯರು ಅದನ್ನು ಒಪ್ಪದೆ 'ನಿನಗೇನು ಗೊತ್ತಿದೆ ಬಹಳ ಜಾಣ ಅಂತ ತಿಳ್ಕೊಂಡಿದ್ದಿಯಾ?' ಸುಮ್ಮೆ ಕೂತ್ಕೊ! ಎಂದು ಹುಡುಗಿಯ ಸಲಹೆಗೆ ತದ್ವಿರುದ್ದ ನುಡಿಗಳಿಂದ ನಿರಾಕರಿಸುತ್ತಾರೆ. ಆ ಹುಡುಗಿಯ ಮನಸ್ಸಿನಲ್ಲಿ ನಾನು ಹೇಳಿದ ಮಾತು ಸರಿ ಇಲ್ಲವೆ ಎನ್ನುತ್ತಾ ತನ್ನನ್ನು ತಾನು ಪ್ರಶ್ನೆ ಹಾಕಿಕೊಳ್ಳುವ ಸಂದರ್ಭಗಳು ಬಂದು ಬಿಡುತ್ತವೆ. ಹುಡುಗಿಯ ಉತ್ತಮ ಪ್ರತಿಕ್ರಿಯೆಗೆ ಬೆಲೆ ಇದ್ದರೂ ನಿರಾಕರಿಸುವ ಸಂದರ್ಭ ಇದಾಗಿರುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ನೀನು ಚಿಕ್ಕವಳಲ್ಲ. ಈಗ ದೊಡ್ಡವಳಾಗಿದ್ದಿಯಾ?

ಈ ಮನೆಯ ಜವಬ್ದಾರಿಯಲ್ಲ ತೆಗೆದುಕೊಳ್ಳಬೇಕು. ಹಾಗೆಲ್ಲ ಮನಃಬಂದ ಹಾಗೆ ವರ್ತಿಸಬಾರದು ಎನ್ನುವ ಸಂದರ್ಭಗಳು ಕೆಲವು ಜವಬ್ದಾರಿ ಒತ್ತಡದ ಹೇಳಿಕೆಗಳು ಸಹ ನೀಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಈ ವಯಸ್ಸಿನಲ್ಲಿ ಗೊಂದಲದ ಮನಸ್ಸು ನಿರ್ಮಾಣವಾಗಿ ಬಿಡುತ್ತದೆ. ನಾನು ಚಿಕ್ಕವಳೆ ಅಥವಾ ದೊಡ್ಡವಳೇ ಎನ್ನುವ ತೊಳಲಾಟದಿಂದ ಸ್ವ ನಿರ್ಧಾರದ ಹೇಳಿಕೆ ನೀಡಿದರೆ ಏನೆಂದುಕೊಳ್ಳುತ್ತಾರೆ. ಅಥವಾ ಜವಬ್ದಾರಿ ತೆಗೆದುಕೊಂಡು ಕೆಲಸ ಮಾಡಿದಾಗ ಯಾವ ಪ್ರಕ್ರಿಯೆ ನೀಡುತ್ತಾರೆ ಎನ್ನುವ ಸಂಕೋಚ ಸ್ವಭಾವಗಳು ಸೃಷ್ಟಿಯಾಗಿ ಬಿಡುತ್ತದೆ.

ಇಂತಹ ಸಂದರ್ಭದಲ್ಲಿ ಅವರ ಮನಸ್ಸಿನ ಸ್ಥಿತಿಯನ್ನು ಅರ್ಥೈಸಿಕೊಂಡು ಸಲಹೆಯ ಜೊತೆ ಒಳ್ಳೆಯ ವಿಚಾರಗಳು ಹುಡುಗಿಯಿಂದ ಬರುತ್ತಿದ್ದರೆ ನಿರಾಕರಣೆಯನ್ನು ತೋರಬಾರದು. ಪ್ರೀತಿ ಆಧಾರದಿಂದ ಸ್ವಿಕರಿಸಿ ನಿಜವೆಂದು ಹೇಳಿಕೆಗನುಗುಣವಾಗಿ ಅರ್ಥಪೂರ್ಣ ಹೊಗಳಿಕೆ ನೀಡಿದಾಗ ಇನ್ನೂ ಉತ್ತಮ ಪ್ರತಿಕ್ರಿಯೆಗಳ ತೋರಿಸಲು ಜ್ಞಾನ ಚಾಣಕ್ಯವನ್ನು ರೂಢಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಇನ್ನೂ ಜಾಣೆ ಎನಿಸಿಕೊಳ್ಳಬೇಕೆಂದು ಆ ಮಾರ್ಗದೆಡೆಗೆ ಸಾಗುತ್ತಾರೆ. ಇಲ್ಲದಿದ್ದರೆ, ತಮ್ಮ ಉತ್ತರಕ್ಕೆ ಪ್ರತಿಕ್ರಿಯೆವಿಲ್ಲವೆಂದು ಹಿಂಜರಿಕೆಯಿಂದ, ಸಂದರ್ಭಕ್ಕನುಗುಣವಾಗಿ ಸಲಹೆ ನೀಡದೆ ಇರುವುದು ಕಾಣುತ್ತೇವೆ. ಇದು ಅವರ ಉತ್ತಮ ವ್ಯಕ್ತಿತ್ವಕ್ಕೆ ಒಂದು ತಡೆ ಎಂದು ಹೇಳಬಹುದು.

ಕುಟುಂಬದ ಸಮಾಜೀಕರಣಕ್ಕೆ ಅನುಗುಣವಾಗಿ ಅಂತರ್ಗತಿಸಿಕೊಂಡ ಕೆಲವು ರೂಢಿಗಳು, ಲಿಂಗ ತಾರತಮ್ಯದ ನೋಟದಲ್ಲಿ ಹುಡುಗಿಯರೇ ಪರಿಗಣಿಸಿರುವ ಮಾದರಿಯ ವಿಧಾವನೇ ಭಿನ್ನವಾಗಿರುತ್ತದೆ. ಕುಟುಂಬದ ಸಂಪ್ರದಾಯಕ್ಕನುಗುಣವಾಗಿ ಶ್ರದ್ದೆಯಿಂದ ಕೆಲಸ ಮಾಡುವ ತರಬೇತಿ ಸಿಗುತ್ತದೆಯೇ ಹೊರತು ಸ್ವ ನಿರ್ಧಾರದ ತರಬೇತಿಗಳು, ಆಧುನಿಕ ಬದಲಾವಣೆಯ ಯಾವುದೇ ಸಂದರ್ಭಗಳು, ಒಪ್ಪಿಗೆಗಳು ನಿರಾಕರಣೆಯವಾಗಿಯೆ ಇರುತ್ತದೆ. ಸ್ವತಂತ್ರವಾಗಿ ಆಧುನಿಕತೆಗೆ ಸಂಬಂಧಿಸಿದ ಹಾಗೆ ಯಾವುದೇ ಉಡುಪು, ಕೇಶ ಬದಲಾವಣೆಯ ವಿನ್ಯಾಸಗಳು ಇಚ್ಛೆಯ ಮೇರೆಗೆ ರೂಢಿಸಿಕೊಂಡರೆ ಅದಕ್ಕೆ ಕಟ್ಟಪ್ಪಣೆ ಬೀರುವುದು ಸಹ ಕಾಣುತ್ತೇವೆ. ಹದಿಹರೆಯದ ಹುಡುಗಿಯರಿಗೆ, ಸಂಬಂಧಿಸಿದ ಒಂದು ಮುಖವನ್ನು ತಿಳಿಯೋಣ.

ಜಾನಕಮ್ಮ ಮಗಳ ರಾಧಾಳನ್ನು ಕುರಿತು ರೆಗಡ್ತಾ ಇರುವ ಸಂದರ್ಭದಲ್ಲಿ ಜಾನಕಮ್ಮ ಬರ್ತಾಳೆ. ಯಾಕೆ ಎಂದು ವಿಚಾರಿಸಿ ರಾಧಳನ್ನು ಕೇಳ್ತಾಳೆ. ಅದಕ್ಕೆ ರಾಧ

"ನಾನೇನೂ ಮಾಡ್ಲಿಲ್ಲ, ಅಂಟಿ ಅಮ್ಮ ಸುಮ್ನೆ ನನ್ನ ಬೈತ್ತಿದ್ದಾರೆ" ಎಂದು ದೂರಿದಳು. ಚಿತ್ರಾಂಗಿಣಿ ಕಣೆ ನೀನು ಏನು ಮಾಡ್ದೆ ನಾನು ನಿನ್ನನ್ನು ಬೈತ್ತಿರ್ತಿನಲ್ಲವೇ? ನೋಡಿ ರಾಜಮ್ಮ ಇವಳ ಅವತಾರವನ್ನು ಸ್ವಲ್ಪ ಕಣ್ಣು ಬಿಟ್ಟು ನೋಡಿ ನಾಟಕದವಳ ಹಾಗೆ ಮುಂದಲೆ ಕೂದಲನ್ನು ಕತ್ತರಿಸಿಕೊಂಡಿರೋ ಚೆಂದನೋಡಿ. ಅವಳ ಹುಬ್ಬು ನೋಡಿ... ಎಲ್ಲೋ ಕೈ ತೊರವೆ ಅಚ್ಚುಕಟ್ಟಾಗಿ ಗಾಜಿನ ಬಳೆಗಳನ್ನು ಹಾಕ್ಕೋ ಅಂದರೆ

ಯಾವುದೇ ಪ್ಲಾಸ್ಟಿಕ್ ಕಡಗವನ್ನು ತಗಲು ಹಾಕ್ಕೊಂಡಿದ್ದಾಳೆ. ಇವೆಲ್ಲ ಯಾವ ದೇವರಿಗೆ ಪ್ರೀತಿ ಅಂತೀನಿ.. ನೀವೇ ಹೇಳಿ."

"ಹೋಗಲಿ ಬಿಡಿ ಜಾನಕಮ್ಮ, ಚಿಕ್ಕ ವಯಸ್ಸು ಏನೇನೋ ಆಸೆಗಳಿರುತ್ತೆ, ಇದೆಲ್ಲಾ ಈಗಿನ ಫ್ಯಾಷನ್, ಮಾಡಿಕೊಂಡು ಸಂತೋಷ ಪಡ್ಲಿ, ಮದುವೆ ಆದ ಮೇಲೆ ಅತ್ತೆ ಮನೆಯಲ್ಲಿ ಗರತಿ ಗೌರಮ್ಮನ ಹಾಗೆ ಇರೋದು ಮುಂದೆ ಇದ್ದೇ ಇರುತ್ತಲ್ಲ."

ಅದಕ್ಕೆ ರಾಜಮ್ಮ "ಏನು ಚಿಕ್ಕ ವಯಸ್ಸು, ಹದಿನಾರು ವರ್ಷ ತುಂಬಿತಲ್ಲ, ಮುಂದಿನ ವರ್ಷ ಹೆಚ್ಚೆಂದರೆ ಇನ್ನೆರಡು ವರ್ಷದಲ್ಲಿ ಇವಳ ಮದುವೆ ಮಾಡಬೇಕಲ್ಲ. ಸರಿಯಾದ ಗಂಡನನ್ನು ಈಗನಿಂದಲೇ ಹುಡುಕುಬೇಕಲ್ಲ. ನಮ್ಮದು ಸಂಪ್ರದಾಯಸ್ಥ ಮನೆತನ. ಅವಳು ಹೀಗೆ ಫ್ಯಾಷನ್ ಮಾಡ್ಕೊಂಡು ತಿರುಗಿದರೆ ನಮ್ಮ ಜನ ಏನಂದಾರು? ಇವಳನ್ನು ಸೊಸೆ ಮಾಡ್ಕೊಳ್ಳೋದಿಕ್ಕೆ ಯಾರು ತಾನೇ ಮುಂದೆ ಬರ್ತಾರೆ? ಅದಕ್ಕೆ ರಾಧ ಮದುವೆಯ ಬಗ್ಗೆ ನಿರಾಕರಣೆಯ ಮಾತು ಹೇಳಿ "ನನ್ನ ಅಲಂಕಾರ ನೋಡೇ ಈ ರೀತಿ ಆಡೋಳು, ನನ್ನ ಸ್ನೇಹಿತರ ಅಲಂಕಾರ ನೋಡಿದ್ರೆ ಕುಣಿದಾಡ್ಬಿಡ್ತಾಳೆ. ನಾನಾದರೂ ಲಕ್ಷಣವಾಗಿ ಸೀರೆ ಉಡ್ತೇನೆ. ಅವರು ಶರ್ಟ್ ಪ್ಯಾಂಟು ಹಾಕ್ಕೊಳ್ತಾಲೆ. ಬಾಬ್ ಕಟ್. ಬಾಯ್ ಕಟ್ ಮಾಡಿಸ್ಕೊಂಡಿದ್ದಾರೆ. ಕಿವಿಗೆ ಮೂಗಿಗೆ ಯಾವ ಆಭರಣವೂ ಇಲ್ಲ. ಅವೆಲ್ಲ ಗುಲಾಮಗಿರಿಯ ಮೂಢನಂಭಿಕೆಗಳ ಸಂಕೇತ ಅಂತಾರೆ. ನನ್ನನ್ನೇ ಗರತಿ ಗೌರಮ್ಮನ ತರಹ ಇದ್ದೀಯಾ ಅಂತ ಚುಡಾಯಿಸುತ್ತಾರೆ. ಅಮ್ಮನಿಗೆ ಇದೆಲ್ಲಾ ಅರ್ಥ ಆಗೋಲ್ಲ. ಅವಳು ಹಳೆ ಕಾಲದವಳು ನನಗೂ ಹಾಗೆ ಇರು ಅಂತರೆ. ಇದು ನ್ಯಾಯವಾ?" ಎಂದು ಪ್ರಶ್ನಿಸುತ್ತಾಳೆ.

ಅಲ್ಲ ರಾಜಮ್ಮ ಕಾಲ ಬದಲಾಯಿತು ಅಂದರೆ ರೀತಿ ನೀತಿಗಳು ಬದಲಾಗ್ತಾವಾ? ಹೆಣ್ಣಾಗಿ ನಾನು ಗಂಡಸಿನಂತೆ ಇರ್ತೇನೆ. ಅವನ ಹಾಗೆ ಬಟ್ಟೆ ಹಾಕಿಕೊಳ್ತೋನೆ ಅಂದ್ರೆ ಅದು ಸರಿನಾ? ಹೆಣ್ಣಿಗೆ ಸೀರೆಯೇ ಲಕ್ಷಣ. ಉದ್ದನೆ ಕೂದಲನ್ನು ಜಡೆ ಹಾಕಿ, ಗಂಟು ಕಟ್ಟಿ ಮುಡಿ ತುಂಬ ಹೂಮುಡಿದುಕೊಂಡು, ಕೈ ತುಂಬಾ ಬಳೆ ತೊಟ್ಟು ನಿಂತರೆ, ದೃಷ್ಟಿ ನಿವಾರಿಸಬೇಕಾಗುತ್ತೆ, ರಾಧಾ ನೀನು ಗಂಡನ ಮನೆಗೆ ಹೋದ ಮೇಲೆ ಏನು ಬೇಕಾದರೂ ಮಾಡಿಕೋ, ನಿನ್ನ ಗಂಡನ್ನು ಒಪ್ಪಿಸಿ ಯಾವ ರೀತಿ ಬೇಕಾದರೂ ಅಲಂಕಾರ ಮಾಡಿಕೋ, ಆದರೆ ನಮ್ಮ ಮನೇಲಿರೋ ತನಕ, ನಿನ್ನ ಹೊತ್ತು ಸಾಕಿದ ನಮ್ಮ ಮಾತಿಗೆ ಸ್ವಲ್ಪ ಬೆಲೆ ಕೊಟ್ಟು ಸಂಪ್ರದಾಯದ ರೀತಿಯಲ್ಲಿ ನಡಕೋ ತಿಳೀತಾ" ಎಂದರು.

"ಕೇಳಿದ್ರಾ ಆಂಟಿ, ಅಮ್ಮ ಹೇಳೋ ಮಾತನ್ನ, ಹಳೇ ಸಂಪ್ರದಾಯಗಳ ಕಂದಾಚಾರಗಳ ಸರಪಣಿಗಳಿಂದ ನನ್ನಂತವರನ್ನು ಕಟ್ಟಿ ಹಾಕಿ, ನಮ್ಮ ಆಸೆ, ಆಕಾಂಕ್ಷೆಗಳನ್ನು ಒಲಕೊಡುವ ಹಿರಿಯರಿಗೆ ಧಿಕ್ಕಾರ, ಕಾಲಕ್ಕೆ ತಕ್ಕಂತೆ ಬದಲಾಗಬೇಕೆಂಬ ಕಾಮನ್‌ಸೆನ್ಸ್ ದೊಡ್ಡವರಿಗಿಲ್ಲ. ಇದು ನಮ್ಮ ಧೌರ್ಭಾಗ್ಯ ರಾಧ ಆವೇಶದಿಂದ ನುಡದಳು.""

ಕೆಲವು ಮನೆಯ ಸಂಪ್ರದಾಯಗಳು ಆಧುನಿಕತೆಯತ್ತ ಹೊರಳುವುದಿಲ್ಲ. ಹಿಂದೆ ಬಂದಿರತಕ್ಕಂತಹ ರೂಢಿನಿಯಮ ಪರಿಪಾಲನೆಯಲ್ಲಿ ಮುಂದುವರಿಸುತ್ತಿರುವುದರಿಂದ ಹೊಸ ಬದಲಾವಣೆಯು ಅವರಿಗೆ ಏನೋ ಅಪಾಯ ಸೂಚನೆಯ ಘಂಟೆಯ ಹಾಗೆ ಮನಸ್ಸು ಹೊರಳುತ್ತಿರುತ್ತದೆ. ಸ್ತ್ರೀಯರಿಗೆ ಇಲ್ಲಿ ಕಟಬದ್ಧತೆಗಳು ರೂಢಿಯಾಗಿರುವಾಗ ಅದನ್ನೇ ಪಾಲಿಸುವಂತೆ ಸಮಾಜೀಕರಣದ ತರಬೇತಿಗಳು ಸಿದ್ಧಗೊಂಡಿರುತ್ತದೆ. ಹದಿಹರೆಯದ ವಯಸ್ಸಿನಲ್ಲಿ ಲಿಂಗತಾರತಮ್ಯದ ಕೆಲವು ನೋಟಗಳು ಕಳಚಿಕೊಳ್ಳುವ ಸಂದರ್ಭವಿರುತ್ತದೆ. ಅದಕ್ಕೆ ಯಾಕೆ? ನಾನ್ಯಾಕೆ ಹೀಗೆ? ಇರಬೇಕು ನನಗೆ ಹೀಗೇಕೆ ಒತ್ತಡ ತರುತ್ತೀರಾ ಎನ್ನುವ ಪ್ರಶ್ನೆಗಳು ಉದ್ಭವಿಸುತ್ತವೆ. ಸಂಪ್ರದಾಯ ಕುಟುಂಬಗಳು ಸ್ತ್ರೀ ಮನಬಿಚ್ಚಿದ ಹಾಗೆ ವರ್ತಿಸಿದರೆ ಮುಂದೆ 'ಮದುವೆ'ಯ ತೊಂದರೆ ಆಗುತ್ತದೆ ಎನ್ನುವ ಕಳವಳದಲ್ಲಿ ಇರುತ್ತದೆ. "ಹೆಣ್ಣಿನ ಕಟ್ಟಿಪ್ಪಣೆಯ ಸ್ವರೂಪಗಳಲ್ಲಿ 'ವಿವಾಹ' ಎನ್ನುವ ನಿರ್ಬಂಧವು ಹೆಣ್ಣಿನ ವ್ಯಾಪ್ತಿಯ ಕೇಂದ್ರಬಿಂದು ಸ್ಥಾನದಲ್ಲಿ ಹೊರಳುತ್ತದೆ. ಅವಳ ಬದುಕು ಅವಳದಲ್ಲ, ಇನ್ನೊಂದು ಕೇಂದ್ರದ ಜೊತೆ ಪರಭ್ರಮಿಸಬೇಕಾದ ಪರಾವಲಂಬಿ ಎನ್ನುವ ಚಿಂತನೆ ಗಟ್ಟಿಗೊಂಡಿರುವಾಗ ಗಂಡಿಗೆ ಈ ರೀತಿಯ ಒತ್ತಾಸೆಗಳು ಇರುವುದಿಲ್ಲ. ತನ್ನ ಬದುಕಿನ ಕೇಂದ್ರಬಿಂದು ಅವನೇ ಆಗಿರುವುದರಿಂದ ಕಟಿಬದ್ಧತೆಗಳು ವಿವಾಹ ಮತ್ತು ಕುಟುಂಬಗಳು ಅವನ ಸೌಖ್ಯದ ಸಾಧನೆಗಳಾಗಿವೆ."[3] ಇದರಿಂದ ಸುಲಭವಾಗಿ ಕುಟುಂಬದ ಒತ್ತಾಸೆಗಳು ಅವನ ಪರವಾಗಿ ಎಲ್ಲಾ ವಿವಿಧ ವಲಯಗಳು ಇರುವುದರಿಂದ ಸ್ತ್ರೀಯ ಸ್ವತಂತ್ರತೆಯ ಕಡಿವಾಣಗಳು ಪುರುಷರು ವ್ಯಾಪ್ತಿ ಮಾಡಿಕೊಂಡಿದ್ದಾರೆ. ಹೆಣ್ಣು ಈ ವ್ಯಾಪ್ತಿಯಲ್ಲಿ ಸುಳಿಯುವ ಮಾದರಿಯ ರೂಪದಲ್ಲಿ ಕಟಿಬದ್ಧತೆಯಲ್ಲಿ ಬೆಳವಣಿಗೆ ಸಾಗುತ್ತದೆ.

ಹದಿಹರೆಯದ ಒತ್ತಡಗಳಲ್ಲಿ ಮೂಲವಾಗಿದ್ದ ಕುಟುಂಬವು ಆ ಸರಪಳಿಯಲ್ಲೆ ಮಹಿಳೆಯನ್ನು ಬೆಸೆಯಲು ಪ್ರಯತ್ನಗಳು ನಡೆಯುತ್ತವೆ. ಮದುವೆ ಕರಾರಿನಲ್ಲಿ ಮಹಿಳೆಗೆ ಎಲ್ಲಾ ರೀತಿಯ ಸಿದ್ಧತೆಯ ಮಾದರಿಯು ಕುಟುಂಬವೇ ಏರ್ಪಾಡುಮಾಡುವ ಸಂದರ್ಭವಿರುತ್ತದೆ. ಮಹಿಳೆಗೆ ಸ್ವಂತದ ಮನಸ್ಸಿದೆ ಎನ್ನುವುದು, ಲೆಕ್ಕಕ್ಕೆ ತೆಗೆದುಕೊಳ್ಳುವುದು, ಎರಡನೆಯ ಮಾತಾಗಿ ಉಳಿಯುತ್ತದೆ. ಒಟ್ಟಾರೆ ಮದುವೆಯಾದರೆ ಸಾಕು ಮುಂದಿನ ಬಲವಣೆಯ ಚಿಂತನೆಯಂತೂ ದೂರದ ಮಾತಾಗಿ ಉಳಿಯುತ್ತದೆ.

ಸಂಪ್ರದಾಯಸ್ಥ ಕುಟುಂಬದಲ್ಲಿ ಈ ಹಿನ್ನೆಲೆಯಲ್ಲಿಯೇ ಬೆಳವಣಿಗೆ ಕಂಡಾಗ ಅದಕ್ಕೆ ಹೊಸ ಮಾದಿರಯ ರಚನೆಯೂ ಕೂಡ ಸಂಪ್ರದಾಯಬದ್ಧ ಹೋಲಿಕೆಯ ರೂಪದಲ್ಲಿ ಸಿದ್ಧತೆಗಳು ನಡೆಸಿರುತ್ತದೆ. ಮಹಿಳೆ ಮಾತ್ರ ಅದಕ್ಕೆ ಸಿಲುಕಿಕೊಳ್ಳುವ ವಸ್ತುವಾಗಿ ಮಾತ್ರ ಕೆಲಸಮಾಡುವ ಕೇಂದ್ರವಾಗಿ ಬಿಡುತ್ತಾಳೆ. ಹದಿಹರೆಯದ ವಯಸ್ಸಿನಲ್ಲಿ ತೊಳಲಾಟವು ಜಂಜಾಟಗಳ ನಡುವೆ ಸುತ್ತುವರಿಯುವ ಸಮಸ್ಯೆಗಳನ್ನು ಸದಾ ಎದುರಿಸುವ ಇಲ್ಲವೆ ಶರಣಾಗುವ ಹಂತ ಮಾತ್ರ ಹುಡುಗಿಗೆ ಒದಗಿಬರುತ್ತವೆ ಎದುಸಿದರೆ ಕಟ್ಟಪ್ಪಣೆಗಳು ಶರಣಾದರೆ ಒಪ್ಪಿಗೆಗಳು ಸದಾ ಕುಟುಂಬದಿಂದ ದೊರೆಯುತ್ತಲೇ ಇರುತ್ತವೆ.

ಹೀಗಾಗಿ ಯಾವುದೇ ಬದಲಾವಣೆಯ ನೋಟಕ್ಕೆ ಹೊರಳಲು ಸಂಪ್ರದಾಯ ಕುಟುಂಬಗಳು ಇಚ್ಛೆ ಪಡುವುದಿಲ್ಲ. ಇವುಗಳಲ್ಲಿ ಶಿಕ್ಷಣ ಕಲಿತ ಮಹಿಳೆಯ ಸಮಾಜದಲ್ಲಿಯ ಬದಲಾವಣೆಯ ಮುಖಗಳು ಕಂಡು ಹೊಸ ಮಾದರಿಯ ಬದುಕಿಗೆ ಹೊರಳಿದರೆ ಕುಟುಂಬವು ಬದ್ಧತೆಗಳು ಎದುರಿಸಬೇಕಾಗುತ್ತದೆ. ಘಟ್ಟ ಮಾತ್ರ ಹೆಣ್ಣಿಗೆ ಸೀಮಿತವಾಗಿ ಬಿಡುತ್ತದೆ. ಹುಡುಗನು ಮಾತ್ರ ಈ ಜಾಲದಿಂದ ಹೊರ ಬರುವ ಹಲವು ಸ್ವತಂತ್ರ್ಯಗಳು ಕುಟುಂಬದಿಂದ ಮೊದಲೇ ದೊರತಿರುವಾಗ ಅದಕ್ಕೆ ತರ್ಕಿಸುವ ಗೋಜಿಗೆ ಹೋಗುವುದಿಲ್ಲ. ಮಹಿಳೆ ಮಾತ್ರ ತರ್ಕಿಸಬೇಕು ತನ್ನ ಅಸ್ತಿತ್ವಕ್ಕಾಗಿ ಘರ್ಷಣೆಗಳಿಗೂ ಸಹ ನಡೆಯುತ್ತವೆ.

ಸಂಸ್ಕೃತಿಯ ಸುಳಿಗಳು ಎಷ್ಟು ಆಳಕ್ಕಿಳಿಸಿರುತ್ತವೆ ಎಂದರೆ ಹೆಣ್ಣನ್ನು ಯಾವುದೇ ರೀತಿಯ ಸ್ವತಂತ್ರದ ಆಕ್ಷೇಪಗಳು ಬಯಸಬಾರದು ಎನ್ನುವ ಔದ್ಯತೆಗೆ ಸಿಲುಕಿಸುತ್ತವೆ. ಹೊರಗಿನ ಸಮಾಜವು ಸಹ ವಕ್ರದೃಷ್ಟಿಯಿಂದ ನೋಡುತ್ತದೆ. ಹೆಣ್ಣಿಗೆ ಕಟಿಬದ್ಧತೆ, ಸಂಪ್ರದಾಯಿಕತೆ ಇದ್ದ ನಡುವಳಿಕೆಗಳೂ ರೂಢಿಸಿಕೊಂಡಾಗ ಹೊಗಳುತ್ತಾರೆ. ಅಂದರೆ ಮಹಿಳೆಗೆ ಇನ್ನು ಈ ಪರಿಸ್ಥಿತಿಗೆ ಹೆಚ್ಚಾಗಿ ಅಂಟಿಕೊಳ್ಳಿ ರೂಢಿಸಿಕೊಳ್ಳಲಿ ಚೌಕಟ್ಟುಗಳಲ್ಲಿ ಇದ್ದ ಮಹಿಳೆಗೆ ಒಳ್ಳೆಯ ಸರ್ಟಿಫಿಕೇಟುಗಳು ಕೊಡುತ್ತಾರೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಬುದ್ಧಿವಂತಳಾಗಬಾರದು. ಸ್ವತಂತ್ರ್ಯತೆಯಿಂದ ವರ್ತಿಸಬಾರದು. ಒಂದು ವೇಳೆ ಸ್ವತಂತ್ರ್ಯತೆ ಬಯಸಿದರೆ ತಮ್ಮ ವ್ಯಾಪ್ತಿ ಮಿರುತ್ತಿದ್ದಾರೆ ಎನ್ನುವ ಕಳವಳ ಪುರುಷ ಚಿಂತನೆಯಿಂದ ಮನೆಯ ಹಿರಿಯ ಮಹಿಳೆಯರಿಗೂ ಅಂಟಿರುತ್ತದೆ. ಇದರಿಂದ ಅವರನ್ನು ಮಹಿಳೆ ಹೀಗೆ ಇರಬೇಕೆನ್ನುವ ರೂಢಿಗಳು ಹದಿಹರೆಯದ ವಯಸ್ಸಿನಲ್ಲಿ ಆಳುತ್ತಿರುತ್ತವೆ.

ಹರೆಯದ ವಯಸ್ಸಿನಲ್ಲಿ ಕೊಂಚ. ತನಗೆ ಆಧಾರ ಸಹಕಾರ ತೊರುತ್ತಿಲ್ಲವೆಂದಾಗ ಮನೋವೇದನೆಗೊಳಗಾಗುವ ಸಂಭವವಿರುತ್ತದೆ ಪ್ರೀತಿ ಪ್ರೇಮ, ಸಹಕಾರಗಳು ಸದಾ ಬಯಸುವ ಮನಸ್ಸಾಗಿರುತ್ತದೆ. ಹುಡುಗಿಯ ಆಸೆ ಆಕಾಂಕ್ಷೆಗೆ ಕಡಿವಾಣ ಬಿದ್ದಾಗ ಕುಟುಂಬದಲ್ಲಿ ಒಳ್ಳೆಯ ಪರಿಸರ ನಿರ್ಮಾಣವಿಲ್ಲದ ಸಂದರ್ಭದಲ್ಲಿ ಹದಿಹರೆಯದ ಹುಡುಗಿಯರು ಏಕಾಂತದಲ್ಲಿ ಇರಲು ಸದಾ ಬಯಸುತ್ತಾರೆ. ಸದಾ ಚಟುವಟಿಕೆಯ ಬಯಸುವ ಅವರ ಮನಸ್ಸು ಹೊಸದನ್ನು ಆಪೇಕ್ಷಿಸುವ. ಮುನ್ನುಗ್ಗುವ ಉತ್ಸಾಹಗಳು ಇರುತ್ತವೆ. ತಮ್ಮ ಜೀವನದಲ್ಲಿ ತಮ್ಮದೆ ಆಗಿರುವ ಮಾದರಿಯಲ್ಲಿ ಹೀಗೆ ಇರಬೇಕೆನ್ನುವ ಕೆಲವು ಕಲ್ಪನೆಗಳು ಮನೆಮಾಡಿರುತ್ತವೆ. ಉತ್ತಮ ಆಡಳಿತಾಧಿಕಾರಿಯಾಗಬೇಕು ಅಥವಾ ಕಲಾವಿದನಾಗಿರಬೇಕು ಎನ್ನುವ ಕಲ್ಪನೆಯ ಚಿತ್ರಣಕ್ಕೆ ಸ್ಫೂರ್ತಿಯ ಪ್ರೋತ್ಸಾಹ ಸಿಕ್ಕಾಗ ಖಂಡಿತವಾಗಲೂ ಆ ವಲಯದಲ್ಲಿ ಯಶಸ್ಸಿನ ಅಂಚನ್ನು ಮುಟ್ಟಲು ಯಾವುದೇ ರೀತಿಯ ಅಡ್ಡಿ ಆತಂಕಗಳು ಆಗದು. ಇಂತಹ ಸಂದರ್ಭದಲ್ಲಿ ಅಡ್ಡಿ ಆತಂಕಗಳಾದರೆ ಅವರ ವ್ಯಕ್ತಿತ್ವ ಕುಸಿದು ಬೇರೆ ಮಾರ್ಗವೆಡೆಗೆ ಸಾಗಲೂಬಹುದು.

ಹದಿಹರೆಯದ ವಯಸ್ಸಿನ ಕುಟುಂಬದಲ್ಲಿ ಲೈಂಗಿಕತ್ವ ಬಗ್ಗೆ ಸ್ವ ಚಟುವಟಿಕೆಯ ಬಗ್ಗೆ ನಡುವಳಿಕೆ, ಪ್ರತಿಕ್ರಿಯ ಸ್ತ್ರೀತನಕ್ಕೆ ಸಿದ್ಧಗೊಳ್ಳುವ ಸ್ತ್ರೀಗುಣಗಳ ಬಗ್ಗೆ ಸದಾ ಎಚ್ಚರಿಕೆಗಳು ನೀಡುತ್ತಿರುತ್ತದೆ.

ಸಮಾಜೀಕರಣದ ತರಬೇತಿಗಳು ಈ ಮಾದರಿಗೆ ಅನುಗುಣವಾಗಿ ಸಲಹೆಗಳು ದೊರೆತಾಗ ಭೇದ ಸ್ವರೂಪಗಳೂ ಗಾಢವಾಗಿ ಅವರ ಉತ್ತಮ ವ್ಯಕ್ತಿತ್ವಕ್ಕೆ ಪರಿಣಾಮ ಬೀರುವ ಸಂಭವವಿರುತ್ತದೆ.

ಹೊಸದನ್ನು ರೂಢಿಸುವ, ಹಳೆಯದನ್ನು ಮರೆಯುವ ವಯಸ್ಸು ಇದಾಗಿರುತ್ತದೆ. ಸ್ವ ಆಲೋಚನೆಗೆ ಮನಸ್ಸು ಸಿದ್ಧವಾಗಿರುತ್ತದೆ. ಅವರ ದೈಹಿಕ, ಮಾನಸಿಕ ಬೆಳವಣಿಗೆಗಳು ಜವಾಬ್ದಾರಿಯಿಂದ ಗಟ್ಟಿಯಾಗಿ ನಿಲ್ಲುವ ಸಂಭವವಿರುತ್ತದೆ. ಈ ವಯಸ್ಸಿನಲ್ಲಿ ಕುಟುಂಬದ ಉತ್ತಮ ಪ್ರತಿಕ್ರಿಯೆಗಳು ಸಿಕ್ಕಾಗ ಜೀವನ ತಿರುವೆ ಬದಲಾಗುತ್ತದೆ. ಇಲ್ಲದಿದ್ದರೆ. ಕೀಳರಿಮೆ, ಹಿಂಜರಿಕೆಗಳು, ಜಾಸ್ತಿಯಾಗಿ ಬದುಕಿನ ಭವಿಷ್ಯಕ್ಕೆ ಪರಿಣಾಮ ಬೀರುವ ಸಂಭವವಿರುತ್ತದೆ.

ಮಾನಸಿಕ ಒತ್ತಡಗಳು

ಹದಿಹರೆಯದ ವಯಸ್ಸಿನಲ್ಲಿ ಮಾನಸಿಕವಾಗಿ ಪರಿಣಾಮ ಬೀರುವ ಒತ್ತಡಗಳು ಇರುತ್ತವೆ. ಸೂಕ್ಷ್ಮವಾಗಿರುವ ಮನಸ್ಸು ಈ ವಯಸ್ಸಿನಲ್ಲಿ ಹೊಸ ಅನುಭವ ಕಂಡುಕೊಳ್ಳಲು ಪ್ರಯತ್ನಿಸಿ ಬಿಡುವ ತವಕವಿರುತ್ತದೆ. ತಮ್ಮಲ್ಲಿ ಆಗುತ್ತಿರುವ ಬದಲಾವಣೆಗಳು ತೀವ್ರ ಆಂತಕಕ್ಕೂ ಎಡೆಮಾಡಿ ಕೊಡುತ್ತದೆ. ಒಳಗೆ ಮನಸ್ಸು ಬೂದಿ ಮುಚ್ಚಿದ ಕೆಂಡದಂತೆ ಇರುತ್ತದೆ. ಯಾಕೆಂದರೆ ದೈಹಿಕವಾಗಿ ಬೆಳವಣಿಗೆ ಹೊಂದಿರುವುದರಿಂದ ಲೈಂಗಿಕ ಬಯಕೆಗಳಿಗೆ ಸಹಜವಾಗಿ ಆಸೆ ಪಡುವುದು ಇರುತ್ತದೆ. ಅದೇ ಅತಿಯಾಗಿ ಅಂಟಿಬಿಟ್ಟಾಗ ಪ್ರೀತಿ ಪ್ರೇಮದ ಬವಣೆಯಲ್ಲಿ ತನ್ನನ್ನು ತಾನು ಮರೆಯುವುದು ಸಹ ಇರುತ್ತದೆ. ಇಂತಹ ಸಂದರ್ಭದಲ್ಲಿ ಹುಡುಗನಿಗೆ ಸ್ವತಂತ್ರವಾಗಿ ವರ್ತಿಸುವ ಅವಕಾಶ ಕುಟುಂಬದಲ್ಲಿ ದೊರೆಯುವುದರಿಂದ ಪ್ರೇಮಪಾಶಕ್ಕೆ ಸಿಲುಕುವ ಸಂದರ್ಭವು ಇರುತ್ತದೆ. ಹುಡುಗಿಗೆ ಕುಟುಂಬದ ಸಮಾಜದ ಸ್ವನಿರ್ಧಾರ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಕುಟುಂಬದಲ್ಲಿ ಕಟ್ಟುಪ್ಪಾಡುಗಳು ಹಿಂಜರಿಕೆಯನ್ನುಂಟುಮಾಡಿ ಬದುಕಿನ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ತೋಚದಾಗುತ್ತದೆ. ಸಹಪಾಠಿಗಳಲ್ಲಿ ತನ್ನ ಮನಸ್ಸಿನ ವಿಚಾರ ಹೇಳುವುದರಿಂದ ಅವರು ಒಂದೇ ವಯಸ್ಸಿನವರಾಗಿರುವುದರಿಂದ ಸೂಕ್ತ ನಿರ್ಣಯವು ಅವರಿಗೆ ತೋಚದೆ, ಯಾವುದೇ ವಿಚಾರ ಹೇಳಿದರು ಒಪ್ಪಿಕೊಂಡು ಪ್ರಯತ್ನಿಸಿ ಬಿಡುವುದು ಇರುತ್ತದೆ. ಇದೇ ಪ್ರೇಮವು ಕೆಲವೊಂದು ಸಲ ಅತಿಯಾದಾಗ ಕಟ್ಟುನಿಟ್ಟಿನ ಪರಿಸರ ಮನೆಯಲ್ಲಿ ಏರ್ಪಟ್ಟಾಗ ಮಾನಸಿಕ ಒತ್ತಡಕ್ಕೊಳಗಾಗುವ ಸಂದರ್ಭವಿರುತ್ತದೆ.

ಈ ಪ್ರೇಮಪಾಶಕ್ಕೆ ಹಲವಾರು ಹದಿಹರೆಯದವರು ಸಿಲುಕೊಳ್ಳುವ ಸಂದರ್ಭಗಳು ಹೆಚ್ಚು ಗಾಢವಾಗಿ ಬಂದುಬಿಡುತ್ತದೆ. ಮಾಧ್ಯಮಗಳ ಪ್ರಭಾವದಿಂದ ಮನೆಯಲ್ಲಿಯೇ ಕುಳಿತು ಪ್ರಪಂಚವನ್ನು ವಿಶ್ಲೇಷಿಸುವ ಹಾಗೆ ಆಧುನಿಕತೆ ಮುಂದುವರಿಯುತ್ತಿದೆ. ನಿಜವಾದರೂ ಅದು ಯುವಕ ಯುವತಿಯರನ್ನು ಸೆಳೆದು ಹುಚ್ಚು ಮನಸ್ಸಿನ ಹತ್ತು ಹಲವು ಯೋಚನೆಗೆ ಸಿದ್ಧಿ ಮಾಡಿಬಿಡುತ್ತದೆ. ತಮ್ಮ ಸ್ವಾರ್ಥ ಸಾಧನಕ್ಕಾಗಿ ಸಮಾಜದ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಬಿತ್ತರಿಸಿದರೆ ಸಮಸ್ಯೆಗಳಾಗದು. ಅದು ಮನೋರಂಜನೆಯ ಜೊತೆ

ಮನಸ್ಸನ್ನು ಕದಲುವ ಮುಖಮಾಡಿ ರೂಪ ತಾಳುತ್ತಿರುವುದರಿಂದ ಯುವಕ ಯುವತಿಯರ ಮೇಲೆ ಅನ್ಯ ಮಾರ್ಗದೆಡೆಗೆ ಒಯ್ಯಲು ಸಹಜ ಸಾಧನಗಳಾಗಿ ರೂಪ ತಾಳುತ್ತಿದೆ. ಇದರಿಂದ ತಮ್ಮ ಕಲ್ಪನೆಯಲ್ಲಿಯೇ ಪ್ರಪಂಚವನ್ನು ವಿಶ್ಲೇಷಿಸುವ ವಯಸ್ಸು ಇದಾಗಿರುವುದರಿಂದ ಪ್ರೇಮ ಪಾಶಕ್ಕೆ ಸಹಜವಾಗಿ ಸಿಲುಕಿ ಬೀಳುವ ಸಂದರ್ಭವಾಗುತ್ತದೆ. ಹದಿಹರೆಯದ ಮನೋಸ್ಥಿತಿಯು ಇಂತಹ ಸಂದರ್ಭದಲ್ಲಿ ಸಮಚಿತ್‌ದಿಂದ ಇರುವುದಿಲ್ಲ. ಹಾಳು ಹರಟೆ, ವೃತ್ತ ಸಮಯ ವ್ಯರ್ಥ ಮಾಡುವುದರಲ್ಲೇ ಕಾಲ ಕಳೆಯುವುದು ಸಹಜವಾಗುತ್ತದೆ. ಇದರಿಂದ ಭವಿಷ್ಯದ ಬಗ್ಗೆ ಚಿಂತನೆಗಳಿಂದ ದೂರವಾಗಿ ಬಿಡುತ್ತಾಳೆ. ಇದಕ್ಕೆ ಮನೆಯ ಮಾರ್ಗದರ್ಶನವಿಲ್ಲದೆ ಸಂದರ್ಭದಲ್ಲಿ ಅನ್ಯ ಮಾರ್ಗಕ್ಕೆ ಜೀವನಕ್ಕೆ ಘಾಸಿಯಾಗುವ ಸಂದರ್ಭವಿರುತ್ತದೆ. ಈ ಹಿನ್ನೆಲೆಗೆ ಸಂಬಂಧಿಸಿದ ಪೋಲಿ ಹುಡುಗರು ಹುಡುಗಿಯರನ್ನು ಅಪಹಾಸ್ಯಕ್ಕೆ ಈಡುಮಾಡುವ ಸೂಚಿಯನ್ನು ಡಾ. ಸಿ.ಆರ್. ಚಂದ್ರಶೇಖರ್ ಅವರ ಬರವಣಿಗೆಯ ಹದಿಹರೆಯದ ಒಂದು ಘಟನೆಯನ್ನು ತಿಳಿಯೋಣ.

'ನೋಡ್ರಿ ಎಂಥಾ ಕಾಲ ಬಂತು, ಮುಖದ ಮೇಲೆ ಇನ್ನು ಸರಿಯಾಗಿ ಮೀಸೆ ಹುಟ್ಟಿಲ್ಲ, ಇನ್ನೂ ಹಾಲು ಕುಡಿಯೋ ವಯಸ್ಸು ಅಂದ್ರೆ ಉತ್ಪ್ರೇಕ್ಷೆ ಅಲ್ಲ. ಹೋಗೋ ಬರೋ ಹೆಣ್ಣು ಮಕ್ಕಳನ್ನು ಚುಡಾಯಿಸ್ತಾ ಇದ್ದಾರಲ್ಲ, ಹರೆಯದ ಹುಡುಗಿಯರನ್ನು ಕಂಡು ಸೀಟಿ ಹಾಕ್ತಾರೆ. ಅಶ್ಲೀಲವಾಗಿ ಮಾತಾಡ್ತಾರೆ, ಇವರನ್ನು ಹಿಡಿದು ಚರ್ಮ ಸುಲಿಬೇಕು. ಅಪ್ಪ ಅಮ್ಮ ಕಷ್ಟಪಟ್ಟು ತಾವು ದುಡಿದು ಇವರಿಗೆ ಹೊಟ್ಟೆ ತುಂಬೋ ಹಾಗೆ ಊಟ ಹಾಕಿಬಿಡ್ತಾರೆ. ಖರ್ಚಿಗೆ ಕಾಸುಕೊಟ್ಟು ಬಿಡ್ತಾರೆ. ಇವರು ದೇವರಿಗೆ ಬಿಟ್ಟ ಬಸವಗಳ ಹಾಗೆ ಬೆಳೆದಿದ್ದಾರೆ. ಇದರಿಂದಾಗಿ ನಮ್ಮ ಹೆಣ್ಣು ಮಕ್ಕಳು ಧೈರ್ಯವಾಗಿ ಬೀದಿಯಲ್ಲಿ ಓಡಾಡೋ ಹಾಗಿಲ್ಲವಲ್ಲ. ಪೋಲಿಸಿನವರಿಗೆ ಹೇಳಿ ಬಿಸಿ ಮುಟ್ಟಿಸಬೇಕು. ನಮ್ಮ ಕಾಲದಲ್ಲಿ ಹೀಗಿರಲಿಲ್ಲ ಬಿಡಿ ಕಾಲ ಕೆಟ್ಟು ಹೋಯ್ತು. ಈಗಿನ ಹುಡುಗರು ಅಪ ಪೋಲಿಗಳು.''[೪]

ಈ ವಿಷಯದ ಘಟನೆಗಳ ಹೊರಗಡೆ ಹೋದರೆ ಸಲೀಸಾಗಿ ಕಾಣುವುದನ್ನು ನೋಡುತ್ತವೆ. ಅವರಿಗೆ ದಕ್ಕಿರತಕ್ಕಂತಹ ಮತ್ತು ಉತ್ತಮ ಪರಿಸರದ ವಾತಾವರಣವು ಸಿಗದೆ ಇರುವ ಸಂದರ್ಭದಲ್ಲಿ ಪೋಲಿಗಳು ಹುಡುಗಿಯರಗೆ ಅಶ್ಲೀಲ ನುಡಿಗಳಿಂದ ರೇಗಿಸುವುದು ನಾವು ಕಾಣುತ್ತೇವೆ. ಹುಡುಗಿಯರು ಇವುಗಳನ್ನೆಲ್ಲ ಸಹಿಸಕೊಳ್ಳಬೇಕು. ಅವರಿಗೆ ಸಮಾಜದಲ್ಲಿ ನಿರ್ಮಾಣವಾಗಿರುವ ಕಲ್ಮಶ ವಾತಾವರಣವು ಮನಸ್ಸಿನಿಂದ ಏನು ಹೇಳಿದ ಹಾಗೆ ಆಗಿಬಿಡುತ್ತದೆ. ಕೆಲವು ಸಹಿಸದ ಹುಡುಗಿಯರಿಗೆ ಒತ್ತಡವೂ ಆಗುತ್ತದೆ. ಪುರುಷರಿಗೆ ನಿರ್ಮಾಣಮಾಡಿರುವ ಸ್ವತಂತ್ರ್ಯತೆಯಿಂದ ವರ್ತನೆಗಳು ವ್ಯತಿರಿಕ್ತವಾಗಿರುವುದು ಗೋಚರಿಸುತ್ತದೆ. ಹುಡುಗಿಯರು ಮಾತ್ರ ಅಂಕೆಯಲ್ಲಿಬೇಕು. ಕುಟುಂಬಕ್ಕನುಗುಣವಾಗಿ ವರ್ತಿಸಬೇಕೆನ್ನುವ ಸಮಾಜೀಕರಣದ ಭಿನ್ನ ತರಬೇತಿಗಳು ಮನಸ್ಸನ್ನು ಘಾಟಿಗೊಳಿಸುವ ಸಂದರ್ಭವಿರುತ್ತದೆ.

ಈ ಹದಿಹರೆಯದ ವಯಸ್ಸಿನ ಕೆಲವು ಸಂದರ್ಭಗಳ ಮನಸ್ಸಿನ ಹತೋಟಿ ಇಲ್ಲವಾಗಿಸುವ ಸಮಯಗಳು ಬರುತ್ತವೆ. ಕುಟುಂಬದವಾಗಿ ಒತ್ತಡಗಳು ಹುಡುಗಿಗೆ ನೀಡಿದಾಗ ಆತ್ಮಹತ್ಯೆಯ ಖಿನ್ನತೆಯ ಮಾನಸಿಕ

ರೋಗಗಳಿಗೆ ತುತ್ತಾಗುವ ಸಂದರ್ಭಗಳು ಇರುತ್ತವೆ. ಕುಟುಂಬದಲ್ಲಿ ಗಂಡುಹೆಣ್ಣಿನ ಬಗ್ಗೆ ವಿರುಪೇರಿನ ಘಟನೆಗಳು ಹುಡುಗಿಯ ಮನಸ್ಸಿನಲ್ಲಿ ಪ್ರೀತಿ ಪ್ರೇಮ ಸಹಕಾರದ ಕುಟುಂಬದಿಂದ ದೊರೆಯದೇ ಇದ್ದ ಸಂದರ್ಭದಲ್ಲಿದ್ದಾಗ ಆಗುತ್ತದೆ. ಕಟ್ಟುಪ್ಪಣೆಯಲ್ಲಿಯೇ ಬೆಳೆದುಬಂದ ಹುಡುಗಿ ಕಟ್ಟುಪ್ಪಣೆಯಲ್ಲಿಯೇ ಸಾಗಬೇಕಾದಾಗ ವಿಧ್ಯಾಭ್ಯಾಸದ ಪರೀಕ್ಷೆಯ ಸಂದರ್ಭದಲ್ಲಿ ಉತ್ತಮ ಫಲಿತಾಂಶ ಬರದೇ ಇದ್ದಾಗ ಕುಟುಂಬದ ತೆಗಳಿಕೆಗಳಿಂದ ಉತ್ತಮ ಫಲಿತಾಂಶ ಬರದೇ ಇದ್ದಾಗ ಕುಟುಂಬದ ತೆಗಳಿಕೆಗಳಿಂದ ಮನೆಯ ಅಸ್ತವ್ಯಸ್ತ ವಾತಾವರಣವು ಆತ್ಮಹತ್ಯೆಯ ಪ್ರವೃತ್ತಿಗಳು ಆಗುತ್ತವೆ. 'ನೀನು ಓದಿ ಏನು ಸಾಧಿಸಬೇಕಾಗಿದೆ.' ಸಾಕು ನಿನ್ನ ವಿಧ್ಯಾಭ್ಯಾಸ ಎನ್ನುವ ನುಡಿಗಳು ಗಾಯದ ಮೇಲೆ ಬರೆ ಎಳೆದ ಹಾಗೆ ನನ್ನನ್ನು ಪ್ರೀತಿಯಿಂದ ಕಾಣುವವರು ಇಲ್ಲವೆಂದು ಪ್ರಪಂಚವೇ ಶೂನ್ಯವೆನ್ನುವ ದೃಷ್ಟಿ ಬಂದು ಬೀಡುತ್ತದೆ. ಯಾಕೆಂದರೆ ಕುಟುಂಬವೇ ಸರ್ವಸ್ವ ಆಗಿರುವ ಸಂದರ್ಭದಲ್ಲಿ ಕುಟುಂಬದ ಬಗ್ಗೆ ನಿರಾಕರಣೆ ಭಾವನೆಯಿಂದ ಮಾನಸಿಕ ಒತ್ತಡ ಅತಿಯಾಗುವ ಸಂಭವವಿರುತ್ತದೆ. ಹುಡುಗನಿಗೂ ತೆಗಳಿಕೆಗಳಿರುತ್ತವೆ. ಹುಡುಗಿಯನ್ನು ಹೋಲಿಸಿದಾಗ ಅದು ಕಡಿಮೆಯೇ ಎನ್ನಬಹುದು. ಇದು ಅವರ ವ್ಯಕ್ತಿತ್ವವೇ ಕುಸಿದ ಹಂತವಾಗಿರುತ್ತದೆ. ಉತ್ತಮ ಮಾರ್ಗದರ್ಶನ ಪ್ರೀತಿ ಪ್ರೇಮದ ಸಲಹೆಗಳು ಕುಟುಂಬದಿಂದ ಮುಂದಿನ ಸಿದ್ಧತೆಗಳಿಗೆ ಎಡೆಮಾಡಿ ಕೊಟ್ಟಾಗ ಸುಗಮವಾಗಬಹುದು. ಆದರೆ ಎಷ್ಟು ಕುಟುಂಬಗಳು ಹೀಗೆ ಇರುತ್ತವೆ. ಹುಡುಗಿಯ ಬಗ್ಗೆ ನಿರಾಕರಣೆ ಇರುವ ಸಂದರ್ಭದಲ್ಲಿ ತೆಗಳಿಕೆಗಳ ಹೆಚ್ಚಿನ ಸ್ಥಾನಗಳು ಸಿಗುತ್ತವೆ.

ಕುಟುಂಬದ ಹದಿಹರೆಯದ ಹುಡುಗಿಯ ನಿರಾಕರಣೆ ಇದ್ದರೆ, ಅವರ ಸ್ವತಃ ತಮ್ಮ ದೇಹದ ಮೇಲೆ ನಿರಾಕರಣೆಯು ಸಹ ಇರುತ್ತದೆ. ತಮ್ಮ ದೇಹ ಪರರಿಗೆ ಹೇಗೆ ಕಾಣಿಸುತ್ತದೆ ಎನ್ನುವ ಸ್ವಕಲ್ಪನೆಗಳು ಸಹ ಇರುತ್ತದೆ. ಇಂತಹ ಸಂದರ್ಭದಲ್ಲಿ ದೇಹದ ಕಪ್ಪು ಬಣ್ಣವಿದ್ದರೆ, ಅಂಗವಿಕಲವಿದ್ದರೆ, ತೆಳ್ಳಗಿದ್ದರೆ, ಅಥವಾ ಬಹಳ ದಪ್ಪಗಿದ್ದರೆ ಏನೋ ಒಂದೊಂದು ಕೊರತೆಗಳು ಸದಾ ಅವರನ್ನು ಕಾಡುತ್ತಿರುತ್ತವೆ. ನಾನು ಸಮಾಜಕ್ಕೆ ಹೇಗೆ ಕಾಣುತ್ತೇನೆ. ಎಲ್ಲರ ಒಳತಿನಲ್ಲಿ ನಾನಿಲ್ಲವೆ ಎನ್ನುವ ಕೊರಗು ಸಂಕೋಚಕ್ಕೆ ಎಡೆಮಾಡಿ ಕೊಡುತ್ತದೆ. ಹುಡುಗಿ ಕಪ್ಪುಬಣ್ಣದ ಅಥವಾ ಅಂಗವಿಕಲವಿದ್ದರೆ, ಇಲ್ಲದ ಮನೋಸ್ಥಿತಿ ಒದಗಿ ಬರುತ್ತವೆ. ಈ ಹದಿಹರೆಯದ ವಯಸ್ಸಿನಲ್ಲಿ ಈ ಹುಡುಗಿಯನ್ನು ಇಷ್ಟ ಪಡುವವರು ಯಾರು ಎನ್ನುವ ಚಿಂತನೆ ಹುಡುಗಿಯರಲ್ಲಿ ಮತ್ತು ಕುಟುಂಬದವರ ಮನಸ್ಸಿನಲ್ಲಿ ಒಳಮೂಡುತ್ತದೆ. ಪುರುಷ ಪ್ರಧಾನತೆಯಲ್ಲಿಯೇ ಮುಂದುವರಿಯುವುದರಿಂದ ಬಜಾರದ ದನಗಳ ಆಯ್ಕೆ ಮಾಡುವ ಹಾಗೆ ಹುಡುಗಿಯರನ್ನು ಮದುವೆಯಾಗಿ ಆಯ್ಕೆ ಮಾಡಿಕೊಳ್ಳುವುದು ಪುರುಷರ ಹಿಡಿತದಲ್ಲೆ ಆಳವಾಗಿರುವಾಗ ಹುಡಿಗಿಯ ಮನೋಸ್ಥಿತಿಗಳು ಅತಂತ್ರದಲ್ಲಿ ಸಿಲುಕಿಸುವ ಪ್ರವೃತ್ತಿಗಳಾಗಿ ಮಾರ್ಪಾಡಾಗುವ ಸಂಭವವಿರುತ್ತದೆ. ಸ್ವ ಇಚ್ಛೆಯಿಂದ ಬದುಕುವ ಸಂದರ್ಭವಿಲ್ಲದೆ, ಇದ್ದಾಗ ಕುಟುಂಬದ ರೂಢಿಗಳಿಗೆ ಸಿಲುಕಿಸಿಕೊಳ್ಳಲೇ ಬೇಕಾಗುತ್ತದೆ. ಒಂದು ವೇಳೆ ತನ್ನ ಇಚ್ಛೆಯ ಮೇರೆಗೆ ಹುಡುಗಿ ಆಯ್ಕೆಮಾಡಿ ಕುಟುಂಬದವರನ್ನು ಹೇಳುವ ಹಾಗಿರುವುದಿಲ್ಲ. ಆ ಪರಿಸರಗಳೇ

ಆ ರೀತಿ ಮಾರ್ಪಟ್ಟಿರುವಾಗ ಇದ್ದ ಪರಿಸ್ಥಿತಿಗೆ ಹೊಲಿಕೊಳ್ಳುವ ಏನೋ ಸ್ಥಿತಿ ಸಿದ್ದವಾಗಿರಬೇಕಾಗುತ್ತದೆ. ಹುಡುಗರಿಗೆ ಈ ರೀತಿಯ ಒತ್ತಡಗಳು ಇರುವುದಿಲ್ಲ. ಅವನಿಗೆ ಏನು ಕಡಿಮೆ ಹತ್ತಾರು ಹುಡುಗಿಯರು ಬಂದು ನಿಲ್ಲುತ್ತಾರೆ ಎನ್ನುವ ಮಾತು ಕುಟುಂಬದಿಂದಲೇ ಬರುತ್ತಿರುತ್ತದೆ. ಈ ವಿಚಾರ ಸ್ತ್ರೀಯನ್ನು ಅಸಮಾನತೆಗೆ ನೋಡುವ ಮುಖವಾಗಿರುತ್ತದೆ. ಇದು ಒಂದು ಬಗೆಯಾದರೆ ಹದಿ ವಯಸ್ಸಿನಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡುವ ಘಟ್ಟಗಳು ಎಷ್ಟೋ ಹುಡುಗಿಯರಿಗೆ ಬಂದೊದಗುತ್ತದೆ. ದಾಂಪತ್ಯ ಜೀವನದಲ್ಲಿ ಮದುವೆಯ ವರನ ವಯಸ್ಸು ಸಹಜ ಹುಡುಗಿಕ್ಕಿಂತ ಜಾಸ್ತಿ ಇರುವುದು ಸಹ ಕಾಣುತ್ತದೆ. ಹುಡುಗಿಯರು ೧೬ ವಯಸ್ಸಿದ್ದರೆ, ಹುಡಗನದು ೨೭ರ ಜೋಡಿಗಳು ಕಾಣುತ್ತೇವೆ. ಇದು ಸಮಾಜದ ಒಂದು ಮಾದರಿ ಅಷ್ಟೇ. ಇಂತಹ ಸಂದರ್ಭದಲ್ಲಿ ಹುಡುಗಿ ಆಡಿ ಬೆಳೆದು ಸ್ವಚ್ಛಂದವಾಗಿ ವಿಹರಿಸುವ ಸಮಯದಲ್ಲಿ ಮದುವೆ ಬಂಧನದಿಂದ ತಂದೆತಾಯಿಯರ ಒತ್ತಡದಿಂದ ಮದುವೆಗಳು ನಡೆದು ಹೋಗುತ್ತವೆ ಇಲ್ಲ ವರನು ತನ್ನ ಆಸೆ ಆಕಾಂಕ್ಷೆಗಳ ಆ ಹುಡುಗಿಯರಲ್ಲಿ ಹೇಳಲು ಇಷ್ಟ ಪಡುತ್ತಾನೆಯೆ ಹೊರತು ಹುಡುಗಿಯ ಬಯಕೆಗಳು ಇದ್ದುದನ್ನು ವಿಚಾರಿಸುವುದಿಲ್ಲ. ಹುಡುಗಿಯ ಲೈಂಗಿಕತೆಯಲ್ಲಿ ಪರಿಪೂರ್ಣವಾಗಿ ದೇಹವು ಸಿದ್ಧವಾಗಿಲ್ಲದೆ ಹಂತದಲ್ಲಿ ಇಲ್ಲದ ಮನಸ್ಸಿನ ಕುಟುಂಬದ ಒತ್ತಡದ ಒಳಗೆ ಮಕ್ಕಳನ್ನು ಹೇರಬೇಕಾಗಿರುತ್ತೆ. ಇಂತಹ ಸಂದರ್ಭದಲ್ಲಿ ತನ್ನ ಲೈಂಗಿಕ ಬಯಕೆಯ ವಯಸ್ಸು ಬಂದಿರುವಷ್ಟಿಗೆ, ವರನ ನಿರಾಶದಾಯಕವಾಗಿರುವ ಘಟನೆಗಳು ಇರುತ್ತವೆ. ಇಂತಹ ಸಂದರ್ಭದಲ್ಲಿ ಮದುವೆಯಾದ ಹೆಣ್ಣು ಯಾವ ಬೇಡಿಕೆಯನ್ನಿಟ್ಟರು ಅದು ಉದಾಸೀನತೆಯಿಂದಲೇ ಸಂಸಾರದಲ್ಲಿ ಜಿಗುಪ್ಸೆ ಮುಂದುವರಿಯುತ್ತದೆ. ಇದರಿಂದ ಖಿನ್ನತೆ ಮಾನಸಿಕ ರೋಗದಲ್ಲಿ ತುತ್ತಾಗಿ, ಏಕಾಂತದಲ್ಲಿ ಜೀವನದ ಜಿಗುಪ್ಸೆ, ಬೇಸರಗಳು ಮನಸ್ಸು ಅಸಮಧಾನದ ಹತೋಟಿಗೆ ತಂದೊಡ್ಡುತ್ತದೆ.

ಇಂತಹ ಘಟನೆಗಳು ಸರ್ವ ಸಾಮಾನ್ಯವಾಗಿ ಸಮಾಜದಲ್ಲಿ ನಾವು ಕಾಣುತ್ತಿರುತ್ತೇವೆ. ಕುಟುಂಬದ ಒತ್ತಡ, ಗಂಡನ ಏಕಾಭಿಪ್ರಾಯ, ಸಂಸಾರದಲ್ಲಿ ಜಿಗುಪ್ಸೆ, ಇವುಗಳೆಲ್ಲ ಪುರುಷ ಪ್ರಧಾನತೆಯ ಅಂಕೆಯಲ್ಲೇ ತಾರತಮ್ಯ ಬೆಳೆದಿರುವುದರಿಂದ ಸ್ತ್ರೀಯ ಅವರ ಶೋಷಣೆಯ ವಸ್ತುವಾಗಿ ನಿಲ್ಲುತ್ತಾಳೆ. ಇದರಿಂದ ಸಹಜವಾಗಿ ಮಾನಸಿಕ ಅಸಮತೋಲನವಾಗುವ ಸಂಭವವಿರುತ್ತದೆ.

ಲಿಂಗ ತಾರತಮ್ಯದಿಂದ ಹದಿಹರೆಯದ ವಯಸ್ಸಿನ ಮೇಲೆ ಆಗುವ ಪರಿಣಾಮಗಳು

ಹದಿಹರೆಯವು ಮನುಷ್ಯರ ಜೀವನದ ಬಹುಪ್ರಮುಖ ಘಟ್ಟವಾಗಿದ್ದು ದೈಹಿಕ, ಮಾನಸಿಕ ಪ್ರಕ್ರಿಯೆಗಳಿಂದ ತೀವ್ರ ಬದಲಾವಣೆಗಳು ಆಗುತ್ತವೆ ಎಂದು ತಿಳಿದುಕೊಂಡಿದ್ದವೆ. ಸಾಮಾಜೀಕರಣದ ಪ್ರಕ್ರಿಯೆಯು ಲಿಂಗ ತಾರತಮ್ಯದಲ್ಲಿ ಸಾಗಬೇಕಾದ ಸ್ತ್ರೀಯರು ತೀವ್ರ ಆತಂಕಗಳು ಮನಸ್ಸಿನಲ್ಲಿ ಮನೆ ಮಾಡುತ್ತದೆ. ಸಮಾಜದಲ್ಲಿ ಹೆಣ್ಣು ಮಕ್ಕಳ ಶೋಷಣೆ ಕುಟುಂಬದ ತರಬೇತಿಗಳಿಂದಲೇ ದೊರೆತಾಗ ಈ ವಯಸ್ಸು ಬಹುಪ್ರಧಾನವಾಗಿ

ಜೀವನಪೂರ್ತಿ ನಡೆಯುವ ಚಟುವಟಿಕೆಗಳಾಗಿ ಮಾರ್ಪಾಡಾಗುತ್ತದೆ. ಕುಟುಂಬದಲ್ಲಿಯ ಭಿನ್ನ ಪಾತ್ರಗಳು ಬೆಳವಣಿಗೆಯಲ್ಲಿಯೇ ಸಾಗಬೇಕಾದಾಗ ಅಚ್ಚೊತ್ತಿಬಿಡುವ ವಯಸ್ಸು ಇದಾಗಿರುತ್ತದೆ. ಮನೋಸ್ಥಿತಿಗೆ ಪೂರ್ಣವಾಗಿ ಆಸರೆ ಸಿಗದ ಸಂದರ್ಭದಲ್ಲಿ ಹಠ, ನಿರಾಸೆಗಳು, ಅನ್ಯ ಲಿಂಗ ದ್ವೇಷಗಳು ಒಡಮೂಡುತ್ತವೆ. ಅವರು ನಿಜವಾದ ದಾರಿಯೆಡೆಗೆ ಸಾಗಲು ಮನಸ್ಸು ಸ್ಥಿರವಾಗಿದ್ದರು ಕುಟುಂಬದ ಒತ್ತಡಗಳು ಮಾನಸಿಕ ಒತ್ತಡಕ್ಕೆ ಎಡ ಮಾಡಿಕೊಡುತ್ತದೆ. ಗಂಡು ಹೆಣ್ಣಿನ ಭೇದಗಳು ಚಿಕ್ಕವರಿದ್ದಾಗ ಅನುಸರಿಸುವವರು. ಈ ವಯಸ್ಸಿನ ಹಂತದಲ್ಲಿ ಯಾಕೆ ಎನ್ನುವ ಪ್ರಶ್ನೆಗಳು ಬಂದೊದಗುತ್ತವೆ. ಯಾಕೆಂದರೆ ನಿಜವಾದ ಮೌಲ್ಯದ ಕಡೆಗೆ ಅವರ ಮನಸ್ಸು ವಾಲುತ್ತಿರುತ್ತದೆ. ಇದರಿಂದ ಸಮಾಜ ದ್ವೇಷಿಯಾಗಿಯೂ ಪಾತ್ರ ಸಿದ್ಧಗೊಳ್ಳುತ್ತದೆ. ಪ್ರೀತಿ ಪ್ರೇಮ ಸಹಕಾರದಲ್ಲಿ ಏರು ಪೇರಾದಾಗ ಈ ಮನಸ್ಸುಗಳು ಏಕಾಂಗಿಯಾಗಿ ಇರಲು ಬಯಸುತ್ತದೆ. ಸದಾ ಬದಲಾವಣೆಯನ್ನೆ ಬಯಸುವ ಮನಸ್ಸು ಸ್ವ ಆಸೆಯ ಬಯಕೆಗೆ ಯಾವುದೇ ರೀತಿಯ ಪ್ರೋತ್ಸಾಹಗಳು ಸಿಗುವುದಿಲ್ಲ. ಇದರಿಂದ ಹಗಲುಗನಸು ಕಾಣುವುದು ಸಹ ಇರುತ್ತದೆ. ಕುಟುಂಬದಲ್ಲಿ ಹುಡುಗರು ಸ್ವತಂತ್ರ್ಯತೆ ಹುಡುಗಿಯನ್ನು ಕಟಿಬದ್ಧತೆಗೆ ಸಿಲುಕಿಸಿದಾಗ ಶ್ರದ್ಧಾಪೂರ್ವಕವಾಗಿ ಕೆಲಸ ಮಾಡಲು ಮನಸ್ಸು ಇರುವುದಿಲ್ಲ. ಜಿಗುಪ್ಸೆ, ಬೇಸರದಲ್ಲಿಯ ದಿನಗಳು ಮುಂದೆ ಹಾಕುತ್ತಾ ಬರುವುದರಿಂದ ವ್ಯರ್ಥ ಸಮಯವು ಹಾಳಾಗಿ ಹೋಗುವ ಸಂದರ್ಭಗಳು ಜಾಸ್ತಿಯಾಗಿ ಬಿಡುತ್ತದೆ.

ಇದರಿಂದ ಅವರ ವ್ಯಕ್ತಿತ್ವ ವಿಕಸನಕ್ಕೆ ತೊಡಕಾಗುವ ಸಂಭವವಿರುತ್ತದೆ. ಪರೀಕ್ಷೆಯ ವಿದ್ಯಾಭ್ಯಾಸದ ಸಂದರ್ಭದಲ್ಲಿ ಸೋಲು. ದುಃಖಗಳು ಬಂದೊದಗಿದಾಗ ಉತ್ತಮ ಪ್ರತಿಕ್ರಿಯೆ ಸೂಕ್ತ ಮಾರ್ಗದರ್ಶನವಿಲ್ಲದೆ, ಇರುವ ಸಂದರ್ಭದಲ್ಲಿ, ತಾರತಮ್ಯಗಳು ಮೊದಲೇ ಒಳಮೂಡಿರುವಾಗ ಕುಟುಂಬದ ತೆಗಳಿಕೆಗಳಿಂದ 'ಆತ್ಮಹತ್ಯೆ'ಯು ಆಗುತ್ತದೆ. ಯಾಕೆಂದರೆ ವಿಸ್ತಾರ ಜೀವನದ ಅನುಭವವಿರುವುದಿಲ್ಲ. ತೆಗಳಿಕೆಗಳು ಮನೋಸ್ಥಿತಿಯನ್ನು ಅದುಮಿಡುವ ಸಂದರ್ಭಗಳು ಬಂದಾಗ ದಿಕ್ಕು ತೋಚದೇ ಆತ್ಮಹತ್ಯೆಯೇ ಕೊನೆಯ ಅಸ್ತ್ರವೆಂದು ಅವರಿಗೆ ಕಾಣುತ್ತದೆ. ಅಸ್ತವ್ಯಸ್ಥ ಕುಟುಂಬದ, ಆತ್ಮವಿಶ್ವಾಸದ ಕೊರತೆಯಿಂದ ಈ ಘಟನೆಗಳ ಜೀವನದ ತಿರುವೆ ಬದಲಾಗುತ್ತದೆ. ಕುಟುಂಬದಲ್ಲಿ ಅಸಮಾನತೆಯು ಮಹಿಳೆಯರ ಜೀವನವೇ ಹಿಡಿತದಲ್ಲಿರಿಸುವ ಅಸ್ತ್ರವಾಗಿ ಪರಿಣಮಿಸುತ್ತದೆ. ಜೀವನಪೂರ್ತಿಯಾಗಿ ಆಸರೆಯನ್ನು ಬಯಸಿದಂತೆ ರೂಢಿಯಾಗಿ ಬಿಡುತ್ತದೆ. ಸ್ವತಂತ್ರ್ಯ ಸ್ವಾವಲಂಬಿ ಜೀವನಕ್ಕೆ ಭದ್ರ ಆಸರೆ. ಈ ವಯಸ್ಸಿನಲ್ಲಿ ದೊರೆತರೆ ಜೀವನದಲ್ಲಿ ಬದಲಾವಣೆಯನ್ನು ಕಂಡುಕೊಳ್ಳಬಹುದು. ಯಾಕೆಂದರೆ ಉತ್ಸಾಹದ ವಯೋಮಾನ ಇದಾಗಿರುತ್ತದೆ. ಆದರೆ ತಾರತಮ್ಯದ ನೋಟಗಳೇ ಬಹುಪ್ರಧಾನವಾಗಿರುವಾಗ ವ್ಯಕ್ತಿತ್ವವು ನಶಿಸಿ ಜೀವನದಲ್ಲಿ ಬೇಸರ ಕಂಡುಕೊಳ್ಳುತ್ತದೆ. ಸಮಾಜೀಕರಣದ ತಾರತಮ್ಯದ ಭೇದಗಳು ಮಹಿಳೆಯ ಎಲ್ಲಾ ಸ್ವರೂಪದ ಆಧೀನಳಾಗುವ ಪರಿಣಾಗಳೇ ಇದಾಗಿರುತ್ತದೆ. ಒಂದು ವೇಳೆ ಕುಟುಂಬದಿಂದ ಉತ್ತಮ ಪ್ರತಿಕ್ರಿಯೆ ಸದಾ ಬೆಂಬಲದಿಂದ ಹುಡಿಗಿಯರನ್ನು ಪ್ರೇರೇಪಿಸಿದಾಗ ಜಗತ್ತನ್ನೇ ಚಿಕ್ಕದಾಗಿ ಕಾಣುವ ಕುತೂಹಲ ಇವರಲ್ಲಿ ಒಳಮೂಡಿಸುತ್ತದೆ. ಪ್ರತಿ ಯಶಸ್ಸಿಗೂ

ಮಾದರಿಯಾಗುತ್ತದೆ. ಇದು ಅಗತ್ಯ ಮತ್ತು ಅವಶ್ಯಕವು ಆಗಿದೆ. ಹದಿಹರೆಯರನ್ನು ಸಮಾನತೆಯ ನಿರೀಕ್ಷೆ ಜತನ ಮಾಡಬೇಕಾದದ್ದು ಪ್ರತಿ ತಂದೆತಾಯಿ, ಸಮಾಜ, ಶಿಕ್ಷಣದ ಜವಾಬ್ದಾರಿಯಾಗಿರುತ್ತದೆ. ಲಿಂಗ ತಾರಮತ್ಯದ ಗಾಢ ಸ್ವರೂಪಗಳನ್ನು ತಿಳುವಳಿಕೆಯ ಮೂಲಕ ಬದಲಾವಣೆ ತರಲು ಪ್ರಯತ್ನಿಸಬೇಕು. ಯೋಗ್ಯ ರೀತಿಯ ಸಮಾಜೀಕ ಚಿಂತನೆಯ ಬಗ್ಗೆ ಮಾಧ್ಯಮಗಳು, ಶ್ರಮಿಸಿದಾಗ ಬದಲಾವಣೆಯನ್ನು ಕಂಡುಕೊಳ್ಳಬಹುದು. ಈ ಹದರಿಹರೆಯದ ವಯಸ್ಸಿನಲ್ಲಿ ಒಂದು ಕಡೆ ಬಾಲ್ಯವು ಇಲ್ಲದೆ ಪೂರ್ಣ ಯೌವ್ವನವು ಇಲ್ಲದೆ ಸದಾ ತೊಳಲಾಟದ ವಯಸ್ಸಾಗಿರುವುದರಿಂದ ಸೂಕ್ಷ್ಮತೆಯ ಗಾಢವಾಗಿರುತ್ತದೆ. ಸ್ವಾವಲಂಬಿ ಜೀವನಕ್ಕೆ ಪ್ರೋತ್ಸಾಹಿಸಬೇಕೆ ಹೊರತು ಮದುವೆ ಕಟಿಬದ್ಧತೆಗಲ್ಲ. ಇದರಿಂದ ಶಿಕ್ಷಣವು ಉತ್ತಮವಾಗಿ ದೊರೆತಾಗ ಹಕ್ಕು ಕರ್ತವ್ಯಗಳ ಬಗ್ಗೆ ತಿಳುವಳಿಕೆ ಮೂಡಿ ಲೋಕಜ್ಞಾನದ ಪರಿಚಯವಾಗುತ್ತದೆ. ಅದು ಹುಡುಗಿಯರಿಗೆ ಹೋಲಿಸಿದಾಗ ಕಡಿಮೆಯೆ ಇದೆ. ಇದಕ್ಕೆ ಮೂಲ ತಾರತಮ್ಯವೆ ಎಂದರೂ ತಪ್ಪಾಗದು. ಈ ವಯಸ್ಸಿನಲ್ಲಿ ಅನುಭವವು ಗಾಢ ಪ್ರಮಾಣದಾಗಿರುವುದಿಲ್ಲ. ದೇಹ ಬೆಳೆದಿರುತ್ತದೆ, ಮನಸ್ಸು ಬೆಳೆಯುತ್ತಿರುತ್ತದೆ. ಇದರಿಂದ ದೇಹಕ್ಕೂ ಮನಸ್ಸಿಗೂ ಎರಡಕ್ಕೂ ಪ್ರೋತ್ಸಾಹಿಸಿ ಒಳ್ಳೆಯ ವಿಚಾರಗಳೇ ಮೂಡಿಸಿದ ಪ್ರತಿಕ್ರಿಯೆಗಳು ಹೊರ ಬೀಳಲು ದೂರದ ಮಾತಾಗಿ ಉಳಿಯದಾಗಿರುತ್ತದೆ. ಸಂಕೋಚ ಮೃದು ಮನಸ್ಸನ್ನು ಸದೃಢ ಸ್ಥಿರತೆಗೆ ಮಾದರಿಯಾಗಿಸಬೇಕು. ಇಲ್ಲವಾದರೆ ಜೀವನವೇ ಶೂನ್ಯವಾಗಿ ಅವರ ಮನಸ್ಸಿನಲ್ಲಿ ಸಂಕೋಚ ಹುಟ್ಟಿ ವ್ಯಕ್ತಿತ್ವಕ್ಕೆ ತೊಡಕಾಗಿಯೂ ಜೀವನ ಪೂರ್ತಿಯಾಗಿಯೂ ಮುಂದುವರಿಯುವ ಸಂದರ್ಭವಿರುತ್ತದೆ. ಯಾಕೆಂದರೆ ಈ ವಯಸ್ಸಿನಲ್ಲಿ ಕಲಿತದ್ದು ಮನಸ್ಸಿನಲ್ಲಿ ಅಚ್ಚೊತ್ತಿಬಿಡುತ್ತದೆ. ಹೀಗೆಯೇ ಎನ್ನುವ ಕಲ್ಪನೆ ಗಟ್ಟಿಗೊಳ್ಳುತ್ತಾ ಬರುತ್ತದೆ. ಅದು ತರಬೇತಿಯ ಕುಟುಂಬದಲ್ಲಿ ತಾರತಮ್ಯವಾದರೆ ಬೆಳೆದು ಬಂದ ಕಲಿತ, ಸಲಹೆ ನಿರೀಕ್ಷಿಸಿದ ಎಲ್ಲಾ ಒಡನೋಟಗಳು ಮುಂದುವರಿಯುವುದರಿಂದ ಈ ವಯಸ್ಸಿನ ಮೇಲೆ ಆದ ಪರಿಣಾಮ ಸಮಾಜದ ಮೇಲಾದ ಹಾಗೆ ಮತ್ತು ಅಂಧಕಾರದಲ್ಲಿರುವ ಮಹಿಳೆಯರನ್ನು ಇನ್ನೂ ಅಂಧಕಾರಕ್ಕೆ ಸಾಗಿಸಿದಂತೆ ಎನ್ನುವುದು ಸಮಾಜದ ಚಿಂತಕರೂ ಚಿಂತಿಸಬೇಕಾದ ಅವಶ್ಯವಾದುದಾಗಿದೆ.

ಯೌವ್ವನ

ಸಾಮಾನ್ಯವಾಗಿ ಯೌವ್ವನದ ಕಾಲವು ೨೦ರಿಂದ ೩೦ ವರ್ಷದವರೆಗೆ ಇರುತ್ತದೆ. ಇದು ಹದಿಹರೆಯರನ್ನು ದಾಟಿ ಹೊಸ ಭದ್ರತೆಯಡೆಗೆ ಸಾಗುವ ವಯಸ್ಸು ಇದಾಗಿರುತ್ತದೆ. ಹದಿಹರೆಯದ ಸಂದರ್ಭದಲ್ಲಿ ರೂಢಿಸಿಕೊಂಡ ಎಲ್ಲಾ ಪ್ರಕ್ರಿಯೆಗಳು ಈ ವಯಸ್ಸಿನ ಹಂತದಲ್ಲಿ ಮುಂದುವರಿಯುತ್ತಾ ಸಾಗುತ್ತವೆ. ಅಂದರೆ ಗಂಡು ಹೆಣ್ಣು ಯಾವ ಮಾದರಿಯ ಪಾತ್ರದಲ್ಲಿ ಬೆಳೆದು ಬಂದಿರುತ್ತಾರೆಯೋ ಅದೇ ಮಾದರಿಯಾಗಿ ತಮ್ಮ ಪಾತ್ರಕ್ಕನುಗುಣವಾಗಿ ಕುಟುಂಬದಲ್ಲಿ ಸಿಕ್ಕಿರತಕ್ಕಂತಹ ತರಬೇತಿಗಳು ಲಿಂಗತಾರತಮ್ಯಗಳು ಮುಂದುವರಿಯುವ ಅಥವಾ ಸಮತೋಲನದಲ್ಲಿ ಚಲಿಸುವದಾಗಿರುತ್ತದೆ. ಇದರ ತಾತ್ಪರ್ಯ ಯಾವ ಕುಟುಂಬದಲ್ಲಿ ಹೆಣ್ಣಿನ

ಕಟ್ಟಪ್ಪಣೆ ಪಾತ್ರ ಸಿದ್ಧತೆಗಳು ಮಾದರಿಯಲ್ಲಿ ಬಂದಿರುತ್ತಾರೆಯೋ ಅದನ್ನೇ ಒಪ್ಪಿಕೊಂಡು ಬಂದಿರುವ ಪುರುಷ ಮಹಿಳೆಯರು ಅನಿವಾರ್ಯ ಎನ್ನುವ ಹಾಗೆ ತಾರತಮ್ಯಗಳು ರೂಢಿಸಿಕೊಂಡು ಬರುತ್ತಾರೆ. ಅದೇ ಉತ್ತಮ ಸಮತೋಲನದ ತರಬೇತಿಗಳು ಸಿಕ್ಕಿರುವ ಕುಟುಂಬಗಳು ತಾರತಮ್ಯವಿಲ್ಲದೆ ಸಾಗುವ ಅಂತಃ ಕ್ರಿಯೆಯಾಗಿ ಮುಂದುವರಿಯುತ್ತವೆ.

ಲಿಂಗತಾರತಮ್ಯದಲ್ಲಿ ಬೆಳೆದು ಬಂದಿರತಕ್ಕಂತಹ ತರುಣಿಯರು ಜೀವನದ ಭದ್ರತೆಗೆ ಸ್ವಾವಲಂಬಿ ಜೀವನಕ್ಕೆ ಹಾತೊರೆಯುವು ಸಂದರ್ಭಗಳು ಬರುತ್ತವೆ. ವಿವಿಧ ಜ್ಞಾನಶಿಸ್ತುಗಳು ಪಡೆದುಕೊಂಡಿದ್ದರೂ ತಾವು ಬಂದಿರತಕ್ಕಂತಹ, ಬೆಳೆದಿರತಕ್ಕಂತಹ ಹಿನ್ನೆಲೆಯನ್ನೇ ಮುಂದುವರಿಸುವರಾಗಿರುತ್ತಾರೆ. ಮನಸ್ಸಿನ ಒಳಗಡೆ ಪ್ರತಿರೋಧವಿದ್ದರೂ ಅದು ಸಮಾಜದಲ್ಲಿ ಮನ್ನಣೆಗಳಿಲ್ಲವೆಂಬುದು ಒಪ್ಪಿಕೊಳ್ಳುವ ಹಂತಗಳು ತಲುಪಿಬಿಡುತ್ತಾರೆ. ಅದಕ್ಕಾಗಿ ಚರ್ಚೆ ಸಂದರ್ಭದಲ್ಲಿ ಕುಟುಂಬಕ್ಕೆ ಸಂಬಂದಿಸಿದ ಅಸಮಾನತೆಯ ಸ್ವರೂಪಗಳ ಬಗ್ಗೆ ಪ್ರಸ್ತಾವನೆ ಬಂದಾಗ ಸಂಪ್ರದಾಯಿಕತೆ ಆಧುನಿಕತೆ ಯಾವುದನ್ನು ಒಪ್ಪಿಗೆ ತಿಳಿಸಬೇಕೆನ್ನುವುದು ತೋಚದಾಗುತ್ತದೆ.

ಸಂಪ್ರದಾಯ ಮಾದರಿಯಾಗಿಯೆ ಕುಟುಂಬದ ಹಿನ್ನೆಲೆಯ ತಾರತಮ್ಯಗಳನ್ನು ಹೇಳಬಹುದು. ಅದು ಅನಿವಾರ್ಯ ಪ್ರಸಂಗಗಳು ಒಪ್ಪಿಗೆಗಳಾಗಿ ಮಾರ್ಪಟ್ಟಿರುವಾಗ ಆಧುನಿಕತೆ ಜೀವನ ಶೈಲಿಯ ಬಗ್ಗೆ ಕೊಂಚ ಆಸೆಯ ಬದಲಾವಣೆಗಳಿದ್ದರೂ ಸಮಾಜದ ಒಪ್ಪಿಗೆಗಳು ನಿರಾಕರಣೆಯವಾಗಿರುವಾಗ ಮನಸ್ಸಿನ ಮಾತುಗಳು ಸ್ಪಷ್ಟವಾಗಿ ಹೇಳಲು ತರುಣಿಯರಿಗೆ ಹಿಂಜರಿಕೆಗಳು ಸಹ ಇರುತ್ತವೆ. "ಅದಕ್ಕಾಗಿ ಈ ವಯಸ್ಸಿನ ಮಹಿಳೆಯರು ಪ್ರಗತಿಯ ಚಿಂತನೆಯ ರೂಪಿಸಿಕೊಳ್ಳುವ ಇಲ್ಲವೆ ಮನೆಯ ಗೃಹಣಿ ಪಾತ್ರದಲ್ಲಿ ಸಿದ್ಧಗೊಳ್ಳುವ ದ್ವಂದ್ವಗಳಿಗೀಡಾಗುತ್ತಾರೆ. ಸಮಾಜದ ನಿರ್ಮಾಣವೆ ಪಾತ್ರಗಳು ರೂಪಿಸಿ ಬಿಟ್ಟಿರುವಾಗ ಗೃಹಿಣಿಯಾಗಿ ತರುಣಿಯರು ಒಪ್ಪಿಕೊಂಡು ಬಿಡುತ್ತಾರೆ."[*]

ಸಮಾಜೀಕರಣದ ಪ್ರಕ್ರಿಯೆಗಳು ಮಹಿಳೆಯರನ್ನು ಗೃಹಕ್ಕೆ ಸೀಮಿತವಾಗಿ ಮಾಡಿರುವುದರಿಂದ ಗೃಹಕೃತ್ಯಗಳು ಮತ್ತು ಇತರೆ ಸ್ತ್ರೀಪಾತ್ರದ ಕಾರ್ಯಗಳ ಮಹಿಳೆಯರ ನಿರ್ವಹಿಸಬೇಕೆನ್ನುವುದು ಗಟ್ಟಿಗೊಳ್ಳುತ್ತಾ ಹೋಗುತ್ತದೆ. ಅದು ಅನಿವಾರ್ಯವೆಂದು ಒಪ್ಪಿಗೆಗಳು ಸೂಚಿಸುಸುವುದಿರುತ್ತದೆ. ತರುಣರು ಅವರ ಪಾತ್ರದಲ್ಲಿ ಅಂದರೆ ಶಿಕ್ಷಣ, ವಿವಿಧ ಜ್ಞಾನ ಕೌಶಲ್ಯಕ್ಕಾಗಿ ಮನೆಯ ಭಾಗಿಯಾಗಲೂ ನಿರಾಕರಿಸುತ್ತಾರೆ. ತರುಣರಿಗೆ ಹೊರಗಿನ ಜ್ಞಾನ ಹರಟೆ ಚರ್ಚೆಗಳು ಸಮುದಾಯದ ಚಿಂತನೆಗಳಲ್ಲಿ ಬೆಳವಣಿಗೆಯ ಬಗ್ಗೆ ಚಿಂತನೆಗಳು ಒಳಮೂಡುತ್ತಾ ಸಾಗುತ್ತವೆ. ಯಾಕೆಂದರೆ ವ್ಯವಸ್ಥೆಯ ಪುರುಷ ಮಾದರಿಯಾಗಿ ರಚನೆಗೊಂಡಿರುವುದರಿಂದ ರೂಢಿಸಿ ಬಿಡಲಾಗುತ್ತದೆ. ತರುಣತರುಣಿಯರು ಉತ್ತಮ ಜೀವನದ ತಳಪಾಯಕ್ಕಾಗಿ ಹಾತೊರೆಯುತ್ತಾರೆ. ಅವರು ಬೆಳೆದು ಬಂದಿರುವ ಪರಿಸರದಿಂದ ಜೀವನದ ಭವಿಷ್ಯವು ಅಡಗಿರುತ್ತದೆ. ಈ ವಯಸ್ಸಿನಲ್ಲಿ ಹದಿಹರೆಯದ ಒರಟುತನಕ್ಕಿಂತ ಶಾಂತಿ, ಸಹನೆಯನ್ನು ಕಾಪಾಡುವ ವಯಸ್ಸು ಇದಾಗಿರುತ್ತದೆ.

ನವಜೀವನಕ್ಕೆ ಕಾಲಿಡುವ ಸಂದರ್ಭದಲ್ಲಿ ಮದುವೆ ಕರಾರಿನಲ್ಲಿ ತರುಣರು ಇಚ್ಛೆಗೆ ಅನುಕೂಲವಾಗಿ ತರುಣಿಯರನ್ನು ಆಯ್ಕೆಮಾಡಿಕೊಳ್ಳುತ್ತಾರೆ. ತರುಣಿಯರಿಗೆ ಸಂಪ್ರದಾಯಿಕ ಮಾದರಿಯಲ್ಲೇ ಬೆಳೆದವರು. ತರುಣಿಯರಿಗೆ ಸ್ವ ಇಚ್ಛೆಗಳು ಇದ್ದರೂ ಕುಟುಂಬವು ನಿರಾಕರಿಸುವ ಸಂದರ್ಭವಿರುತ್ತದೆ. ಒಳ್ಳೆಯ ಸಂಬಂದವೆಂದು ಒಪ್ಪಿಸುತ್ತಿರುತ್ತವೆ. ಕೆಲವು ಸಂದರ್ಭದಲ್ಲಿ ನಿರಾಸೆಯ ಮನಸ್ಸಿದ್ದರೂ ಒಪ್ಪಿಕೊಳ್ಳಬೇಕಾಗುತ್ತದೆ. ಇದರಿಂದ ಕುಟುಂಬದಲ್ಲಿ ದ್ವೇಷಗಳು ಸಹ ಹುಟ್ಟಿಕೊಳ್ಳಬಹುದು. ಯಾಕೆಂದರೆ ತರುಣಿಯರಿಗೆ ಶಿಕ್ಷಣಜ್ಞಾನ ಶಿಸ್ತನ್ನು ಕಲಿಯಲು ಬಯಕೆಗಳಿದ್ದಾಗ ಕುಟುಂಬದ ಈ ಒತ್ತಡಗಳಿಂದ ದ್ವೇಷಗಳು ಬರುತ್ತವೆ.

ಪುರುಷ ಪ್ರಧಾನ ಸಮಾಜಿಕ ಚಿಂತನೆಯಲ್ಲಿ ಕಟಿಬದ್ಧತೆಗಳು ಒದಗುವುದು ಹುಡುಗಿಯರಿಗೆ ಮಾತ್ರ. ಉತ್ತಮ ಶಿಕ್ಷಣ ಮನೆಯ ಮುಕ್ತ ವಾತಾವರಣ ಸ್ವಂತಿಕೆಗೆ ಪ್ರೋತ್ಸಾಹಗಳು ಕುಟುಂಬದಲ್ಲಿದ್ದಾಗ ತರುಣಿಯರ ಜೀವನ ಉತ್ತಮವಾಗಿ ಜೀವನದ ಸುಗಮ ಪಯಣ ಸಾಗಿಸಬಹುದು. ಅದು ಬಹು ವಿರಳವೆನ್ನುವಷ್ಟರ ಮಟ್ಟಿಗೆ ಗೋಚರವಾಗುತ್ತದೆ. ಮನೆಯಲ್ಲಿ ಹೆಣ್ಣುಮಗಳು ವಯಸ್ಸನ್ನು ಮೀರಿ ಕುಳಿತರೆ ಚಿಂತನೆಗಳು ಸದಾ ತಂದೆತಾಯಿಯರಲ್ಲಿ ಮೂಡುತ್ತಿರುತ್ತದೆ. ಅದು ಹೆಚ್ಚಿನದಾಗಿದ್ದರೆ, ತರುಣಿಯರ ಭವಿಷ್ಯವು ತೊಡಕಾಗುವ ಸಂದರ್ಭಗಳು ಇರುತ್ತದೆ. ಸಮಾಜೀಕರಣ ಪ್ರಕ್ರಿಯೆ ಲಿಂಗತಾರತಮ್ಯವು ಈ ವಯಸ್ಸಿನ ಹಂತದಲ್ಲಿಯೂ ಕಾರ್ಯನಿರ್ವಹಿಸುತ್ತದೆ.

ಕೆಲವು ಸಂದರ್ಭದಲ್ಲಿ ಮದುವೆಯಾಗಿರುವ ತರುಣಿಯರದು ಬೇರೆ ಪ್ರಮಾಣದಲ್ಲಿ ಲಿಂಗ ತಾರತಮ್ಯಗಳು ಒಳಮೂಡುತ್ತಿರುತ್ತದೆ. ಮದುವೆ ಆದ ನಂತರ ತರುಣಿಯರದು ಕೆಲವು ಸಮಾಜಕಾರ್ಯ ಚಟುವಟಿಕೆಯಲ್ಲಿ ಭಾಗವಹಿಸಬೇಕೆಂಬ ಆಸೆಗಳಿದ್ದರೂ ಮದುವೆಯಾಗಿರುವ ಗಂಡನಿಂದ ಅಥವಾ ಕುಟುಂಬದ ಅತ್ತೆಸೊಸೆಯರಿಂದ ನಿರಾಕರಣೆಗಳು ಇರುತ್ತವೆ. ಒಂದು ವೇಳೆ ಶಿಕ್ಷಣ ಕಲಿಯಲಾರದ ತರುಣಿಯರಂತೂ ಮನೆಯ 'ಗೃಹಣಿ'ಯಾಗಿ ಅವಿರತವಾಗಿ ಕಾರ್ಯನಿರ್ವಹಿಸುವುದರಲ್ಲೆ ಇದ್ದಾಗ ಮನೆಯನ್ನು ಬಿಟ್ಟು ಹೊರಗಿನ ಪ್ರಪಂಚದ ಜ್ಞಾನವನ್ನು ತಿಳಿಯದೆ ಅಂಧಕಾರದಲ್ಲಿ ಸಾಗಬೇಕಾದ ಘಟ್ಟ ಮಾತ್ರ ಹೆಣ್ಣಿಗೆ ಸೀಮಿತವಾಗಿ ಬಿಡುತ್ತದೆ. ಸಮಾಜದಲ್ಲಿ ನಡೆಯುತ್ತಿರುವ ಚಟುವಟಿಕೆ, ಗೃಹಕೃತ್ಯ ಕಾರ್ಯಗಳು ಒಪ್ಪಿಕೊಂಡು ಬದುಕಿನ ಉಳಿವಿಗಾಗಿ ಮಾಡಬೇಕಾದ ಸಂದರ್ಭ ಹೆಣ್ಣಿನ ಸೀಮಿತವಾಗಿ ಬಿಡುತ್ತದೆ. ಬದುಕಿನ ಅಳಿವು ಉಳುವಿನ ಪ್ರಶ್ನೆ ಇದ್ದಾಗ ಕುಟುಂಬದ ಅನಿವಾರ್ಯ ಪ್ರಸಂಗಗಳಿಗೂ ಅಣಿಯಾಗಿ ಸಹಿಸಬೇಕಾದ ಒತ್ತಡಗಳು ತರುಣಿಯರು ಅನುಭವಿಸಬೇಕಾಗುತ್ತದೆ.

ಕೌಟುಂಬಿಕ ವಲಯ ಪರಿಸರದಲ್ಲಿ ಇತರೆ ಒತ್ತಡಗಳು ದಾಂಪತ್ಯವು ಸಾಗಿದಾಗಲೂ ತಾರತಮ್ಯಗಳು ಸಾಗುತ್ತಿರುತ್ತವೆ. ಸಮಾಜೀಕ ರಚನೆಗಳೇ ಆ ರೀತಿ ರಚನೆಗೊಂಡಿರುವಾಗ ಕುಟುಂಬದಲ್ಲಿ ದಾಂಪತ್ಯದಲ್ಲಿ ಆಸೆ ಆಕಾಂಕ್ಷೆಗಳ ಹಂಚಿಕೆಯಲ್ಲಿ ವೈಷಮ್ಯಗಳು ಹುಟ್ಟಿಕೊಂಡಿರುವ ಸಂದರ್ಭದಲ್ಲಿ ಈ ವಾದಗಳಲ್ಲಿ

ತರುಣಿಯರು ಸೋಲೆ ಅನುಭವಿಸಬೇಕು. ಎದುರುತ್ತರ ನೀಡಿದರೂ ದೌರ್ಜನ್ಯಗಳು ನಡೆಯುವ ಸಂದರ್ಭಗಳು ಸಾಮಾನ್ಯವಾಗಿ ಈ ವಯಸ್ಸಿನಲ್ಲಿಯೇ ವರದಕ್ಷಿಣೆ ತಂದಿಲ್ಲವೆಂದು ಇಲ್ಲದ ಅಪಕಲ್ಪನೆಗಳು ಸೃಷ್ಟಿಸಿ ಅನೇಕ ರೀತಿಯ ದೌರ್ಜನ್ಯದಿಂದ ಕುಟುಂಬದವರೆಲ್ಲಾ ಕೂಡಿ ಮಾಡುವ ಸಾಮೂಹಿಕ ಕೊಲೆಯ ಆತ್ಮಹತ್ಯೆಯೆಂದು ಹಣೆಪಟ್ಟಿ ಹಚ್ಚುವ ಎಷ್ಟೋ ಘಟನೆಗಳು ನಡೆದುಹೋಗುತ್ತವೆ.

ಕುಟುಂಬದ ಪರಿಸರದಲ್ಲಿ ತರುಣಿಯರ ಸ್ಥಿರತೆಯ ಪ್ರಶ್ನೆ ಬಂದಿರುತ್ತದೆ. ನಿಜವಾದರೂ ಪರಿಸ್ಥಿತಿಗೆ ಹೊಂದಿಕೊಳ್ಳದೆ ಅನಿವಾರ್ಯವಿಲ್ಲದಾಗಿರುತ್ತದೆ. ಸೃಷ್ಟಿಗೊಂಡಿರುವ ತಾರತಮ್ಯ ಏಕಾಭಿಮುಖವಾಗಿರುವಾಗ ಯಾವುದೇ ಬದಲಾವಣೆಗಳು ಮಾಡಲು ಸಾಧ್ಯವಿಲ್ಲದ ಹಾಗೆ ರಚನೆಗೊಳ್ಳುತ್ತಾ ಸಾಗುತ್ತವೆ. ಬೆಳೆದುಬಂದ ಹಿನ್ನೆಲೆಯಲ್ಲಿಯೇ ಸ್ತ್ರೀತನದ ಪುರುಷತನದ ಪಾತ್ರದಲ್ಲಿ ಸಾಗಲೂ ಮುಂದುವರಿಯುತ್ತಾರೆ. ಇದರಿಂದ ಆರ್ಥಿಕ ಸ್ವಾವಲಂಬನೆ ಇಲ್ಲದೆ ಶಿಕ್ಷಣ ಪರಿಪೂರ್ಣತೆ ಇಲ್ಲದಿದ್ದಾಗ ವ್ಯಕ್ತಿತ್ವ ಕುಂದುಂಟಾಗುವ ಸಾಧ್ಯತೆ ಇರುತ್ತದೆ. ಆದರೂ ಪುರುಷ ಆಧೀನದಿಂದ ಸಾಧನೆಗಳ ಲೇಪನ ಮರೆಯಾಚಿದಂತಾಗುತ್ತದೆ.

ಪ್ರೌಢ

ಪ್ರೌಢ ವಯಸ್ಸು ಸಾಮಾನ್ಯವಾಗಿ ಯೌವ್ವನವನ್ನು ದಾಟಿದ ತದನಂತರ ವ್ಯಕ್ತಿಗಳು ಪ್ರೌಢರಾಗುತ್ತಾರೆ. ವಯಸ್ಸಿನ ಮಿತಿಯಾಗಿ ಹೇಳಬೇಕಾದರೆ ಸಾಮಾನ್ಯವಾಗಿ ೨೨ ರಿಂದ ೫೫-೬೦ ವರ್ಷಗಳ ತನಕ ಪ್ರೌಢರೆಂದು ಗುರುತಿಸುತ್ತಾರೆ. ಇಲ್ಲಿ ಸಾಮಾನ್ಯವಾಗಿ ಸ್ತ್ರೀ ಪುರುಷರಿಗೆ ಸಮಾಜದ ಕುಟುಂಬದ ಜವಬ್ದಾರಿಗಳು ಬಂದುಬಿಟ್ಟಿರುತ್ತವೆ. ಕುಟುಂಬ ನಿರ್ವಹಣೆಯ ಕೇಂದ್ರಬಿಂದುವಾಗಿ ಮಕ್ಕಳಿಗೆ ಮಾರ್ಗದರ್ಶನ ನೀಡುತ್ತಾ ಸಾಗುವ ಹಂತ ಇದಾಗಿರುತ್ತದೆ.

ಮಾನವನ ಬೆಳವಣಿಗೆಯು ಸಮಾಜೀಕರಣದ ಅನುಗುಣವಾಗಿಯೇ ಮುಂದುವರಿಯುವುದರಿಂದ ಕಲಿಕೆ, ಸಲಹೆ, ಕಟ್ಟುಪಾಡುಗಳು ಕಲಿಯಬೇಕಾಗುತ್ತದೆ. ಈ ತರಬೇತಿಗಳು ರೂಢಿಸಿಕೊಡುವುದು ಕುಟುಂಬದ ಪ್ರೌಢ ತಂದೆತಾಯಿಗಳು, ಮಕ್ಕಳನ್ನು ಸಮಾಜದಲ್ಲಿ ಇರುವ ವ್ಯವಸ್ಥೆಗನುಗುಣವಾಗಿ ನಡುವಳಿಕೆಗಳು ರೂಢಿಸಿಕೊಳ್ಳಲು, ಕಲಿಯುವ. ಅನುಸರಿಸಲು ತರಬೇತಿ ನೀಡುವ ಬಹುಮುಖ್ಯವಾದ ಕರ್ತವ್ಯ ತಂದೆತಾಯಿಯರದ್ದಾಗಿರುತ್ತದೆ. ಲಿಂಗತಾರತಮ್ಯದ ನೋಟದಿಂದ ನೋಡಿದಾಗ ಸ್ತ್ರೀಯರು, ಅಬಲೆ, ಅಸಮಾನತೆ, ಶೋಷಣೆ ವಿವಿಧ ಸಂಕೋಲೆಗಳಲ್ಲಿರುವುದು ನೋಡುತ್ತೇವೆ. ಪುರುಷರು ಸ್ವತಂತ್ರರು, ಸರ್ವರು ಆಗಿರುವುದು ಕಾಣುತ್ತವೆ. ಇವರು ಬೆಳವಣಿಗೆಯು ಸಮಾಜದಲ್ಲಿ ರೋಗದ ವಾತಾವರಣವಾಗಿದೆ. ಆರೋಗ್ಯದ ಸ್ಥಿತಿಯಲ್ಲಿ ಸಮಾನತೆಯಲ್ಲಿ ಸಮಾಜವಿಲ್ಲವೆಂದು ದೃಷ್ಟಿಸುತ್ತವೆ. ಇವುಗಳೆಲ್ಲ ಮೂಲ ಸಂಕೋಲೆಗಳು ವಿವಿಧ ವಲಯಗಳು ಆಗಿವೆ. ವಿವಿಧ ವಲಯಗಳಿಗೆ ಪೂರಕವಾಗಿ ರಚನೆಗೊಳ್ಳಲು ಸಮಸ್ಯೆಗಳನ್ನು ಸಮಸ್ಯೆಗಳಾಗಿ ಮುಂದುವರಿಸಲು ಕುಟುಂಬವು ಕಾರಣವಾಗಿದೆ. ಆ ಕುಟುಂಬದಿಂದ ತರಬೇತಿ ಹೊಂದಿಬರುತ್ತಿರುವ ಮಕ್ಕಳು

ಯಾವ ಪ್ರಮಾಣದ್ದು ಎಂದಾಗ ಕುಟುಂಬದ ಉತ್ತರ ಬರುತ್ತದೆ. ಅಲ್ಲಿ ತಂದೆತಾಯಿ ಶಿಕ್ಷಣ ಪರಿಸರ ಬರುತ್ತದೆ. ಮೂಲವಾಗಿ ತಂದೆತಾಯಿಗಳು ಮಕ್ಕಳನ್ನು ರೂಪಿಸುತ್ತಾರೆ, ಕಲಿಸುತ್ತಾರೆ, ಆ ಪ್ರೌಢರು ಬೆಳೆದು ಬಂದಿರತಕ್ಕಂತಹ ಹಿನ್ನೆಲೆ ಯಾವ ಸ್ವರೂಪದ್ದು ಎಂದು ದೃಷ್ಟಿ ಹಾಯಿಸಿದಾಗ ಲಿಂಗತಾರತಮ್ಯದಿಂದ ಬೆಳೆದು ಬಂದವರಾಗಿದ್ದಾರೆ. ಸಮಾಜಕ್ಕನುಗುಣವಾಗಿ ತಮ್ಮ ಪಾತ್ರದಲ್ಲಿ ಸಿದ್ಧಗೊಳಿಸುತ್ತಿರುತ್ತಾರೆ. ಅಂದರೆ ಸ್ತ್ರೀಯರು ಸ್ತ್ರೀತನದ ಪುರುಷರು ಪುರುಷತನದ ಮಾದರಿಗೆ ಅನುಗುಣವಾಗಿ ಅಸಮಾನತೆಯ ನೋಟಗಳು ಏಣಿ ಶ್ರೇಣಿ ತರಬೇತಿಗಳು ಪ್ರೌಡರಾದವರು ಮಕ್ಕಳಿಗೆ ನೀಡುತ್ತಾರೆ. ಪ್ರೌಡರು ಗೊಂದಲದಿಂದ ಬಂದವರಾಗಿದ್ದಾರೆ. ಅವರ ಮಕ್ಕಳಿಗೆ ಅದೇ ಮಾದರಿಯ ತರಬೇತಿಯ ದೊರೆತು ಮುಂದುವರಿಯುವದಾಗುತ್ತದೆ. ಉತ್ತಮ ಆರೋಗ್ಯ ಸ್ಥಿತಿಯಲ್ಲಿ ಬೆಳೆದು ಬಂದ ಕುಟುಂಬಗಳು ಉತ್ತಮವಾಗಿ ಸಾಗುತ್ತವೆ. ಎಲ್ಲಾ ಸಮಾನತೆಯನ್ನು ಒದಗಿಸುತ್ತವೆ. ಆದರೆ ಲಿಂಗ ತಾರತಮ್ಯದ ನೋಟದಲ್ಲಿ ಬಂದಿರುವ ಬೆಳೆದಿರುವ ಕುಟುಂಬಗಳು ಮಾತ್ರ ಭಿನ್ನ ಸ್ವರೂಪದಾಗಿರುತ್ತವೆ. ಸಮಾಜದಲ್ಲಿ ಇಂತಹ ಕುಟುಂಬಗಳೇ ಅಧಿಕವಾಗಿವೆ.

ಪ್ರೌಢ ಜೀವನದಲ್ಲಿಯೂ ಮುಂದುವರಿಯುವ ಈ ತಾರತಮ್ಯದ ನೋಟಗಳು ಪುರುಷರ ತಂತ್ರದ ಹುನ್ನಾರಗಳಿಂದ ರಚನೆಗೊಂಡಿರುವುದಾಗಿದೆ. ಅಧಿಕಾರ, ಆರ್ಥಿಕ, ಹಿಡಿತ, ಸಮಾಜೀಕ ಕ್ಷೇತ್ರದ ವಿವಿಧ ವಲಯಗಳ ಪುರುಷರ ಪ್ರಾಭಲ್ಯತೆಯು ಮಹಿಳೆಯ ಪುರುಷ ಚಿಂತನೆಗೆ ಒಳಪಟ್ಟು ಕುಟುಂಬದ ಕಾರ್ಯಗಳು ಸಹ ಪುರುಷ ನಿರ್ದೇಶನದಂತೆ ಸಾಗುವಾಗ ಮಹಿಳೆ ಇಲ್ಲಿ ಎರಡನೆ ದರ್ಜೆಯ ಪ್ರಜೆಯಾಗಿ ಕುಟುಂಬದಲ್ಲಿ ಗೋಚರಿಸುತ್ತಾಳೆ. ಹೀಗಾಗಿ ಅವರ ಮೌಲ್ಯಗಳು ಸಹ ಎರಡನೆಯದಾಗಿಯೂ ನೋಡಿ ರೂಢಿಗಳು ಬಂದಿರುತ್ತವೆ. ಈ ಕುಟುಂಬದ ವ್ಯವಸ್ಥೆಯಿಂದ ಇತರೆ ವಲಯಗಳಲ್ಲಿ ಸ್ತ್ರೀಯು ಎರಡನೆ ಸ್ಥಾನದಲ್ಲಿ ಗೋಚರಿಸಿದಾಗ ಪ್ರೌಢರಾದವರು ಅದನ್ನು ಒಪ್ಪಿಕೊಳ್ಳಲು ಸಿದ್ಧರಿರುತ್ತಾರೆ. ಅದೇ ಮಾದರಿಯ ಇತರೆ ಪೂರ್ವಬಾಯಿ ಕೆಲಸಗಳು ಸಹ ಮುಂದುವರಿಯುತ್ತವೆ.

ಶ್ರೇಣೀಕರಣದ ವ್ಯವಸ್ಥೆಯಲ್ಲಿಯೇ ಬಂದಿರುವ ಸಮಾಜ ರಚನೆಯು ತಾರಮತ್ಯದ ಸೃಷ್ಟಿಕರಣಕ್ಕೆ ಕಾರಣವಾಗಿದ್ದು, ಸ್ತ್ರೀ ಪುರಷರ ಬೇಧದ ಸ್ವರೂಪಗಳು ಸಹ ಸಂಸ್ಕೃತಿ, ಕುಟುಂಬ ಇತರ ವಲಯದಲ್ಲಿಯೂ ಬೆರೆತು ಹೋಗಿರುವುದು ಗೋಚರವಾಗುತ್ತದೆ. ಈ ಚೌಕಟ್ಟುಗಳಲ್ಲಿ ಸಿಲುಕಿಕೊಂಡು ಮಹಿಳೆ ಬಿಡಿಸಿಕೊಂಡು ಬರುವ ಕಷ್ಟದ ಮಾತೇನು ಆಗದಿದ್ದರೂ, ಸಮಾಜೀಕರಣದ ನೆಲೆಯಿಂದ ಸಿದ್ಧರೂಪತಾಳಿ ಬರುತ್ತಿರುವುದರಿಂದ ತಾರತಮ್ಯದ ಸ್ವರೂಪಗಳು ವಿಸ್ತರವಾಗುತ್ತಾ ಸಾಗುತ್ತವೆ. ಇದರಲ್ಲಿ ಸಿಲುಕಿರುವ ಮಹಿಳೆ ಚೇತರಿಸಿಕೊಳ್ಳುವುದು ಕಷ್ಟದ ಮಾತಾಗೆ ಉಳಿಯುತ್ತದೆ. ಪ್ರೌಡ ವಯಸ್ಸಿನಲ್ಲಿ ಈ ಚಿಂತನೆಗಳು ಬೇರೆ ಬಿಟ್ಟಿರುವಾಗ ಸುಲಭವಾಗಿ ಬದಲಾವಣೆಗೆ ಹವಣಿಸುವುದಿಲ್ಲ. ಸಮಾಜದ ಪರಿವರ್ತನೆಗೆ ಚಿಂತಿಸುವುದಿಲ್ಲ. ಇರುವ ವ್ಯವಸ್ಥೆಗೆ ಒಪ್ಪಿಕೊಳ್ಳುವ ತಿಳಿದು ತಿಳಿಯದೆಯೊ ಅಂತರ್ಗತಿಸಿ ಕಳಿಸುವ ವ್ಯವಸ್ಥೆಯಂತೂ ಕುಟುಂಬದ ಸಮಾಜೀಕರಣದಲ್ಲಿ ನಡೆಯುತ್ತದೆ.

ಪ್ರೌಢ ವ್ಯವಸ್ಥೆಯಲ್ಲಿ ಬದಲಾವಣೆ ಸ್ವರೂಪದ ವಿಷಯವಂತೂ ಹೆಚ್ಚಿನ ಗೋಚರಿಸದಿದ್ದರೂ, ಶಿಕ್ಷಣ, ಜ್ಞಾನ, ಕೌಶಲ್ಯ ಹೊಂದಿದ ಕೆಲವು ಕುಟುಂಬಗಳಿಂದ ಬದಲಾವಣೆ ತರಲು, ಲಿಂಗ ತಾರತಮ್ಯವನ್ನು ಮಾಡದೆ, ಮಕ್ಕಳಿಗೆ ಅವಕಾಶ ಕಲ್ಪಿಸಿಕೊಡುವುದು ಇದೆ. ಅದು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಗೋಚರಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಬಹು ಪ್ರಧಾನವಾಗಿ ಪುರುಷ ಚಿಂತನೆಯ ಹುನ್ನಾರಗಳೆ ಮುಂದುವರಿಯುತ್ತವೆ. ಮಹಿಳೆಯು ಮಾತ್ರ ವಿಶ್ರಾಂತಿ ಸಮಯವೆನಿಸಿದರು. ಮಕ್ಕಳ ಸೊಸೆಯರ ಅಕ್ಕರೆ, ಆರೈಕೆಯನ್ನು ಅಪೇಕ್ಷಿಸುವರಾಗಿರುತ್ತಾರೆ. ಪುರುಷ ಈ ವಯಸ್ಸಿನಲ್ಲಿ ಅಧಿಕ ಪ್ರಮಾಣದ ಶ್ರಮವನ್ನು ವ್ಯಯ ಮಾಡುವುದಿಲ್ಲ. ಹಾಳು ಹರಟೆ, ಸಂವಾದ ಮನೋರಂಜನೆಯಲ್ಲಿ ಕಳೆಯುವುದು ಕಾಣುತ್ತೇವೆ. ಶಿಕ್ಷಣ ಕಲಿತವರು ವಿವಿಧ ಆಸಕ್ತಿಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಪ್ರೌಢ ವಯಸ್ಸಿನಲ್ಲಿ ತಾವು ಬೆಳೆದು ಬಂದ ಹಿನ್ನೆಲೆಗಳು ಸ್ವರೂಪಗಳು ವಿವರಿಸುವವರು ಆಗಿರುತ್ತಾರೆ. ಪ್ರಸ್ತುತ ಪರಿಸ್ಥಿತಿಯ ಬಗ್ಗೆ ವಿಮರ್ಶೆ ಮಾಡುವವರು ಇರುತ್ತಾರೆ. ತಮ್ಮ ಬೆಳವಣಿಗೆಯ ಸ್ವರೂಪದ ಆಧುನಿಕ ಸ್ವರೂಪಕ್ಕೆ ಹೊಲಿಸಿ ತಾವು ಬೆಳೆದು ಬಂದ ಮಾದರಿಯನ್ನೇ ಒಪ್ಪಿಕೊಳ್ಳುವರು ಇರುತ್ತಾರೆ. ಆಧುನಿಕತೆಗೆ ಮಕ್ಕಳನ್ನು ಜ್ಞಾನ ಕೌಶಲ್ಯಗಳಲ್ಲಿ ಮಾತ್ರ ಪ್ರೋತ್ಸಾಹಿಸಿ, ಕುಟುಂಬದ ಇತರ ಚಟುವಟಿಕೆಯಲ್ಲಿ ಮಾತ್ರ ಲಿಂಗ ತಾರತಮ್ಯದ ಭೇದಗಳು ಇರುತ್ತವೆ.

ವೃದ್ಧಾಪ್ಯ

ವೃದ್ಧಾಪ್ಯ ವ್ಯಕ್ತಿಯ ಕಾಲಾವಧಿಯ ಕೊನೆಯ ಘಟ್ಟವಾಗಿದ್ದು ಬಾಲ್ಯ, ಹದಿಹರೆಯ, ಯೌವ್ವನ, ಪ್ರೌಢರ ವಯಸ್ಸಿನ ಹಂತದ ಹಾಗೆ ವೃದ್ಧಾಪ್ಯರ ಕೂಡ ಒಂದು ಹಂತವಾಗಿದೆ. ಸಾಮಾನ್ಯವಾಗಿ ೬೦ ೬೫ ವರ್ಷಗಳಿಂದ ಪೂರ್ಣ ಜೀವಿತದ ಅವಧಿಯವರೆಗೆ ವೃದ್ಧಾಪ್ಯವೆಂದು ಹೇಳಲಾಗುತ್ತೆ, ಪೂರ್ವದಲ್ಲಿ ಕಲಿತರತಕ್ಕಂತಹ ಉತ್ತಮ ತಳಪಾಯದ ವ್ಯಕ್ತಿತ್ವ ನಿರ್ಮಾಣವಾಗಿದ್ದರೆ, ವೃದ್ಧಾಪ್ಯರಲ್ಲಿ ಜೀವನದ ಅಂತ್ಯವನ್ನು ಸಂತೋಷದಿಂದ ಸ್ವಾಗತಿಸುತ್ತಾರೆ. ಶಿಕ್ಷಣ, ಜ್ಞಾನ, ಶಾಂತಿ, ಚಿತ್ತತೆಗಳು, ವೃದ್ಧಾಪ್ಯದಲ್ಲಿ ಕಡಿಮೆ ಸಂಕೋಲೆಗೆ ಸಿಗಿಸುತ್ತವೆ. ಇಲ್ಲವಾದರೆ ಬದುಕುವ ಬವಣೆ ಮಾತ್ರ ಅತಂತ್ರ ಸ್ಥಿತಿಗೆ ಸಿಲುಕಿಸಿ ಬಿಡುತ್ತದೆ.

ಸಮಾಜೀಕರಣದ ಪ್ರಕ್ರಿಯೆಗಳು ವೃದ್ಧರಿಂದ ಆಶ್ರಯದಾಗಿ ಮೂಡಿ ಬಂದಿರುವ ವ್ಯವಸ್ಥೆಯಾಗಿದೆ. ತಂದೆತಾಯಿಯರಿಂದ ಮಕ್ಕಳ ಸಂಬಂಧ ಸಂಕೇತವಾಗಿ ಒಬ್ಬರ ಸಂಕಷ್ಟದಲ್ಲಿ ಒಬ್ಬರು ಭಾಗಿಯಾಗುವಂತೆ ರೂಢಿಸಿಕೊಂಡು ಸಮಾಜೀಕರಣವು ಅಷ್ಟೆ ತೊಂದರೆಗಳನ್ನು ಅನುಭವಿಸಬೇಕಾದರೂ ಅವರ ಪಾಲಾಗಿದೆ. ಕುಟುಂಬದ ಏರುಪೇರಿನ ವಾತಾವರಣ, ಆರ್ಥಿಕ ದಿಗ್ಬಂದನೆ ಮಕ್ಕಳ ತಿರಸ್ಕಾರಗಳು ವೃದ್ಧಾಪ್ಯದಲ್ಲಿ ಹೆಚ್ಚು ತೊಂದರೆಯನ್ನು ಮಾನಸಿಕ ಒತ್ತಡವನ್ನು ತಂದುಬಿಡುತ್ತವೆ. ಲಿಂಗ ತಾರತಮ್ಯದಲ್ಲಿಯೆ ಬೆಳೆದಿರುವುದರಿಂದ ಮಹಿಳೆ ಇಲ್ಲಿ ಹೆಚ್ಚಾಗಿ ಸಂಕಷ್ಟಕೊಳಗಾಗುವ ಸಂಭವವಿರುತ್ತದೆ. ಮಕ್ಕಳ ಮೇಲೆ ಅಧಾರವಾಗಿ

ಬದುಕುತ್ತಿರುವ ವೃದ್ಧಾಪ್ಯ ಮಹಿಳೆಯರ ಹೃದಯುದ ನೋವಿನ ಧ್ವನಿ ಕೇಳತೀರದಾಗುತ್ತದೆ. ಹೆತ್ತು ಹೊತ್ತು, ಸಾಕಿ ಸಲುಹಿ, ಬೆಳೆಯ ಬೇಕಾದ ಎಲ್ಲಾ ಅಗತ್ಯಗಳನ್ನು ಪೂರೈಸಿ ಮಕ್ಕಳನ್ನು ಆರೈಕೆ ಮಾಡಿದ ತಾಯಿಯ ನೆರಳನ್ನು ಬಿಟ್ಟು ತಾತ್ಪೂರ್ತಕ ಚಿಂತನೆಯಲ್ಲಿಯೇ ಮೈ ಮರೆತು ವೃದ್ಧ ಮಹಿಳೆಯರನ್ನು ಕಡೆಗಣಿಸಿರುವುದು ಕಾಣುತ್ತವೆ. ಮೊದಲೆ ವೃದ್ಧರಾಗಿರುವ ಮಹಿಳೆ ವ್ಯಕ್ತಿತ್ವ ತಳಪಾಯ ಇಲ್ಲದಿದ್ದಾಗ ಬದುಕು ಅಸ್ತವ್ಯಸ್ತದ ಆಧೀನಳಾಗಿ ಬದುಕು ಬೇಕಾಗುತ್ತದೆ.

ಮಹಿಳೆಯ ಬದುಕು ತಾರತಮ್ಯದಲ್ಲಿಯೇ ಹುಟ್ಟಿ ಬೆಳೆದು ಅಂತ್ಯ ಕಾಣುವುದು ಮಾತ್ರ ಮಹಿಳೆ ಒದಗಿ ಜೀವನಪೂರ್ತಿ ಶೂನ್ಯವಾಗಿ ಗೋಚರವಾಗುತ್ತದೆ. ಅನಿವಾರ್ಯವಾಗಿ ಏನು ಮಾಡದೆ ಆಗುವುದಿಲ್ಲ. ಇದರಿಂದ ಬೇಸರ ಜಿಗುಪ್ಸೆ, ಏಕಾಂಗಿತನಗಳು ರೂಢಿಯಾಗಿ ಬಿಡುತ್ತವೆ. ವೃದ್ಧಾಪ್ಯದಲ್ಲಿ ತಾವು ಬೆಳೆದುಬಂದ ಹಿನ್ನೆಲೆಯ ಆತ್ಮವಿಮರ್ಶೆಯು ಸಹ ಮಾಡುತ್ತಾರೆ.

ಬಾಲ್ಯದಿಂದಲೇ ರೂಢಿಯಾಗಿರುವ ಕೆಲಸ ತಾಪತ್ರಯಗಳು ಈ ವಯಸ್ಸಿನಲ್ಲಿಯೂ ಮಾಡಬೇಕಾದ ಹಂತಗಳಿರುತ್ತವೆ. ಕಾಳು, ಹಸನು ಮಾಡುವುದು ಕಸಗುಡಿಸುವುದು, ಇತರ ಶಕ್ತಿಗೆ ಅನುಕೂಲವಾಗಿರುವ ಹಾಗೆ ಕಾರ್ಯಗಳು ಇರುತ್ತವೆ. ಅವರ ಮನೋಸ್ಥಿತಿಯ ಆ ರೀತಿ ಕಾರ್ಯಮಾಡಲು ಸಿದ್ಧವಾಗಿ ನಿಂತಿರುತ್ತದೆ.

ದೈಹಿಕವಾಗಿ ದುರ್ಬಲರಾಗಿದ್ದು, ವೃದ್ಧರಿಗೆ, ಮಾನಸಿಕವಾಗಿಯೂ ಒತ್ತಡಕ್ಕೆ ಎಡಮಾಡಿಕೊಡುತ್ತದೆ. ಕಾಲು ನೋವು, ಬೆನ್ನು ನೋವು ಜ್ಞಾಪಕಶಕ್ತಿ ಕುಗ್ಗುವುದು ಇಂತಹ ಅನಾರೋಗ್ಯಗಳು ಹತ್ತಾರು ಚಿಂತನೆಗೆ ಎಡೆಮಾಡಿಕೊಟ್ಟು ಇನ್ನಷ್ಟು ಶಕ್ತಿ ಕುಗ್ಗಿಸಲು ಕಾರಣವಾಗುತ್ತವೆ. ದೈಹಿಕವಾಗಿ ಕುಂದಿರುವ ಅವರಿಗೆ ಕುಟುಂಬದ ಜಂಜಾಟಗಳು ಸಹ ಒತ್ತಡಕ್ಕೆ ಎಡೆಮಾಡಿಕೊಡುತ್ತವೆ. ಪ್ರಕೃತಿಯ ಸಹಜ ವೃದ್ಧಾಪ್ಯ ಮಾನವನ ಮೌಲ್ಯದ ಅಂಶಗಳು ಕುಟುಂಬದಲ್ಲಿ ಅರಿತುಕೊಂಡಿರಬೇಕು ಅಂದಾಗ, ವಯೋವೃದ್ಧ ಮಹಿಳೆಯರನ್ನು ಪರಿಸ್ಥಿತಿಗಳಿಂದ ಬದಲಾಯಿಸಬಹುದು ಇದ್ದ ವ್ಯವಸ್ಥೆ ಆಧುನಿಕತೆಯತ್ತ ಹೊರಳಿ ವಿದ್ಯಾವಂತರು ಸಹ ವೃದ್ಧ ಮಹಿಳೆಯರನ್ನು ಅಸಹ್ಯವಾಗಿ ಸಂಕಷ್ಟದಲ್ಲಿ ಸಿಲುಕಿಸುತ್ತಿರುವುದು ಮಾನವೀಯ ಮೌಲ್ಯವು ಮಾಯವಾಗುವ ಅಂಶ ಸ್ಪಷ್ಟಪಡಿಸುತ್ತದೆ.

ವಯೋವೃದ್ಧರ ಮಹಿಳೆಯರಲ್ಲಿ ಹೆಚ್ಚಾಗಿ ವಿಧವೆಯಾಗಿರುವುದು ಕಾಣುತ್ತವೆ. ಕಾರಣ ಅವರು ಕಡಿಮೆ ವಯಸ್ಸಿನಲ್ಲಿಯೇ ಮದುವೆಯಾಗಿರುವುದರಿಂದ ಪುರುಷನು ವಯಸ್ಸು ಜಾಸ್ತಿ ಇರುವುದರಿಂದ ವಯಸ್ಸಿಗನುಗುಣವಾಗಿ ಏರುಪೇರಾಗುವ ಸಂದರ್ಭದಲ್ಲಿ ಪುರುಷ ಬೇಗ ಸಾವನ್ನಪ್ಪಿದರೆ, ಮಹಿಳೆ ಉಳಿಯುವ ಸಂದರ್ಭವಿರುತ್ತದೆ. ಮನೆಯ ಆಶ್ರಯದಲ್ಲಿಯೇ ಬೆಳೆಯಬೇಕಾದ ವೃದ್ಧ ಮಹಿಳೆಯರು ಕೆಲವು ಸಂದರ್ಭದಲ್ಲಿ ಕುಟುಂಬದಲ್ಲಿ ಹೆಣ್ಣು ಹೆಣ್ಣಿಗೆ ಶತ್ರುವಾಗುವ ಸಂದರ್ಭಗಳು ಇರುತ್ತವೆ. ವೃದ್ಧ ಮಹಿಳೆಯರನ್ನು ಕುಟುಂಬದ ಭಾರದಂತೆ, ಆರ್ಥಿಕ ಪರಿಸ್ಥಿತಿಗಳು ದೂಗಿಸಲು ವಿನಾಕಾರಣ ಕೆಲವು

ಸಂದರ್ಭಗಳಲ್ಲಿ ದ್ವೇಷಗಳಿಗೂ ಎಡೆಮಾಡಿಕೊಡುತ್ತವೆ. ಉತ್ತಮ ಪರಿಸರದ ಕುಟುಂಬದಲ್ಲಿ ಅನುಕೂಲವಿದ್ದಾಗ ಪರಿಸರಕ್ಕನುಗುಣವಾಗಿ ಹೋಲಿಕೆಯಲ್ಲಿ ವ್ಯತ್ಯಾಸಗಳಿರುತ್ತವೆ. ಹಾಗೆಯೇ ಮೊಮ್ಮಕಳ ಜೊತೆ ನಕ್ಕುನಲಿಯುವುದು ಇವರ ಆಕಾಂಕ್ಷೆಗಳಿರುತ್ತವೆ. ಪ್ರತಿ ಕುಟುಂಬದಲ್ಲಿ ಈ ಚಟುವಟಿಕೆಗಳನ್ನು ಕಾಡುತ್ತವೆ. ವಯೋವೃದ್ಧರು ನಮ್ಮನ್ನು ಬೆಳೆಸಿ ಪೋಷಿಸಿ, ಜಗತ್ತನ್ನು ಅರಿಯಲು ಅಣಿ ಮಾಡಿದ ಮೂರ್ತಿಯೆಂದು ಭಾವಿಸಬೇಕಾದುದು ಅಗತ್ಯವಾದುದು. ಅವರ ಅಂತ್ಯದ ಸಂದರ್ಭದಲ್ಲಿ ಸಂಕಷ್ಟಗಳ ಕೊಟ್ಟಾಗ ತೀವ್ರವಾಗಿ ಒತ್ತಡಕ್ಕೊಳಗಾಗುತ್ತಾರೆ.

ಈ ತಾರತಮ್ಯದ ಭೇಧಗಳು ಪುರುಷ ಚಿಂತನೆಯು ವೃದ್ಧಾಪ್ಯದ ಹಂತದಲ್ಲಿಯೂ ಒಳಪಡುತ್ತದೆ. ಮನು ಹೇಳಿದ ಹಾಗೆ ಮಹಿಳೆಯ ಬಾಲ್ಯದಲ್ಲಿ ತಂದೆಯ ಆಶ್ರಯದಲ್ಲಿ ಹರೆಯದರಲ್ಲಿ ಗಂಡನ ಆಶ್ರಯದಲ್ಲಿ ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿ ಬದುಕುವ ಅವಳಿಗೆ ಸ್ವತಂತ್ರವಿಲ್ಲವೆಂದು ಸಾರಿದ ಅಂದಿನ ಮನುವಿನ ಚಿಂತನೆ ಇಂದೂ ಸಹ ಮುಂದುವರಿದಿದೆ ಎಂದರೆ ಎಷ್ಟೊಂದು ಬೆರೆತು ಹೋಗಿರಬೇಕು. ಈ ಪರಿಸ್ಥಿತಿಗಳನ್ನು ಅರ್ಥೈಸಿಕೊಂಡರೆ ಅರ್ಥವಾಗುತ್ತದೆ. ಎರಡನೇ ದರ್ಜೆಯ ಬದುಕು ಮಹಿಳೆಗೆ ಮಾತ್ರ ನಿರ್ಮಿಸಿದ ಸಾಮಾಜಿಕ ಸಂಸ್ಥೆಗಳು ತಾರತಮ್ಯದಿಂದ ಪಕ್ಕಕ್ಕೆ ಸರಿಸಿವೆ. ಹುಟ್ಟಿನಿಂದಲೇ ಹುಟ್ಟಿಕೊಂಡ ಲಿಂಗ ತಾರತಮ್ಯವು ವಯೋವೃದ್ಧ ವಯಸ್ಸಿನವರೆಗೆ ಮುಂದುವರಿಯುತ್ತಿರುವುದು ಗೋಚರಿಸುವ ವಿಷಯವಾಗಿದೆ.

ಅಡಿಟಿಪ್ಪಣಿಗಳು

೧. ಡಾ. ಸಿ.ಆರ್. ಚಂದ್ರಶೇಖರ, ಹದಿಹರೆಯ ಮಾನಸಿಕ ಸಮಸ್ಯೆಗಳು, ಪುಟ: ೯, ೧೦

೨. ಅದೇ. ಪುಟ: ೧೨, ೧೩, ೧೪

೩. ಡಾ. ಎಚ್.ಎಸ್. ಶ್ರೀಮತಿ, ಚಹರೆ, ಪುಟ: ೫೯

೪. ಡಾ. ಸಿ.ಆರ್. ಚಂದ್ರಶೇಖರ, ಹದಿಹರೆಯದವರ ಮಾನಸಿಕ ಸಮಸ್ಯೆಗಳು, ಪುಟ: ೧೬

೫. ಎ.ಎಸ್. ಧರಣೇಂದ್ರಯ, ವಿಕಾಸ ಮನೋವಿಜ್ಞಾನ, ಪುಟ: ೨೪೧

❑

ಅಧ್ಯಾಯ ೫

ಆಧುನಿಕ ಪರಿಸ್ಥಿತಿಯಲ್ಲಿನ ಬದಲಾವಣೆ

ಆಧುನಿಕ ಪರಿಸ್ಥಿತಿಯಲ್ಲಿನ ಬದಲಾವಣೆ

ಬದಲಾವಣೆಯು ಪ್ರಕೃತಿಯಲ್ಲಿ ಒಂದು ವಿಶಿಷ್ಟಕ್ರಿಯೆ. ಹಾಗೆಯೇ ಮಾನವರ ನಡುವಳಿಕೆ, ರೂಢಿಗಳು ಸಹ ಬದಾಲವಣೆಯ ಸ್ಥಾನವನ್ನು ಪಡೆದುಕೊಳ್ಳುತ್ತವೆ. ಬದಲಾವಣೆಯು ಮೂಲ ಮಾನವರ ಅಶಿಸ್ತನ್ನು ಶಿಸ್ತಾಗಿ ಪರಿವರ್ತಿತಗೊಳ್ಳುವ ಅಥವಾ ಹಳೆಯದನ್ನು ಹೊಸದಾಗಿ ರೂಪಿಸುವ ಅಥವಾ ಹೊಂದಿಕೊಳ್ಳುವ ಕ್ರಮಗಳೇ ಆಗಿದೆ. ಜಗತ್ತು ಎಷ್ಟೊಂದು ಮುಂಚೂಣಿಯಲ್ಲಿ ನಡೆಯುತ್ತಿದೆ ಅಂದರೆ ಮನೆಯಲ್ಲಿಯೇ ಕುಳಿತು ಪ್ರಪಂಚದ ಸ್ಥಿತಿಗತಿಗಳನ್ನು ಅಧ್ಯೆಸಿಕೊಳ್ಳುವಷ್ಟು ಮಾಧ್ಯಮ ತಂತ್ರಜ್ಞಾನ, ವಿಜ್ಞಾನ ಮುಂದುವರಿಯುತ್ತಿವೆ. ಹಾಗೆಯೇ ಸಮಾಜದಲ್ಲಿ ಬದುಕಿ ಬಾಳುವ ಮಾನವರ ನಡುವಳಿಕೆಗಳು ಹೊಸ ಮಾದರಿಯ ರೂಪ ತಾಳುತ್ತ ಸಾಗುತ್ತಿವೆ.

ಸ್ತ್ರೀ ಪುರುಷರಿಗೆ ಸಂಬಂಧಿಸಿದ ಸಾಮಾಜಿಕ, ಕೌಟುಂಬಿಕ, ಶೈಕ್ಷಣಿಕ ಇನ್ನೂ ವಿವಿಧ ವಲಯಗಳಲ್ಲಿ ಹೊಸ ಮಾದರಿಯ ಸಿದ್ಧಾಂತಗಳು ಸ್ಥಾಪಿತಗೊಳ್ಳುತ್ತಾ ಸಾಗುತ್ತಿವೆ. ಇದು ಅವಶ್ಯವು ಆಗಿದೆ. ಕತ್ತಲಿನಿಂದ ಬೆಳಕಿಗೆ ಬರುವುದು ಯಾರಿಗೆ ತಾನೆ ಬೇಡ ಮಹಿಳೆಯರಿಗಂತೂ ಇದು ಉತ್ತಮ ಭವಿಷ್ಯ ಸ್ವಾವಲಂಬಿ ಜೀವನಕ್ಕೆ ಸಹಕಾರಿಯಾಗುತ್ತದೆ.

ಹಳ್ಳಿಗಳು ಗ್ರಾಮಗಳಾಗುತ್ತಿವೆ. ಗ್ರಾಮಗಳು ಪಟ್ಟಣಗಳಾಗುತ್ತಿವೆ. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರು ಬೇರೆ ಮಾದರಿಯಲ್ಲಿ ಪರಿವರ್ತನೆಗೊಳ್ಳುವುದು ಸಹಜ ವ್ಯವಸ್ಥೆಯೇ ಸರಿ. ಅದನ್ನು ಇನ್ನು ಉತ್ತಮ ಪಡಿಸಿಕೊಳ್ಳಲು ಪ್ರಯತ್ನಿಸಿದರೆ ಬದಲಾವಣೆಯ ಪರಿಸ್ಥಿತಿಗೆ ನವ ಮಾದರಿಯಾಗಿ ಹೆಚ್ಚಿನ ತಿಳುವಳಿಕೆಯು ಅನುಕೂಲಕರವಾಗಿ ಪರಿಣಾಮ ಬೀಳುತ್ತದೆ.

ಹೆಣ್ಣು ಗಂಡು ಮಕ್ಕಳ ನಡುವೆ, ಹೆಣ್ಣಿನ ಕಷ್ಟ ಸಂಕೋಲೆಗಳ ಸೂತಕಗಳಾಗಿ ಪ್ರಾಚೀನ ಕಾಲದಿಂದಲೂ ಪರಿಣಾಮ ಬೀರಿದವು. ಇತ್ತೀಚಿಗೆ ಪರಿವರ್ತನೆಗಳಲ್ಲಿ ಅಂದಿನ ಪದ್ಧತಿಗಳು ಮಾಯವಾಗಿ ಮಹಿಳೆಯು ನೆಮ್ಮದಿಯ ನಿಟ್ಟುಸಿರು ಬಿಡುವ ಹಾಗಾಗಿದೆ. ಅದಕ್ಕಾಗಿ ಅವಿರತ ಚಳುವಳಿ, ಹೋರಾಟ, ಬಹುಪ್ರಧಾನವಾಗಿ ಮಾಡಿದಾಗ ಶತ ಶತಮಾನಗಳಿಂದ ಸಮಸ್ಯೆ ಮುಕ್ತಗೊಳಿಸಲು ಸಾಧ್ಯವಾಯಿತು. ಅಂದಿನ ಸಮಸ್ಯೆಗಳಿಗಾಗಿ ನೆಮ್ಮದಿಯ ನಿಟ್ಟುಸಿರು ಬಿಟ್ಟರೆ ಮುಗಿಯಲಿಲ್ಲ. ಮಹಿಳೆಗಾಗಿ ಹಲವಾರು ಕಷ್ಟಕೋಟಲೆಗಳು ಜೆರೆತು ಭದ್ರವಾಗಿ ಬಿಟ್ಟಿದ್ದವು. ಒಂದು ಸಮಸ್ಯೆಗಳು ಅಂತ್ಯ ಕಂಡರೆ ಮತ್ತೊಂದು ಸಮಸ್ಯೆ ಉದ್ಭವವಾಗುವ ಹೆಣ್ಣಿನ ಪಾಲಿಗೆ ಇವೆ. ಉದಾ: ಪ್ರಸ್ತುತದಲ್ಲಿ ಭ್ರೂಣ ಪರೀಕ್ಷೆಯ ಹೆಣ್ಣಿನ ಭಕ್ಷಣೆಗಾಗಿ ನೆಲೆ ನಿಂತಿವೆ. ಅತ್ಯಾಚಾರ, ದೌರ್ಜನ್ಯ, ಸಮಸ್ಯೆಗಳು ಮಹಿಳೆಗೆ ಕೇಂದ್ರಬಿಂದುವಾಗಿ ಪರಿಣಮಿಸಿವೆ.

ಸಮಾಜೀಕರಣ ತರಬೇತಿಗಳು ಮಕ್ಕಳಿಗೆ ಪ್ರಚೋದಿಸುವ, ಸಮಾಜ ಬಾಹಿರ ಕೃತ್ಯಗಳಾಗಿಯೂ ಮುಂದುವರಿಯುತ್ತಿವೆ. ಇದರಿಂದ ಹಲವಾರು ಸಮಸ್ಯೆಗಳಾಗಿ ಉದ್ಭವಿಸುವುದರಿಂದ ಸಮಾಜದಲ್ಲಿ ರೋಗ ರುಜುನಿಗಳಿಂದ ನರಳಬೇಕಾಗುತ್ತದೆ ಎಂದರೆ ತಪ್ಪಾಗದು.

ಪ್ರಸ್ತುತ ಪರಿಸ್ಥಿತಿಯಲ್ಲಿ ಮಹಿಳೆಯರು ಬುದ್ಧಿವಂತರು ಚಾಣಕ್ಯರು, ಮೇಧಾವಿಗಳಾಗಿ ಹೊರಹೊಮ್ಮುತ್ತಿದ್ದಾರೆ. ಪುರುಷರಿಗಿಂತ ಕಡಿಮೆವಿಲ್ಲವೆನ್ನುವುದು ಮಾಡಿತೋರಿಸಿದವರಿದ್ದಾರೆ. ಅವರಿಗೆ, ಕುಟುಂಬದ ಒಳ್ಳೆಯ ಪ್ರತಿಕ್ರಿಯೆಗಳು ಸದಾ ಬೆಂಬಲವಾಗಿದ್ದ ಕಾರಣದಿಂದ ಮುಂದುವರಿಕೆಯ ಸ್ಥಾನಗಳು ಗಿಟ್ಟಿಸಿಕೊಂಡಿದ್ದಾರೆ. ಇದು ಮಹಿಳಾ ಲೋಕದ ಚಿಂತನೆಗೆ ಅವಶ್ಯವು, ಅಗತ್ಯವು ಸಹ ಇದೆ. ಇನ್ನೂ ಹಲವಾರು ಕುಟುಂಬಗಳು ಮಹಿಳೆಯರನ್ನು ಚಿಕ್ಕಂದಿನಿಂದಲೇ ಕಡೆಗಣಿಸಿರುವುದರಿಂದ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸಲು ಒಳ್ಳೆಯ ಭವಿಷ್ಯವನ್ನು ಭದ್ರಪಡಿಸಲು ತೊಂದರೆಯಂತೂ ಖಂಡಿತ ಆಗುತ್ತದೆ

ಈ ಮಹಿಳೆಯರ ಜೀವನ ಉತ್ತಮ ಪಡಿಸುವ ಚಿಂತನೆಯಲ್ಲಿ ಹದಿಹರೆಯದ ವಯಸ್ಸು. ಪ್ರಮುಖವಾದುದಾಗಿದೆ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಮಾನಸಿಕವಾಗಿ ಉತ್ತಮ ತಳಪಾಯವನ್ನು ರೂಪಿಸಿಕೊಳ್ಳಬಹುದು. ಈ ಆಧುನಿಕ ಪರಿಸ್ಥಿತಿಗಳಲ್ಲಿ ಹದಿಹರೆಯದವರು ಎತ್ತ ಸಾಗುತ್ತಿದ್ದಾರೆ. ಎಂದಾಗ ಮಹಿಳೆಯ ಮುಂದುವರಿಕೆ ಸಹಜವಾಗಿ ಗೋಚರಿಸುತ್ತದೆ. ಕುಟುಂಬದ ಪ್ರೋತ್ಸಾಹಗಳು ಸಹ ಬೆಂಬಲವಾಗಿ ನಿಲ್ಲುತ್ತಿರುವುದು ಕಾಣುತ್ತೇವೆ. ಬೆಂಬಲದ ಹಿನ್ನೆಲೆಯಲ್ಲಿಯೇ ಭಿನ್ನ ಮಾದರಿಯ ಶೋಷಣೆಗಳು ಸಹ ಉದ್ಭವವಾಗುತ್ತಿವೆ. ಅವುಗಳನ್ನು ಎದುರಿಸಲು ಮತ್ತೊಂದು ಅಸ್ತ್ರವನ್ನು ಉಪಯೋಗಿಸುವುದು 'ಸ್ತ್ರೀವಾದಿ'ಗಳೇ ಅವಶ್ಯಕವಾಗುತ್ತದೆ.

ಕುಟುಂಬಗಳು ಆಧುನಿಕ ಮಾದರಿಯ ಎಲ್ಲಾ ವಿಧಾನಗಳು ಅನುಸರಿಸುತ್ತಿವೆ. ನಡುವಳಿಕೆಗಳು, ರೂಢಿಗಳು, ಭಿನ್ನ ಮಾದರಿಯ ಬದುಕು, ಎಲ್ಲದರಲ್ಲೂ ಬದಲಾವಣೆ ಪಡೆದುಕೊಳ್ಳುತ್ತಿವೆ. ಸ್ತ್ರೀಯರಿಗೆ

ಉತ್ತಮ ಸ್ಥಾನಮಾನಗಳು ದೊರೆಯುತ್ತಿವೆ. ತಮ್ಮ ಅರಿವಿನ ಅಸ್ತ್ರವನ್ನು ಪ್ರಯೋಗಿಸುವ ಮಾದರಿಯಾಗಿ ಬುದ್ಧಿಯು ವಿಕಾಸಗೊಳ್ಳುತ್ತಾ ಸಾಗುತ್ತಿದೆ. ಮಹಿಳೆಯರಿಗೆ ಸಮಾಜದಲ್ಲಿರುವ ರೂಢಿ ಪದ್ಧತಿಗಳು ಗಾದೆಯು ಇನ್ನಿತರ ಅಪಕಲ್ಪಿತ ಮಾದರಿಗಳು 'ಹೆಣ್ಣಿನ ಬುದ್ಧಿ ಮೊಣಕಾಲು ಕೆಳಗೆ' ಎನ್ನುವ ಸಂಪ್ರದಾಯದ ಕುಹುಕಗಳು ಆ ಗಾಥೆಗಳಿಗೆ ತಕ್ಕದಾಗಿ ಉದಾಹರಣೆ ಸಹಿತ ವಿವರಿಸಿ ಹೇಳುವಷ್ಟು ಮಹಿಳೆಯರು ಗೋಚರಿಸುತ್ತಿದ್ದಾರೆ. ಇದರಿಂದ ಪುರುಷರ ವರ್ತನೆಗಳು ಸಹ ಬದಲಾವಣೆ ಹೊಂದಬೇಕಾದ ಅನಿವಾರ್ಯತೆಗಳು ರೂಪಪಡೆದುಕೊಳ್ಳತೊಡಗಿವೆ.

ಮಹಿಳೆಯ ಆಧುನಿಕತೆಯ ಬದಲಾವಣೆಯಲ್ಲಿ ಹದಿಹರೆಯವರು ಎದುರಿಸಬೇಕಾದ ಹಲವಾರು ಸಮಸ್ಯೆಗಳು ಉದ್ಭವವಾಗುತ್ತಿವೆ. ಕುಟುಂಬಗಳೇನೋ ಬದಲಾವಣೆ ಹೊಂದುತ್ತಿವೆ. ಆದರೆ ಸೂಕ್ಷ್ಮವಾದ ತಾರತಮ್ಯಗಳು ಶೋಷಣೆಗಳು ನಡೆಯುತ್ತಿವೆ. ಇಬ್ಬಗೆಯಾಗಿ ಕಾರ್ಯ ಜವಾಬ್ದಾರಿಗಳು ಆಧುನಿಕ ಕುಟುಂಬಗಳ ಮೇಲೆ ಹೊರೆಯಾಗುತ್ತಿದೆ. ಇದರಿಂದ ಮಕ್ಕಳ ಪರಿಪೂರ್ಣ ಮನೋಸ್ಥಿತಿಗಳು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಪ್ರೀತಿ ಪ್ರೇಮ ಸಹಕಾರವು ಬಿತ್ತಿ ಬೆಸೆಯ ಬೇಕಾದ ಹಂತ ಹರೆಯದ ವಯಸ್ಸಿನಲ್ಲಿರುವಾಗ ಕುಟುಂಬದ ತಂದೆತಾಯಿಯರು ಹೊರಗಡೆ ಕೆಲಸಕಾರ್ಯದಲ್ಲಿ ಮಗ್ನವಾದಾಗ ಹರೆಯದವರ ಮನೋಸ್ಥಿತಿ, ಅರ್ಥೈಸಿಕೊಳ್ಳಲು ಸಹಕಾರದ ಅಗತ್ಯವು ಮಾಯವಾಗುತ್ತಾ ಸಾಗುತ್ತಿದೆ. ಹರೆಯದವರ ಬದುಕು, ಹೊಸದನ್ನು ಅಪೇಕ್ಷಿಸುವುದರಿಂದ ಸ್ವಂತಿಕೆಯ ಭರವಸೆ ಸ್ಪಷ್ಟವಾಗಿ ಮೂಡಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಕುಟುಂಬದಲ್ಲಿ ಪರಿವರ್ತನೆ ತಿರುವುಗಳಿಗೆ ಉತ್ತಮ ಮಾರ್ಗದರ್ಶನವಿರಬೇಕು. ಇಲ್ಲದಿದ್ದಾಗ ಬದುಕು ಎಡುವುವ ಸಂದರ್ಭವಿರುತ್ತದೆ.

ಕುಟುಂಬದಲ್ಲಿಯ ಒಂದು ಹುಡುಗನನ್ನು ಪ್ರೋತ್ಸಾಹಿಸಿ ಇನ್ನೊಂದು ಹುಡುಗಿಯನ್ನು ನಿರಾಕರಿಸಿದಾಗ ಸಹಜವಾಗಿ ಮಾನಸಿಕ ಒತ್ತಡಕೊಳಗಾಗುವ ಸಂದರ್ಭಗಳಿರುತ್ತವೆ. ಬದಲಾವಣೆ ಹೊಂದುತ್ತಿರುವ ಕುಟುಂಬದಲ್ಲಿಯೂ ಈ ಮಾದರಿಯ ತಾರತಮ್ಯಗಳು ಇವೆ. ಉದಾ: ಒಂದು ಕುಟುಂಬದಲ್ಲಿ ಇಂಜಿನಿಯರಿಂಗ್ ಓದುತ್ತಿರುವ ಹುಡುಗ, ಬಿ.ಎ. ಓದುತ್ತಿರುವ ಹುಡುಗಿ ಇದ್ದಾರೆ ಎಂದಿಟ್ಟುಕೊಳ್ಳೋಣ. ಇಂಜಿನಿಯರಿಂಗ ಓದುತ್ತಿರುವವನಿಗಾಗಿ ಹೆಚ್ಚಿನ ಪ್ರಶಂಸೆ ಮೆಚ್ಚುಗೆ ಪ್ರೀತಿ, ಆಧಾರಗಳು ತಂದೆ ತಾಯಿಯರಿಂದ ಜಾಸ್ತಿಯಾಗುತ್ತಿರುವುದು ಕಾಣುತ್ತೇವೆ. ಅದೇ ಬಿ.ಎ. ಓದುತ್ತಿರುವ ಹುಡುಗಿಗೆ ಕನಿಷ್ಟವೆನ್ನುವ ಹಾಗೆ ಪ್ರೀತಿ ಪ್ರೇಮ ಸಹಕಾರದಲ್ಲಿ ಹೆಚ್ಚು ಕಡಿಮೆ ಆಗಿರತಕ್ಕಂತಹ ಸಂದರ್ಭಗಳಲ್ಲಿ ಕುಟುಂಬಕ್ಕೆ ಬಂದು ಹೋಗುತ್ತಿರುವ ಅಥಿತಿಗಳಿಗೆ ಇಂಜಿನಿಯರಿಂಗ್ ಹುಡುಗನ ಪ್ರಶಂಸೆಗಳೇ ತಂತೆತಾಯಿ ಎತ್ತಿ ಹಿಡಿಯುತ್ತಾ ಇರುವುದು ಕಾಣುತ್ತಿರುತ್ತವೆ. ತಮ್ಮ ಹೆಮ್ಮೆಯ ಸಂಕೇತಗೋಸ್ಕರ ಹುಡುಗನ ಪರವಾಗಿ ಹೇಳಿಕೆ ಭವಿಷ್ಯದ ಬಗ್ಗೆ ಚಿಂತನೆ ಚರ್ಚೆಗಳಲ್ಲಿ ತೊಡಗಿದಾಗ ಬಿ.ಎಂ. ಓದುತ್ತಿರುವ ಹುಡುಗಿಗೆ ಸಹಜವಾಗಿ ಮಾನಸಿಕ

ಒತ್ತಡಗಳಾಗುತ್ತವೆ. ಇಂತಹ ಘಟನೆಗಳು ಸರ್ವೆ ಸಾಮಾನ್ಯವಾಗಿ ಆಧುನಿಕ ಕುಟುಂಬಗಳಲ್ಲಿ ಕಂಡುಬರುತ್ತವೆ. ಶಿಕ್ಷಣವು ಯಾವುದು ಕನಿಷ್ಟವಲ್ಲ ಗರಿಷ್ಟವಲ್ಲ. ಅವುಗಳ ಮಾದರಿಯಲ್ಲಿ ಪ್ರಾಧಾನ್ಯತೆಯು ಪಡೆದುಕೊಳ್ಳುತ್ತದೆ. ಅದನ್ನೇ ಕನಿಷ್ಠ ಗರಿಷ್ಠವೆನ್ನುವ ಕಲ್ಪನೆಗಳು ಬಿತ್ತಿ ಬೆಸೆದಾಗ ಸಹಜವಾಗಿ ಹರಿಹರೆಯದ ವಯಸ್ಸಿನ ಮೇಲೆ ಪರಿಣಾಮಗಳಾಗುತ್ತವೆ. ತಂದೆತಾಯಿಯರ ತಿರಸ್ಕಾರದ ನುಡಿಗಳು ಹೊರಹೊಮ್ಮಿದಾಗ ಸೂಕ್ಷ್ಮ ತಾರತಮ್ಯವು ಆಧುನಿಕ ಕುಟುಂಬಗಳಲ್ಲಿ ಹುಟ್ಟಿಕೊಂಡಿತೆಂದು ಅರ್ಥ.

ಹದಿಹರೆಯದ ಮನಸ್ಸು ಸೂಕ್ಷ್ಮವಾಗಿರುವುದರಿಂದ ಅವರು ಬೇಗನೆ ಅಪಕಲ್ಪಿತ ಭಾವನೆಗಳಿಗೆ ಅಂಟಿಕೊಳ್ಳುವ ಸಂದರ್ಭವಿರುತ್ತದೆ. ಅದರಿಂದ ವಿಶೇಷ ಕಾಳಜಿಯಿಂದ ಕಾಯಬೇಕಾದದ್ದು ಅಷ್ಟೇ ಅವಶ್ಯವಿದೆ. "ಆಧುನಿಕ ಕುಟುಂಬಗಳು ಪ್ರಾಚೀನ ಕುಟುಂಬಗಳ ಛಿದ್ರೀಕರಣದಿಂದ ಹುಟ್ಟಿಕೊಂಡಿದ್ದವುಗಳಾಗಿವೆ. ಪ್ರಾಚೀನ ಕುಟುಂಬಗಳಲ್ಲಿಯ ಪ್ರೀತಿ, ಪ್ರೇಮ, ವಾತ್ಸಲ್ಯದ ಸಮಾಜೀಕರಣವು ಇಂದು ಮಾಯವಾಗಿ ಅನ್ಯಮಾರ್ಗದ ತರಬೇತಿಗಳು ಆಧುನಿಕ ಮಾದರಿಗೆ ಹೋಲಿಕೆಯಾಗುವ ಹಾಗೆ ನೀಡುತ್ತಿವೆ. ಆಧುನಿಕತೆಯ ಹೋಲಿಕೆಯಲ್ಲಿ ಸಮಾಜೀಕರಣ ಗೊಳಿಸುವ ಕುಟುಂಬದಿಂದ ನೇರವಾಗಿ ಹೆಣ್ಣಿನ ಮೇಲೆ ಪರಿಣಾಮ ಬೀರುತ್ತಿದೆ. ಹೆಣ್ಣಿನ ಮುಖ್ಯ ನೆಲೆಯ ಮೇಲಾದ ದಾಳಿಯಾದ್ದರಿಂದ ಒಂಟಿತನ, ಅರಕ್ಷತೆ, ಬೇಸರ ಮೊದಲಾದ ಆತಂಕಕ್ಕೆ ಸಿಲುಕಿದ್ದಾಳೆ. ಸಹಜವಾಗಿ ಸಮಾಜೀಕರಿಸುವ ಅಂಗವಾಗಿದ್ದ ಮಹಿಳೆಯು ತನ್ನಲ್ಲೇ ಹುಟ್ಟಿಕೊಳ್ಳುತ್ತಿರುವ ಆತಂಕ, ಬೇಸರ, ಒಂಟಿತನಗಳು ಮಕ್ಕಳಿಗೆ ಭವಿಷ್ಯ ತುಂಬುವ ಸಾಮರ್ಥ್ಯವು ಧಕ್ಕೆ ಉಂಟಾಗುತ್ತಿದೆ."[10] ಇದರಿಂದ ಮಹಿಳೆಯ ಹದಿಹರೆಯದ ವಯಸ್ಸಿನಲ್ಲಿಯೂ ಪರಿಣಾಮ ಬೀರುವ ಅಂಶಗಳಾಗುತ್ತವೆ. ಹದಿಹರೆಯದವರಿಗೆ ಚಟುವಟಿಕೆಯಿಂದ ಪ್ರೀತಿ ಪ್ರೇಮದ ವಾತ್ಸಲ್ಯ ಅಗತ್ಯವಾಗಿರುತ್ತದೆ. ಒಂದು ವೇಳೆ ಆಧರತೆಯ ಮಾರ್ಗದರ್ಶನ ಸಿಗದೇ ಇರುವ ಸಂದರ್ಭದಲ್ಲಿ ಹದಿಹರೆಯದವರನ್ನು ಚಂಚಲತೆಯ ಭಾವನೆಯಿಂದ ಅನ್ಯಮಾರ್ಗಗಳು ಅನುಸರಿಸುವ ಸಂದರ್ಭವಿರುತ್ತದೆ.

ಆಧುನಿಕತೆ ಬದಲಾಗುತ್ತಿದೆ ಹಾಗೆಯೇ ಮಹಿಳೆಯ ಸ್ಥಿತಿ ಉತ್ತಮಗೊಂಡಿತೇ ಎಂಬ ಅರ್ಥವಿಲ್ಲ. ಬದಲಾದ ಸನ್ನಿವೇಶಕ್ಕೆ ಅನುಗುಣವಾಗಿ ಬದಲಾಗುತ್ತಿವೆ. ರೀತಿನೀತಿಗಳು ಹೊಸ ಮಾದರಿಗಳು ಮಹಿಳೆಗೆ ಅನುಕೂಲಗಳು ದೊರೆತ ಹಾಗೆ ಅನಾನುಕೂಲಗಳು ರೂಪ ತಾಳುತ್ತಿವೆ. ಇವುಗಳನ್ನೆಲ್ಲ ಅರಗಿಸಿಕೊಂಡು ಮುಂದೆ ಬರುವುದು ಮಹಿಳೆಯ ಪಾಲಿಗೆ ಒದಗಿಬಿಡುತ್ತದೆ. ಹದಿಹರೆಯದ ವಯಸ್ಸಿನಲ್ಲಿ ಆಧುನಿಕತೆಯ ಪ್ರಭಾವವು ಗಾಢ ಪ್ರಮಾಣದಲ್ಲಿ ಬೀಳುತ್ತಿರುವುದು ಅಷ್ಟೇ ಸತ್ಯವಾಗಿದೆ.

ಮನೆಯಲ್ಲಿಯೆ ಕುಳಿತು ಪ್ರಪಂಚ ವೀಕ್ಷಿಸುವ ಹಾಗೆ ಮಾಧ್ಯಮಗಳು ರೂಪ ತಾಳಿವೆ. ಭಾರತದಲ್ಲಿಯ ಸಂಪ್ರದಾಯಿಕ ಸಂಸ್ಕೃತಿ ಒಡೆಯಲು ಸಹಾಯಕವಾಗುತ್ತಿವೆ. ನಿಜವಾದರೂ ಶೋಷಣೆಯ ಬಲಿಪಶುವಾಗಿ ಅನುಭವಿಸಬೇಕಾದರೂ ಮಹಿಳೆಗೆ ಪಾಶ್ಚಾತ್ಯೀಕರಣದ ಅಶ್ಲೀಲ ಚಿತ್ರಗಳು, ಹಾಡುಗಳು, ಹದಿಹರೆಯದವರನ್ನು

ಅನ್ಯ ಮಾರ್ಗಕ್ಕೆ ಒಯ್ಯಲು ಸಹಾಯಕವಾಗುತ್ತಿವೆ. ಇದರಿಂದ ಸ್ವಕಲ್ಪನೆಯ ಮಾದರಿಯಲ್ಲಿ ಮನಸ್ಸು ಸ್ಥಿರವಾಗಿ ನಿಂತಿರುತ್ತದೆ. ಆಧುನಿಕ ಕುಟುಬದಲ್ಲಿಯ ಆರ್ಥಿಕತೆಯ ಮೂಲ ಬಂಡವಾಳವಾಗಿ ಯೋಚನೆ ಗೈಯುತ್ತಾ ಹೋಗುವುದರಿಂದ ಹದಿಹರೆಯದವರ ಕಡೆ ಅಲಕ್ಷ್ಯದ ಭಾವನೆಯು ಮೂಡುವ ಸಂದರ್ಭಗಳಿರುತ್ತವೆ. ಇಂತಹ ಸಂದರ್ಭದಲ್ಲಿ ಪ್ರೀತಿ ಆರೈಕೆಯ ಆಸರೆ ಸಿಗದೆ ಇರುವ ಸಂದರ್ಭದಲ್ಲಿ, ಅನ್ಯಲಿಂಗದ ಗೆಳತನದ ಸ್ನೇಹದಿಂದ ಪ್ರೀತಿ ಪ್ರೇಮದ ಚಿಗುರು ಹುಟ್ಟಿಕೊಳ್ಳುತ್ತದೆ. ಕೆಲವು ಸಂದರ್ಭಗಳಲ್ಲಿ ಅನ್ಯ ಮಾರ್ಗದಿಂದ ದೈಹಿಕ ಸಂಪರ್ಕವೂ ಬೆಳೆಸಿಕೊಂಡಿರುವ ಸಂದರ್ಭಗಳಿರುತ್ತವೆ. ಸಮಾಜವು ಮೊದಲು ಮಹಿಳೆಗೆ ಕಟ್ಟುನಿಟ್ಟಿನ ಚೌಕಟ್ಟುಗಳಿರುವುದರಿಂದ ಬಹುದೋಷಿಯಾಗಿ ಕಾಣುವುದರಿಂದ ಎಲ್ಲಾ ರೀತಿಯ ಶೋಷಣೆಯ ಮೂಲವು ಮಹಿಳೆಯನ್ನೇ ಕೇಂದ್ರೀಕರಿಸುತ್ತವೆ. ಇದರಿಂದ ಹದಿಹರೆಯದವರನ್ನು ಕುಟುಂಬದಲ್ಲಿ ಒಳ್ಳೆಯ ಮಾರ್ಗದರ್ಶನ ಅಗತ್ಯವಿದೆ.

ಮಾಧ್ಯಮಗಳು ತಮ್ಮ ಸ್ವಾರ್ಥ ಬಂಡವಾಳಗೋಸ್ಕರ ಸಮಾಜದಲ್ಲಿಯ ಯುವಕ ಯುವತಿಯರನ್ನು ದುರ್ಮಾರ್ಗಕ್ಕೆಳೆಯಲು ಕಾರಣವಾಗುತ್ತಿದೆ. ಮಾಧ್ಯಮಗಳಲ್ಲಿ ಹೆಣ್ಣು ಶೋಷಣೆಯ ವಸ್ತುವಾಗಿ ಲಿಂಗ ತಾರತಮ್ಯದ ನೋಟಗಳು ಕಂಡುಬರುತ್ತವೆ. ಧಾರವಾಹಿ ಚಲನಚಿತ್ರಗಳಂತೂ ೨೪ ಗಂಟೆಗಳು ವೀಕ್ಷಿಸುವ ಸೌಲಭ್ಯಗಳಿವೆ. ಅತಿ ಹೆಚ್ಚು ಚಲನಚಿತ್ರಗಳು ಮಹಿಳೆಯ ಶೋಷಣೆಯ ರೂಪವಾಗಿಯೇ ಚಿತ್ರರಿಸುತ್ತವೆ. ಇದರಿಂದ ಹದಿಹರೆಯದ ಹುಡುಗಿಯರು ತರ್ಕಿಸುವ, ತವಕಿಸುವ ಮನಸ್ಸಿರುವುದರಿಂದ ಇಂತಹ ಚಿತ್ರಗಳು ಮನಸ್ಸನ್ನು ಆಧೀನಕ್ಕೆ ರೂಪಿಸಿಬಿಡುತ್ತವೆ.

ಇಂದು ಹಲವಾರು ರೀತಿಯ ಅಶ್ಲೀಲವಾಗಿ ಚಿತ್ರಗಳು ಹೊರಬರುತ್ತಿವೆ. ಮಾಧ್ಯಮಗಳು ಮಹಿಳೆಯರ ಪರವಾಗಿ ಇರುವ ಹಾಗೆ ತೋರುತ್ತವೆ. ಆದರೆ ಅವುಗಳಿಂದ ಬಹಳಷ್ಟು ಶೋಷಣೆ ನಡೆದಿದೆ ಎಂದು ಹೇಳಬಹುದು. ಮಾಧ್ಯಮಗಳು ಆಧುನಿಕತೆಯ ಭರಾಟೆಯಲ್ಲಿ ಮಹಿಳೆಯನ್ನು ತನ್ನ ಕೈಗೊಂಬೆಯನ್ನಾಗಿ ಮಾಡಿಕೊಂಡಿವೆ. ಹಲವಾರು ಕಾರ್ಯಕ್ರಮಗಳು ಮಹಿಳೆಯರ ಪರವಾಗಿ ನಡೆಸುತ್ತಿದ್ದರು. ಅವುಗಳಲ್ಲಿ ತಾರತಮ್ಯದ ದೃಷ್ಟಿಯಿಂದ ತೋರಿಸಲಾಗುತ್ತಿದೆ. ಮಹಿಳೆಯರ ಪರವಾಗಿ ಅಭಿವೃದ್ಧಿ ಕಾರ್ಯಕ್ರಮಗಳು ಪರಿಣಾಮಕಾರಿ ರೀತಿಯಲ್ಲಿ ರೂಪಿಸುತ್ತಿಲ್ಲ. ಮಹಿಳೆಯರನ್ನು ಮನೆ ಅಡುಗೆಯನ್ನು ಹೇಗೆ ಮಾಡಬೇಕು. ಮತ್ತು ಮನೆಯಲ್ಲಿ ಸುಂದರವಾಗಿ ಹೇಗೆ ಇಟ್ಟುಕೊಳ್ಳಬೇಕು ಎಂಬುದರ ಬಗ್ಗೆ ಮಾತ್ರ ಕಾರ್ಯಕ್ರಮಗಳು ನೀಡುತ್ತಿವೆ. ಹೊರತು ಅಭಿವೃದ್ಧಿ ಪರವಲ್ಲ.

ಮಹಿಳೆಯರನ್ನು ಪ್ರತಿಯೊಂದು ಜಾಹಿರಾತುವಿನಲ್ಲಿ ಬಳಸಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಅದು ಯಾವುದೇ ಆಗರಲಿ ಅದಕ್ಕೆ ಮಹಿಳೆನೇ ಜಾಹಿರಾತು ನೀಡಬೇಕು. ಮಹಿಳೆಯರನ್ನು ಕೋಮಲ ಮೃದುವಾಗಿ ವರ್ತಿಸುವಂತೆ ಪ್ರಕಟಗೊಳಿಸುತ್ತವೆ. ಪುರುಷರದು ಶಕ್ತಿ ಸಾಮರ್ಥ್ಯ ಬಲಿಷ್ಠದ ಹಾಗೆ ವರ್ತಿಸಲು ಪ್ರೇರಣೆಯು

ಅಡಗಿದೆ. ಇದು ಲಿಂಗ ತಾರತಮ್ಯದ ನೋಟಗಳೇ ಆಗಿವೆ. ಇದರಿಂದ ಹದಿಹರೆಯದವರ ವಯಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಯಾಕೆಂದರೆ ದೈಹಿಕ ಮಾನಸಿಕ ಬದಲಾವಣೆಗಳಾಗುವುದು ಈ ವಯಸ್ಸಿನಲ್ಲಿ ಹೆಚ್ಚು ಒಳ್ಳೆಯ ವಿಚಾರಗಳಿಂದ ಬುದ್ಧಿಯು ವಿಕಾಸಗೊಳ್ಳುತ್ತದೆ. ನಿಜವಾದರೂ ಅದು ಕಡಿಮೆ ಪ್ರಮಾಣದಾಗಿದೆ. ಮಾಧ್ಯಮಗಳಿಂದ ಮಹಿಳೆಯರಿಗೆ ಕೆಲವು ಉಪಯುಕ್ತ ಮಾದರಿಯು ಆಗುತ್ತದೆ. ಧೈರ್ಯವಾಗಿ ಮಾತನಾಡುವ ಸ್ಪರ್ದಿಸುವ ಹೊಸ ಬದಲಾವಣೆಗೆ ಸ್ಪಂಧಿಸುವ ವಿಧಾನಗಳು ದೊರೆಯುವುದು ನಿಜವಾಗಿದೆ. ಅದು ಗಾಢ ಪ್ರಮಾಣವಾಗಿ ಇನ್ನೂ ಸಾಗಿದಾಗ ಮಹಿಳೆಯು ಸ್ಥೈರ್ಯ, ಸ್ಥಾನಮಾನಗಳನ್ನು ತುಂಬಲು ಸಹಾಯಕಾರಿಯಾಗಿರುತ್ತದೆ.

ಮಾಧ್ಯಮಗಳಿಂದ ಅನೌಪಚಾರಿಕ ಶಿಕ್ಷಣವು ದೊರೆಯುತ್ತದೆ. ಹದಿಹರೆಯದವರಿಗೆ ಶಿಕ್ಷಣದ ಅವಶ್ಯಕತೆಯು ಅಗತ್ಯವಾಗಿದ್ದರೂ ಲಿಂಗ ತಾರತಮ್ಯದ ನೋಟಗಳು ಶಿಕ್ಷಣ ಕ್ಷೇತ್ರದ ಪಠ್ಯಕ್ರಮದಲ್ಲಿ ಇದ್ದವು. ಆಧುನಿಕ ಮಹಿಳೆಯರನ್ನು ಹೆಚ್ಚಾಗಿ ತಂತ್ರಜ್ಞಾನ, ಕಂಪ್ಯೂಟರ್‌ದಂತಹ ಶಿಕ್ಷಣಕ್ಕೆ ಆದ್ಯತೆ ಜಾಸ್ತಿಯಾಗುತ್ತದೆ. ಸೂಕ್ಷ್ಮವಾದ ಕಾರ್ಯಕ್ಷೇತ್ರವೇ ಎಂದು ಗುರುತಿಸುವ ಈ ಶಿಕ್ಷಣಕ್ಕೆ ನಗರಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪ್ರೋತ್ಸಾಹಿಸುತ್ತಿವೆ. ಇನ್ನಿತರ ವಲಯಗಳು ಇತ್ತೀಚಿಗೆ ಸ್ಥಾನಗಳು ಪಡೆದುಕೊಳ್ಳುತ್ತಿವೆ.

ಆಧುನಿಕ ಶಿಕ್ಷಣವು ಪ್ರಗತಿಯ ಹಂತದಲ್ಲಿ ಸಾಗುತ್ತಿದೆ. ಆದರೂ ಕಾಲೇಜು ಹಂತಗಳಂತಹ ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಟಪಾಠಗಳು ವಿಭಿನ್ನ ರೀತಿಯ ತಾರತಮ್ಯವು ವ್ಯಕ್ತವಾಗುತ್ತದೆ. ಹುಡುಗಿಯರ ಆಟಗಳೇ ಬೇರೆ ಹುಡುಗರ ಆಟಗಳೇ ಬೇರೆ ಮಾದರಿಯಾಗಿ ಆಡಿಸುವುದರಿಂದ ತಾರತಮ್ಯಗಳು ಹುಟ್ಟು ಹಾಕಿದ ಹಾಗೆ. ಮುಕ್ತವಾಗಿ ಮಾತನಾಡುವ ವ್ಯವಸ್ಥೆ ಗಾಢ ಪ್ರಮಾಣದಾಗಿರುವುದಿಲ್ಲ. ಹರೆಯದವರ ಬುದ್ಧಿಯು ವಿಕಾಸ ಹಂತದಲ್ಲಿರುವುದರಿಂದ ಚಂಚಲತೆಯ ಮನಸ್ಸು ಗಾಢ ಪ್ರಮಾಣದಾಗಿರುತ್ತದೆ. ಹುಡುಗರ ಅಪಹಾಸ್ಯಗಳು ಹುಡುಗಿಯರ ಮೇಲೆ ಪರಿಣಾಮ ಬೀಳುತ್ತಿರುತ್ತವೆ. ಹುಡುಗರು ದುರ್ಮಾಗದ ಹಾಗೆ ವರ್ತಿಸಿದರೆ ನಡೆಯುತ್ತದೆ. ಹುಡುಗಿ ಶೈಕ್ಷಣಿಕ ವಿಷಯದ ಬಗ್ಗೆ ಚರ್ಚಿಸುತ್ತಿದ್ದರೂ ತಪ್ಪು ಕಲ್ಪಿತ ಹಚ್ಚುವ ಪರಿಸರವು ಇರುತ್ತದೆ.

ಈ ಹಂತದ ಶಿಕ್ಷಣದಿಂದ ಬಹುಪ್ರಧಾನವಾಗಿ ಹದಿಹರೆಯದ ವ್ಯಕ್ತಿತ್ವ ಉತ್ತಮಗೊಳ್ಳುತ್ತದೆ. ಶಿಕ್ಷಣವು ದೈಹಿಕವಾಗಿ ಸಂಬಂಧಿಸಿದ ಚಿಂತನೆಗಳನ್ನು ಬಿತ್ತರಿಸುವುದಿಲ್ಲ. ಹದಿಹರೆಯದ ಹುಡುಗಿಯರು ದೈಹಿಕ ಬದಲಾವಣೆಯ ಜೈವಿಕ ಅವಸ್ಥೆಯನ್ನು ಭಯಮುಕ್ತಳಾಗಿ ಸ್ವಾಗತಿಸುವಂತೆ ಲೈಂಗಿಕ ಶಿಕ್ಷಣವು ಆಕೆಗೆ ಬೇಕಾಗಿದೆ. ಈಗಿರುವ ರೂಢಿ ಸಂಪ್ರದಾಯದ ಶಿಕ್ಷಣವು ಹೆಣ್ಣುಮಕ್ಕಳನ್ನು ಸಾಮಾಜಿಕ ಚಿಂತನೆಯಲ್ಲಿ ಹೆಣ್ಣಿನ ಶೀಲವನ್ನು ರಕ್ಷಿಸುವ ಕಾರ್ಯಕ್ರಮದಂತಿದೆ. ಹೆಣ್ಣು ಹೆಣ್ಣಾಗಿ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವಂತಹ ತರಬೇತಿಗಳು, ಸಮಾಜದಲ್ಲಿ ಇವೆ. ಅದನ್ನು ಮುಕ್ತವಾಗಿ ಸ್ವಾಗತಿಸಿ, ಸ್ವೀಕರಿಸಿ ವಿಶಿಷ್ಟ ಶಕ್ತಿಯನ್ನು ಗುರುತಿಸಿ

ತಿಳುವಳಿಕೆ ನೀಡಬೇಕಾದರೂ ಅಗತ್ಯವಾಗಿದೆ. ಆದರೆ ಸಮಾಜದಲ್ಲಿ ರೂಪಿತವಾಗಿರುವ ಮಾದರಿಯ ಲಿಂಗ ತಾರತಮ್ಯದಲ್ಲಿ ಬೆಳವಣಿಗೆ ಕಂಡಾಗ ಇಂತಹ ಶಿಕ್ಷಣ ಪ್ರಜ್ಞಾಪೂರ್ವಕವಾಗಿ ಬಿತ್ತರಿಸಲು ಹಿಂದೇಟು ಹಾಕುತ್ತವೆ. ಅಮೇರಿಕಾದಂತಹ ದೇಶದಲ್ಲಿ ಮುಕ್ತವಾಗಿ ಲೈಂಗಿಕ ಶಿಕ್ಷಣದ ಬಗ್ಗೆ ಸ್ತ್ರೀಯರ ವಿಶಿಷ್ಟ ಶಕ್ತಿಯ ಬಗ್ಗೆ ಶಿಕ್ಷಣ ತರಬೇತಿಗಳು ಜನ್ಮತಾಳಿವೆ. ನಮ್ಮ ಭಾರತಕ್ಕೆ ಹೋಲಿಸಿದರೆ ತುಂಬಾ ಆಳವಾಗಿರುವ ಜಾಡ್ಯತೆಯ ಬೇರು ಬೆರೆತಿದೆ ಎಂದರೆ ತಪ್ಪಿಲ್ಲ.

ಅಡಿಟಿಪ್ಪಣಿಗಳು

೧. ಡಾ. ಎಚ್.ಎಸ್. ಶ್ರೀಮತಿ, ಚಹರೆ, ಪುಟ: ೪೪

೨. ಡಾ. ಎಚ್.ಎಸ್. ಶ್ರೀಮತಿ, ಗರ್ಭಾಶಯ ಮಹಿಳೆಯ ಶಕ್ತಿಕೇಂದ್ರ, ಪುಟ: ೪೪

❑

ಅಧ್ಯಾಯ ೬

ಸಮಾಜೀಕರಣ 'ಸ್ತ್ರೀವಾದಿ' ದೃಷ್ಟಿಕೋನ

ಸಮಾಜೀಕರಣ 'ಸ್ತ್ರೀವಾದಿ' ದೃಷ್ಟಿಕೋನ

ಸಮಾಜೀಕರಣವು ಮಾನವರ ಮನುಷ್ಯತ್ವದ ಬಗ್ಗೆ ಅರಿವು ಮೂಡಿಸುವ ಸಾಮಾಜಿಕ ಪ್ರಕ್ರಿಯೆಯಾಗಿದೆ. ಮಾನವರ ಪ್ರತಿ ಚಟುವಟಿಕೆಯ ಅನುಗುಣವಾಗಿ ನಡುವಳಿಕೆಗಳನ್ನು ಕಲಿಸಿಕೊಡುವ ಮಾದರಿಯೂ ಆಗಿದೆ. ಅದು ಬಹು ಪ್ರಧಾನವಾಗಿ ಪುರುಷ ಪ್ರಾಧಾನ್ಯ ಅಂಶಗಳನ್ನು ಚಿತ್ತರಿಸುವ ಸೂಚಿಯಾಗಿ ಕಾರ್ಯವೆಸಗುತ್ತಿದೆ ಎನ್ನಬಹುದು.

ಮಹಿಳಾ ಲೋಕದ ಗ್ರಹಿಕೆಯನ್ನು ನಿರಾಕರಣೆಯ ನಿರ್ಣಯವನ್ನು ಪೋಷಿಸುತ್ತಿದೆ. ಲಿಂಗತಾರತಮ್ಯದ ಬೆಳವಣಿಗೆಯಿಂದಲೇ ಮಹಿಳೆಯನ್ನು ಎರಡನೆಯ ದರ್ಜೆಯಾಗಿ ಪ್ರತಿರೂಪಿಸಲಾಗಿದೆ. ಈ ತಾರತಮ್ಯಗಳಿಂದ ಸಮಾಜದಲ್ಲಿ ಅಸಮಾನತೆ ಸೃಷ್ಟಿಯಾಗಿ ಏಣಿ ಶ್ರೇಣಿ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತದೆ. ಹೆಣ್ಣು ಎಂದಾಕ್ಷಣ ಉದಾಸೀನ ತೋರುವ ಸಮಾಜ ಅವರು ಬೆಳೆದು ಬಂದ ಹಿನ್ನೆಲೆಯ ಉದಾಹರಣೆಯಾಗುತ್ತದೆ. ಬಹು ಗಾಢ ಪ್ರಮಾಣದಲ್ಲಿ ಬೆರೆತು ಹೋಗಿರುವುದರಿಂದ ಸಮಸ್ಯೆಗಳು ನಾನಾ ಮುಖವಾಗಿ ಹುಟ್ಟಿಕೊಂಡಿವೆ. ಹೊಸಹೊಸದಾಗಿ ಹುಟ್ಟಿಕೊಳ್ಳುತ್ತಿವೆ. ಹೆಣ್ಣು ಗರ್ಭದಿಂದಲೇ ದಾಳಿಗೊಳಗಾಗಿ ವೃದ್ಧಾಪ್ಯರವರೆಗೂ ಅವಿತರದ ತಾರತಮ್ಯಗಳು ನೆಲೆ ನಿಲ್ಲಲು ಸಮಾಜೀಕರಣ ನೈತಿಕ ನಕರಾತ್ಮಕ ಎರಡು ಕಾರಣವಾಗುತ್ತದೆ. ಅದಕ್ಕಾಗಿ ಮಕ್ಕಳನ್ನು ಬೆಳೆಸುವದರಲ್ಲಾಗಲಿ, ಪೋಷಿಸುವುದರಲ್ಲಾಗಲಿ ಸಮಾನ ಭದ್ರತೆಯ ಅಂಶ ದೊರೆತಾಗ ಸ್ತ್ರೀ ಶೋಷಣೆಯ ಅಂತ್ಯವು ಬಾಲ್ಯದಿಂದಲೇ ಕಾಣಬಹುದು. ಅದಕ್ಕಾಗಿ ಯೋಗ್ಯ ರೀತಿಯ ಅವಕಾಶಗಳು ಪ್ರತಿಭೆಗಳಿಗೆ ಪ್ರೋತ್ಸಾಹವು ಅಗತ್ಯವಾಗಿ ದೊರೆಯಬೇಕಾದುದಾಗಿದೆ. ಹುಡುಗ ಹುಡುಗಿಯರ ಕಲ್ಪನೆಗಳು ಈಗಾಗಲೇ ಸೃಷ್ಟಿಗೊಂಡಿರುವ ತಾರತಮ್ಯದ ಭಾವನೆಯು ಹೋಗಲಾಡಿಸಬೇಕಾಗಿದೆ.

ಕುಟುಂಬದಲ್ಲಿ ಹೆಣ್ಣು ಮಕ್ಕಳಿಗಿಂತ ಗಂಡುಮಕ್ಕಳಿಗೆ ಪ್ರಾಶಸ್ತ್ಯವನ್ನು ನೀಡುವುದು ಕಾಣುತ್ತೇವೆ. ಅದು ಸಮಾನತೆಯ ಅಂಶದಿಂದ ಎರಡು ಲಿಂಗಕ್ಕೂ ದ್ವಿಪಾತ್ರಗಳ ಹಂಚುವಿಕೆಯನ್ನು ಕುಟುಂಬವು ಪ್ರಮಾಣಿಕವಾಗಿ

ನೀಡಬೇಕು. ಹೆಣ್ಣು ದೌರ್ಬಲ್ಯದಂತೆ ಪ್ರತಿರೂಪಿಸದೆ ಗಂಡು ಆಕ್ರಮಣದಂತೆ ಪ್ರೋತ್ಸಾಹಿಸದೆ ಹಾಗೆ ತರಬೇತಿಗಳು ರಚನೆಯಾಗಬೇಕಾದದ್ದು ಅವಶ್ಯವಾಗಿದೆ. ಅದಕ್ಕಾಗಿ ತಟಸ್ಥಗುಣಗಳು ಮನಸ್ಸಿನಲ್ಲಿ ಬಿತ್ತಬೇಕು, ಸಹಕರಿಸುವ ಸರಳ, ಸಹಾನುಭೂತಿ ತೋರಿಸುವ ಪ್ರೋತ್ಸಾಹಿಸುವ ಗುಣಗಳು ಮಕ್ಕಳಲ್ಲಿ ಚಿಕ್ಕವರಿರುವಾಗಲೇ ಬೆರೆತಾಗ ಸಮಾಜದ ಅಂಧಕಾರವನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಹೆಚ್ಚು ಹೆಚ್ಚು ಜನ ಈ ಗುಣಗಳನ್ನು ಬೆಳೆಸುತ್ತಾ ಯೋಚಿಸುತ್ತಾ ಅಳವಡಿಸಿಕೊಳ್ಳುತ್ತಾ ನಡೆದರೆ ನಮ್ಮ ಸಮಾಜ ಆರೋಗ್ಯಪೂರ್ಣವಾಗಿ ಬೆಳೆಯುತ್ತದೆ. ಲಿಂಗ ತಾರತಮ್ಯಗಳು ಬದಿಗೊತ್ತಿ ಮಾನವರಾಗಿ ಬದುಕಲು ಸಾಧ್ಯ.

ಬದುಕು ಎಲ್ಲರಿಗೂ ಪ್ರಿಯವಾಗಿರುತ್ತದೆ. ಉತ್ತಮವಾಗಿರಬೇಕಾದರೆ, ಸ್ವತಂತ್ರವಾಗಿರಬೇಕು, ಅತಿ ಕಟ್ಟುಪ್ಪಣೆಯು ಅತಿ ಸ್ವತಂತ್ರ್ಯವು ಯಾರಿಗೂ ಒಳ್ಳೆಯದಲ್ಲ. ಸೂಕ್ತ ರೀತಿಯ ಸಮಾನತೆ. ಕುಟುಂಬದ ಸಮಾಜೀಕರಣದಲ್ಲಿ ಒಳಗೊಳ್ಳಬೇಕಾಗಿದೆ. ಸ್ತ್ರೀಯ ಕಟ್ಟುಪ್ಪಣೆಯ ಜೀವನ ಇಂದು ನಾವೆಲ್ಲ ಕಾಣುತ್ತೇವೆ. ಕೆಲವು ಒಳ್ಳೆಯ ಅವಕಾಶಕ್ಕೆ ಎಡೆ ಮಾಡಿ ಕೊಡಲು ಕುಟುಂಬ ನಿರಾಕರಿಸುತ್ತದೆ. ಇದರಿಂದ ಹುಡುಗಿಯಲ್ಲಿ ಉತ್ತಮ ವ್ಯಕ್ತಿತ್ವ ಸೃಜನಾತ್ಮಕ ಚಟುವಟಿಕೆ ಪೆಟ್ಟು ಬೀಳುವ ಸಂಭವ ಕುಟುಂಬ ಮತ್ತು ಶಿಕ್ಷಣದಲ್ಲೂ ಇದೆ. ಶಿಕ್ಷಣವು ಹರೆಯದವರನ್ನು ಉತ್ತಮ ನಾಗರಿಕರನ್ನಾಗಿ ಮಾಡುವಲ್ಲಿ ಸಮಾಜೀಕರಣದ ಬಹುಮುಖ್ಯ ಸಾಧನವು ಆಗಿದೆ. ಕುಟುಂಬದಲ್ಲಿ ದೊರೆಯದಿರುವ ಇತರೆ ಮೌಲ್ಯಗಳು ಶಿಕ್ಷಣಕ್ಷೇತ್ರದಲ್ಲಿ ದೊರೆಯುತ್ತದೆ. ಶಿಕ್ಷಣ ತಾತ್ವಿಕ ನಿಲುವುಗಳು ಸಹ ಮಹಿಳೆಯರನ್ನು ಪುಷ್ಟಿಕರಿಸುವ ಯೋಗ್ಯ ಮಾರ್ಗದರ್ಶಕ ವಾಗಬೇಕಾದುದು ಅಗತ್ಯವಾಗಿದೆ.

ಪ್ರಾಥಮಿಕ ಹಂತಗಳಲ್ಲೆ ಲಿಂಗ ತಾರತಮ್ಯವನ್ನು ಗೋಚರಿಸುವ ಅಂಶಗಳು ಪಠ್ಯಗಳಲ್ಲಿದ್ದವು. ಇತ್ತೀಚಿಗೆ ಹಲವಾರು ಚರ್ಚೆಗಳಿಂದ ಅಂತ್ಯ ಕಾಣತೊಡಗಿವೆ. ಆದರೆ ಮಕ್ಕಳ ಶಾಲೆಯ ಪರಿಸರದಲ್ಲಿಯೂ ಆ ತಾರತಮ್ಯದ ಅಂಶಗಳು ಬಿಟ್ಟು ಹೋಗಿಲ್ಲ. ಮಕ್ಕಳ ದಿನಾಚರಣೆಗಳಂತಹ ಸಂಭ್ರಮದಲ್ಲಿ ಶಾಲೆಯ ಆವರಣದಲ್ಲಿ ಮಕ್ಕಳು ಏನು ಮಾಡುತ್ತಿರುತ್ತಾರೆ ಎಂದರೆ ಹುಡುಗಿಯರು ರಂಗವಲ್ಲಿ ಹಾಕುವುದು, ಕಸ ಗುಡಿಸುವುದು, ದೀಪ ಹಚ್ಚುವುದು, ಹುಡುಗರು ಶ್ರಮದ ಕಾರ್ಯಗಳು ಅಂದರೆ ಶಾಲೆಯ ಆವರಣದಲ್ಲಿರುವ ಚಿಕ್ಕ ಚಿಕ್ಕ ಕಲ್ಲುಗಳನ್ನು ತೆಗೆಯುತ್ತಾ, ಗಿಡ, ಮುಳ್ಳುಕಂಟಿಗಳನ್ನು ಕಡಿಯುತ್ತಾ ಕಾರ್ಯಮಾಡುತ್ತಿರುವುದು ಕಾಣುತ್ತೇವೆ. ಇದು ಶಾಲೆಯ ಆವರಣದ ಲಿಂಗತಾರತಮ್ಯವು ಎಷ್ಟು ಅಡಕವಾಗಿದೆ ಎನ್ನುವುದು ಗೋಚರಿಸುತ್ತದೆ. ಶಿಕ್ಷಕರು ಇಂತಹ ಸಂದರ್ಭಗಳಲ್ಲಿ ಪಾತ್ರಗಳನ್ನು ಬದಲಾವಣೆ ಮಾಡಿ ಕಾರ್ಯಹಚ್ಚಬೇಕು.

ಶಾಲೆಯ ಆವರಣದಲ್ಲಿ ಇದು ಅಲ್ಲದೆ. ಆಟ ಓಟದ ಸಂದರ್ಭಗಳಲ್ಲಿ ಹುಡುಗಿಯರ ಆಟಗಳೇ ಬೇರೆಯಾಗಿ ಹಗ್ಗದಾಟ, ರಂಗೋಲಿ ಸ್ಪರ್ಧೆ, ನಿಂಬೆಹಣ್ಣನ್ನು ಚಮಚದಲ್ಲಿ ಇರಿಸಿಕೊಂಡು ಅದು ಬೀಳದ

ಹಾಗೆ ಮುಂದೆ ಸಾಗುವ ಸ್ಪರ್ಧೆಗಳು ಇರುತ್ತವೆ. ಅಂದರೆ ಕೌಟುಂಬಿಕ ಕಟ್ಟಪ್ಪಣೆಗಳು ಒಡೆಯದ ಹಾಗೆ ಸೂಕ್ಷ್ಮವಾಗಿ ನೋಡಿಕೊಂಡು ಹೋಗುವ ಆಟದ ಸ್ಪರ್ಧೆಗಳು ತಾರತಮ್ಯವನ್ನು ಎತ್ತಿ ತೋರಿಸುವ ವಿದಿವಿಧಾನಗಳೇ ಆಗಿವೆ.

ಮಕ್ಕಳ ಮನಸ್ಸು ಹೇಳಿಕೆ ಆಪೇಕ್ಷೆಗಳನ್ನ ಬಯಸುವ ಕಲಿಕೆಯ ಹಂತದಲ್ಲಿರುತ್ತವೆ. ಯಾವ ಮಾದರಿಯ ಶಿಕ್ಷಣದ ಚಿಂತನೆಗಳು ಒಳಮೂಡುತ್ತವೆ. ಅದೇ ಮಾದರಿಯಾಗಿ ಬಳೆಯುತ್ತಾ ಸಾಗುತ್ತವೆ. ಅದಕ್ಕಾಗಿ ಸಮಾನತೆಯ ತತ್ವಗಳನ್ನು ಶಿಕ್ಷಕರು ಅಳವಡಿಸಿಕೊಡಿಸಬೇಕಾದ ಕರ್ತವ್ಯವಾಗಿದೆ. ಲಿಂಗತಾರತಮ್ಯವನ್ನು ಹೋಗಲಾಡಿಸಲು ಪ್ರಯತ್ನಿಸಬೇಕಾಗಿದೆ.

ಶಿಕ್ಷಣಕ್ಕೆ ಸಂಬಂಧಿಸಿದ ಹಾಗೆ ಕುಟುಂಬದಲ್ಲಿಯ ಹೇಳಿಕೆಗಳು ಸಹ ಹದಿಹರೆಯದ ವಯಸ್ಸಿನವರಿಗೆ ಪರಿಣಾಮ ಬೀರುವ ಅಂಶಗಳಾಗಿವೆ. ಎಷ್ಟು ಓದಿದರೆ ಏನು... ಕೊನೆಗೆ ಅಡುಗೆ ಮನೆನೆ ಅಲ್ವಾ ಅಂತಲೋ ಅಥವಾ ಹೊರಗಡೆ ವಿಸ್ತಾರ ಪ್ರದೇಶದ ಸ್ವತಂತ್ರ್ಯ ಕೊಟ್ಟಾಗ ಹಾಳಾಗುತ್ತಾರಂತಲೋ ಹೆಚ್ಚು ಓದಿದರೆ ಗಂಡ ಸಿಗುವುದು ಕಷ್ಟವೆಂತಲೋ ಕಾಲೇಜುಗಳಿಗೆ ಕಳುಹಿಸದೆ ಇರುವದನ್ನು ನಾವು ಕಾಣುತ್ತೇವೆ.

ಕೆಲವೊಂದು ಸಂದರ್ಭದಲ್ಲಿ ಹುಡುಗಿಯರಿಗೆ ಶಿಕ್ಷಣ ನೀಡಿದರೂ ಮದುವೆ ಮಾರ್ಕೆಟಿನಲ್ಲಿ ಬೆಲೆ ಬರುವಂತಾಗಲಿ ಎಂದು ನೀಡುತಾರೆಯೇ ಹೊರತು ಸ್ವತಂತ್ರ್ಯ ಸ್ವಾವಲಂಬಿ ಜೀವನದ ಬಗ್ಗೆ ಚಿಂತೆಯ ಚಕಾರವನ್ನು ಎತ್ತುವುದೇ ಇಲ್ಲ. ಗಂಡಿನ ಆದೀನಕ್ಕೆ ಅಡಿಪಡಿಸುವ ಇಂತಹ ಶಿಕ್ಷಣಗಳು ಕುಟುಂಬ ಸಮಾಜೀಕರಣದಲ್ಲಿರುವುದರಿಂದ ಉನ್ನತ ವ್ಯಾಸಾಂಗದಂತಹ ಶಿಕ್ಷಣಗಳು ನಿರಾಕರಣೆಯಾಗಿ ಸಾಗಿಸುತ್ತಾರೆ.

ಉನ್ನತ ವಿದ್ಯಾಭ್ಯಾಸ ಕಲಿತ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಳ್ಳಲು ಎಷ್ಟೋ ಪುರುಷರು ಹಿಂದೇಟು ಹಾಕುತ್ತಾರೆ. ಯಾಕೆಂದರೆ ಮಹಿಳೆಯ ಮೌಲ್ಯ ಜಾಸ್ತಿ ಆಗುತ್ತದಲ್ಲದೆ, ಅದಕ್ಕಾಗಿ ಆಧೀನಳಾಗಿ ಬದುಕುವಂತಹ ಮಾದರಿ ಪುರುಷನಿಗೆ ಒಳಪಡುತ್ತದಲ್ಲವೆ. ಅದಕ್ಕೆ ನಿರಾಕರಿಸುವ ಸಂದರ್ಭಗಳು ಇರುತ್ತವೆ. ಆಧೀನರಾಗಿ ಇರುವುದು ಗುಲಾಮಗಿರಿಯ ಸಂಕೇತವೆಂದು ಭಾವಿಸಿದರೆ ಶತ ಶತಮಾನಗಳಿಂದಲೂ ಮಹಿಳೆ ಆಧೀನಳಾಗಿಯೇ ಬದುಕು ಕಂಡಿಲ್ಲವೆ? ಅದನ್ನು ಪುರುಷರು ಚಿಂತಿಸಬೇಕಾದುದು ಅಷ್ಟೇ ಅವಶ್ಯವಾಗಿದೆ. ಸ್ನೇಹಪೂರ್ಣವಾಗಿ ಸಮಾನತೆಯಿಂದ ಬದುಕಿದರೆ ಯಾರಿಗೂ ತಾರತಮ್ಯವಾಗದು.

ಕುಟುಂಬದಲ್ಲಿಯ ಲಿಂಗಭೇದದ ಸಮಾಜೀಕರಣವು ಪುರುಷರ ಪ್ರಾಬಲ್ಯದಿಂದ ಅಡಕವಾಗಿರುವಾಗ ಮಹಿಳೆಯನ್ನು ಪ್ರತಿ ಹೆಜ್ಜೆಯು ನಿರಕ್ಷೆಯದಾಗಿಯೂ ತಂದೆತಾಯಿಯರು ಆತಂಕವಾಗಿಯೂ ಒಡಮೂಡತ್ತದೆ. ಮಹಿಳೆಯ ಋತಮತಿ, ಮದುವೆ ಸಂಸಾರದ ತೊಳಲಾಟಗಳು ಹೆಣ್ಣನ್ನೇ ಬಲಿ ಪಶುವನ್ನಾಗಿ ಮಾಡುತ್ತವೆ. ಕುಟುಂಬದ ಪರಿಸರದಲ್ಲಿ ಹುಡುಗಿ ಋತುಮತಿಯಾಗುವುದಕ್ಕೂ ಮುಂದೆ ನೈಸರ್ಗಿಕ ತರಬೇತಿಯು ಕೊಡುವುದು ಅವಶ್ಯವಾದ ಹಿರಿಯರ ಪಾತ್ರವಾಗಿದೆ. ಹದಿಹರೆಯಕ್ಕೆ ಕಾಲಿಡುವ ಘಳಿಗೆಯ ಹುಡುಗಿಯನ್ನು

ಆತಂಕ, ನಿರಾಸೆ, ಜಿಗುಪ್ಸೆ ಒಳಮೂಡಿಬಿಡುತ್ತವೆ. ಲೈಂಗಿಕ ತಿಳುವಳಿಕೆಯ ಬಗ್ಗೆ ಅರಿವು ಮು ಅಗತ್ಯವಾಗಿದೆ. ಇಲ್ಲದಿದ್ದರೆ ಭಯದ ವಾತಾವರಣ ಹುಡುಗಿಯ ಮನಸ್ಸಿನಲ್ಲಿ ಒಡಮೂಡುತ್ತದೆ. ಹಿರಿಯರ ಮಾರ್ಗದರ್ಶನ ಇಲ್ಲಿ ಅಷ್ಟೇ ಅಗತ್ಯವಾಗಿದೆ.

ಸಮಾಜೀಕರಣದ ತರಬೇತಿಯಲ್ಲಿ ಅಂತರ್ಗತಿಸಿಕೊಳ್ಳಬೇಕಾದ ವಿಚಾರವನ್ನು ಯಾವ ವಿಚಾರಗಳನ್ನು ಭಾವನೆ ನಡುವಳಿಕೆಗಳನ್ನು ಅಂತರ್ಗತಗೊಳಿಸಬೇಕು ಎನ್ನುವುದು ಕುಟುಂಬದ ಹಿರಿಯರ ಜವಬ್ದಾರಿ ಮುಖ್ಯವಾಗಿರುತ್ತದೆ. "ಹರೆಯದ ಹುಡುಗಿಯರು ಋತುಮತಿಯಾಗುವ ಮೊದಲ ವಯಸ್ಸಿನಲ್ಲಿ ಪುರುಷರ ನೇರ ದಾಳಿ ಪ್ರಾರಂಭವಾಗುತ್ತದೆ. ಅದು ನಿಲ್ಲುವವರೆಗೂ ಮುಂದುವರಿಯುತ್ತದೆ. ಅದಕ್ಕಾಗಿ ಹಿರಿಯ ಮಹಿಳೆಯು ತಾವು ಬೆಳೆದು ಬಂದ ಅನುಭವದ ಹಿನ್ನೆಲೆಯಲ್ಲಿಯೇ ಹೆಣ್ಣು ಮಕ್ಕಳಿಗೆ, ತಾರತಮ್ಯದ ಅಡಕದಿಂದ ಹೊರಬರಲು ದೈಹಿಕ ಬದಲಾವಣೆಗಳು ಗುರುತಿಸಿಕೊಳ್ಳಲು ಸೂಕ್ತವಾದ ತರಬೇತಿ ನೀಡಬೇಕು."

ಹದಿಹರೆಯದವರಿಗೆ ಆತ್ಮಸ್ಥೈರ್ಯದ ಅವಶ್ಯಕತೆ ಇರುತ್ತದೆ. ಅದನ್ನು ಕುಟುಂಬವು ತುಂಬಲು ಪ್ರಯತ್ನಿಸಬೇಕು. ಆತ್ಮವಿಶ್ವಾಸದ ಕೊರತೆ ಅವರ ಬೆಳವಣಿಗೆಯು ಕೀಳುದರ್ಜೆಯಾಗಿ ಕಾಣಬಾರದು. ಸದಾ ಬೆಂಬಲವಾಗಿ ಪ್ರೋತ್ಸಾಹದಾಯಕವಾಗಿದ್ದರೆ, ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಾಯಕಾರಿಯಾಗುತ್ತದೆ.

ಮಾಧ್ಯಮಗಳಂತಹ ಅಪಪ್ರಚಾರ ಅಥವಾ ಸ್ವಂತಿಕೆಯಿಂದ ಅನ್ಯ ಮಾರ್ಗ ತಲುಪಿದಾಗ ಹೆದರಿಸಿದ. ತೆಗಳದೆ ತಪ್ಪನ್ನು ಪ್ರೀತಿಯ ಮಾರ್ಗದರ್ಶನದಿಂದ ತಿದ್ದಲೂ ಪ್ರಯತ್ನಿಸಬೇಕು. ಇಲ್ಲದಿದ್ದರೆ, ಜೀವಕ್ಕೆ ದಕ್ಕೆಯಾಗುವ ಸಂಭವವಿರುತ್ತದೆ. ಹದಿಹರೆಯದವರ ಅಭಿಪ್ರಾಯವು ವ್ಯಕ್ತಪಡಿಸಲು ಅವಕಾಶ ಕಲ್ಪಿಸಿಕೊಟ್ಟಾಗ ಸಮಸ್ಯೆಗಳು ಅರ್ಥವಾಗೋದು ಇಲ್ಲದ ನಿಂದನೆಗಳು ಹೆಣ್ಣಿನ ಜೀವನಕ್ಕೆ ಮಾರಕವಾಗುತ್ತವೆ.

ಪರಾವಲಂಬಿ ಜೀವನದ ಈ ವಯಸ್ಸಿನಲ್ಲಿ ಅವರ ಸೃಜನಾತ್ಮಕ ಚಟುವಟಿಕೆ ಕೌಶಲ್ಯ ಚತುರತೆಗೆ ಅವಕಾಶ ಕಲ್ಪಿಸಲು ಕುಟುಂಬವು ಸೂಕ್ತ ಪ್ರಮಾಣದಲ್ಲಿ ಅವಕಾಶ ನೀಡಬೇಕು. ಉತ್ತಮ ವ್ಯಕ್ತಿಯ ವ್ಯಕ್ತಿತ್ವದ ಕಡೆಗೆ ಮನಸ್ಸನ್ನು ಒಲೈಸಲು ಪ್ರಯತ್ನಿಸಬೇಕು. ಯಾಕೆಂದರೆ ಅನುಕರಣೆ ವಯಸ್ಸು ಇದಾದುದರಿಂದ ಸೂಕ್ತವಾಗಿ ಸ್ವಕಲ್ಪನೆಯ ಮಾದರಿಯಲ್ಲಿ ಉತ್ತಮರ ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಗಾಂಧೀಜಿ, ಕಿತ್ತೂರರಾಣಿ ಚೆನ್ನಮ್ಮ ಇನ್ನಿತರೆ ಜೀವನ ಚರಿತ್ರೆಯ ಪುಟಗಳನ್ನು ಹದಿಹರೆಯದವರ ಮನಸ್ಸಿನೆದುರು ಕನ್ನಡಿಯಂತೆ ಪ್ರತಿಬಿಂಬಸಬೇಕು.

. ಕುಟುಂಬದಲ್ಲಿಯ ತಂದೆತಾಯಿಗಳು ಹದಿಹರೆಯದ ವಯಸ್ಸಿನಲ್ಲಿ ಕೆಂಡದಂತೆ ಕಾಣುವವರು ಇರುತ್ತಾರೆ. ಇದರಿಂದ ಒಳಗೆ ಅಡಿಗಿರುವ ಅಭಿವ್ಯಕ್ತವು ಕೆಲವು ಸಲ ಅಂಜಿಕೆ, ಭಯಗಳಿಂದ ಹೇಳದೆ ಇರಬಹುದು. ತಮ್ಮ ಸಹಪಾಠಿಗಳಲ್ಲಿ ಕ್ರಿಯೆಗೆ ಪ್ರತಿಕ್ರಿಯೆ ಬರುವುದರಿಂದ ತಮ್ಮ ಮನಸ್ಸಿನ ವಿಚಾರವನ್ನು ಸಹಪಾಠಿಗಳೆಯರಲ್ಲಿ ಹೇಳಲು ಇಷ್ಟಪಡುತ್ತಾರೆ. ಅದಕ್ಕೂ ಮುಂಚಿತವಾಗಿ ಪ್ರೀತಿ ಪ್ರೇಮದಿಂದ ಕುಟುಂಬದಲ್ಲಿ ವಾತ್ಸಲ್ಯಗಳು

ಏರ್ಪಟ್ಟಾಗ ನೇರವಾದ ಸೂಚನೆಗಳು ಕಷ್ಟಕರವಲ್ಲದ ರೀತಿಯಲ್ಲಿ ನೀಡಿದಾಗ, ಹದಿಹರೆಯವರು ಮನಸ್ಸಿನ ಹೇಳಿಕೆ, ಅಭಿರುಚಿ, ಪ್ರೋತ್ಸಾಹ ಬಯಕೆಗಳು ತಂದೆತಾಯಿಗಳನ್ನು ನೇರವಾಗಿ ಕೇಳುವ ಅವಕಾಶವಾಗುತ್ತದೆ. ಈ ನಿರೀಕ್ಷೆಗಳನ್ನು ಗಮನಿಸಿ ವಿಶ್ಲೇಷಿಸಿ ಸೂಕ್ತ ಅಭಿಪ್ರಾಯಗಳನ್ನು ನೀಡಬೇಕು.

ಕೆಲವು ಕುಟುಂಬಗಳಲ್ಲಿ ಪರೀಕ್ಷೆಯಲ್ಲಿ ಚೆನ್ನಾಗಿ ಅಂಕಬಂದಿಲ್ಲವೆಂದೋ ಅಥವಾ ಅನುತ್ತೀರ್ಣರಾದ ಸಂದರ್ಭಗಳಲ್ಲಿ ತೆಗಳಿ ಬಿಡುವ ತಂದೆತಾಯಿಗಳು ಹೇರಳವಾಗಿ ಸಿಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಆತ್ಮಹತ್ಯೆಯ ಕಡೆಗೆ ಮನಸ್ಸು ವಾಲುತ್ತದೆ. ಅದಕ್ಕೆ ಸೂಕ್ತ ಪ್ರೀತಿಯ ಮಾರ್ಗದರ್ಶನ ಅಗತ್ಯವಾಗಿದೆ. ಕುಟುಂಬದಲ್ಲಿ ಏರ್ಪಡಬೇಕು.

ಹುಡುಗರಿಗಿಂತ ಹುಡುಗಿಯರಿಗೆ ಇಂತಹ ಸಂದರ್ಭಗಳಲ್ಲಿ ಶಾಲೆಯನ್ನು ಬಿಡಿಸಿ ಮನೆಕೆಲಸವನ್ನು ಹಚ್ಚುವ ಕುಟುಂಬಗಳು ಇವೆ. ನಿನಗೆ ಇದೆ ಕೆಲಸ ಸೂಕ್ತವೆಂಬ ಹೇಳಿಕೆಯು ಸಹ ಕುಟುಂಬದಿಂದ ಬರುತ್ತಿರುತ್ತದೆ. ಕುಟುಂಬದ ಅಧೀನಕ್ಕೆ ಒಳಪಡಬೇಕಾದಾಗ ಮಾನಸಿಕ ಒತ್ತಡವು ಆಗುತ್ತದೆ. ಇದರಿಂದ ಒಂಟಿಯಾಗಿ ಏಕಾಂಗಿ ಇರಲು ಬಯಸುತ್ತಾರೆ. ಒಂಟಿಯಾಗಿದ್ದರೆ ತಾವು ಅನಾಥರಂತೆ ಭಾವಿಸಿಕೊಳ್ಳಲು ಸಂಭವವಿರುತ್ತದೆ. "ಹರೆಯದ ವಯಸ್ಸು ಬಹುಪ್ರಮಾಣವಾಗಿ ಒಂಟಿಯಾಗಿರಲು ಬಯಸುವುದಿಲ್ಲ. ಯಾವಾಗಲೂ ಗುಂಪುಗುಂಪಾಗಿ ಇರಲು ಇಷ್ಟಪಡುತ್ತಾರೆ. ಹೀಗೆ ಇದು ಐಡೆಂಟಿಟಿ ಕ್ರೈಸಿಸ್, ಹರೆಯದ ಒಂದು ಪ್ರಮುಖ ಸಮಸ್ಯೆಯಾಗುತ್ತದೆ. ವ್ಯಕ್ತಿ ಹೇಗೆ ಅದನ್ನು ಪರಿಹರಿಸಿಕೊಳ್ಳುತ್ತಾನೋ ತನ್ನ ನೆಲೆಯನ್ನು ಕಂಡುಕೊಳ್ಳುತ್ತಾರೆ ಎನ್ನುವುದು ಮುಖ್ಯ."[5]

ಗುಂಪು ಚಟುವಟಿಕೆಯ ಸಂದರ್ಭದಲ್ಲಿ ನಾಯಕತ್ವದ ಸ್ಥಾನಗಳು ಹೊರಹೊಮ್ಮುವ ಸಂದರ್ಭಗಳಿರುತ್ತವೆ, ಅದಕ್ಕೆ ಉತ್ತಮ ಪ್ರತಿಕ್ರಿಯೆಗಳು ಸಮಾಜದಿಂದ ಕುಟುಂಬದಿಂದ ಪ್ರೋತ್ಸಾಹಿಸಬೇಕು. ಇದರಿಂದ ಒಳ್ಳೆಯ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯಕಾರಿಯಾಗುತ್ತದೆ.

'ನಾಯಕತ್ವಗಳನ್ನು ವಹಿಸಿಕೊಳ್ಳಲು ಭಾಷೆಯು ಆದೇಶಾತ್ಮಕವಾಗಿ ಹೊರಹೊಮ್ಮುವುದು ಪುರುಷರಿಂದಲೇ ಸಮಾಜದ ನಿರೀಕ್ಷೆಯ ವ್ಯಕ್ತವಾಗುವ ಹೆಣ್ಣಿನ ಭಾಷೆ ಗಂಡಿನ ಭಾಷೆ ಗುಣ ವ್ಯಾಕರಣವು ಭಿನ್ನವಾಗಿರುತ್ತವೆ. ಮತ್ತು ಕಲಿಯಲು ಪ್ರಾರಂಭಿಸಿದಾಗ ಮಗುವಿಗೆ ಸೂಕ್ತ ರೀತಿಯ ತರಬೇತಿಗಳು ಕುಟುಂಬವು ನೀಡುತ್ತದೆ. ಈ ಭಾಷೆಗಳನ್ನು ಕಲಿಯುತ್ತಲೆ ಮಗು ತನ್ನ ಸಂಸ್ಕೃತಿಯಲ್ಲಿ ಹೆಣ್ಣಾಗಿ ಗಂಡಾಗಿ ತನಗೆ ತೋರುವ ಪಾತ್ರಗಳನ್ನು ಕಂಡುಕೊಳ್ಳುತ್ತದೆ. ಈ ಭಾಷಾ ವಿಧಾನಗಳು ಸಮಾಜ ಕಲ್ಪಿಸಿರುವ ಸ್ಪಷ್ಟ ಸೂಚಕಗಳಾಗಿವೆ. ಇದರಿಂದ ಹೆಣ್ಣು ಮಗುವಿನ ಲಿಂಗ ಭೇದದಲ್ಲೆ ತಮ್ಮ ಪಾತ್ರ ಸಿದ್ಧತೆಯಲ್ಲಿ ಬೆಳೆಯಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ನಾಯಕತ್ವವಹಿಸುವುದು ಲಿಂಗ ಭೇದವನ್ನು ದಾಟಿ ಬಂದ ಹಾಗೆ ಅದಕ್ಕಾಗಿ ಹದಿಹರೆಯದ ಸಂದರ್ಭ ಮತ್ತು ಮಕ್ಕಳಿಗೆ ತರಬೇತಿಗಳು ಸಮಾಜದ ಕಲ್ಪಿತ ಮಾದರಿಗೆ ಪೂರಕವಾಗುವ ಹಾಗೆ ನೀಡಬಾರದು.

ಸಮಾಜೀಕರಣ ತರಬೇತಿ ಈ ಮಾದರಿಯಾಗಿ ಸಾಗಿದಾಗ ಹೆಣ್ಣು ಮಗು ಕನಿಷ್ಟಳಾಗಿ ಎರಡನೆಯ ದರ್ಜೆಯದಾಗಿ ಗೋಚರಿಸುವ ಸಂದರ್ಭಗಳಿರುತ್ತವೆ. ಲಿಂಗ ತಾರತಮ್ಯದ ಕಲಿಕೆ, ಸಲಹೆ, ಮಾದರಿ, ವರ್ತನೆಗಳು ಇಲ್ಲಿ ಒಳಗೊಳ್ಳುತ್ತವೆ. ಅವುಗಳನ್ನು ಬುದ್ಧಿವಂತ ತಂದೆತಾಯಿಯರ ಮಕ್ಕಳಲ್ಲಿ ಈ ರೀತಿ ನಡೆದುಕೊಳ್ಳದೆ ಸ್ನೇಹಿತರ ಹಾಗೆ ಸಮಾನತೆಯ ಅಂಶ ಕಾಣುವ ಹಾಗೆ ಇರಬೇಕು. ಅದು ಮತ್ತೊಬ್ಬ ಸಂದರ್ಭದಲ್ಲಿ ಹೆಣ್ಣು ಹುಡುಗಿ ಬಂದರೆ ನಾಚಿಕೊಳ್ಳದೇ ಸಂಕೋಚವಿಲ್ಲದೆ ಮುಕ್ತವಾಗಿ ಮಾತನಾಡಲು ಸಾಧ್ಯವಾಗುತ್ತದೆ. ಇದರಿಂದ ಆತ್ಮಸ್ಥೈರ್ಯವು ಉಂಟಾಗುತ್ತದೆ. ಅದಕ್ಕೆ ತಕ್ಕ ಮಾರ್ಗದರ್ಶನ ಕುಟುಂಬದ ಸಮಾಜೀಕರಣದಲ್ಲಿ ಸ್ತ್ರೀಗುಣಗಳ ಪುರುಷ ಗುಣಗಳ ಬಗೆಗೆ ಅರಿವು ಮೂಡಿಸಬೇಕು.

ಹೆಣ್ಣು ಗಂಡಿನ ಬಟ್ಟೆಗಳನ್ನು ಹಾಕಿಕೊಂಡರೆ ಅಪಹಾಸ್ಯಕ್ಕೆ ಈಡು ಮಾಡುವ ಸಂದರ್ಭಗಳಿರುತ್ತವೆ. ಇದು ಸಹಜವಾಗಿ ಒಪ್ಪಿಕೊಳ್ಳಲು ನಿರಾಕರಿಸುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಹೋಲಿಸಿದಾಗ ನಗರ ಪ್ರದೇಶದಿಂದ ತೀರಾ ಭಿನ್ನವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಸೈಕಲ್ ತುಳಿಯಬಾರದು. ಇನ್ನಿತರೆ ಅಪಕಲ್ಪಿತಗಳು ಹದಿಹರೆಯದ ಆಸೆಆಕಾಂಕ್ಷೆಗೆ ಪ್ರತಿಭೆಗೆ ಮಣ್ಣೆರಚುವ ಸಾಧನೆಗಳಾಗಿಯೂ ರೂಪ ತಾಳಿಕೊಂಡಿವೆ.

ಸಮಾಜೀಕರಣದ ಲಿಂಗತಾರತಮ್ಯ ಪ್ರಕ್ರಿಯೆಯು ಹದಿಹರೆಯದ ವಯಸ್ಸಿನಲ್ಲಿಯ ಎಲ್ಲಾ ಚಟುವಟಿಕೆಗಳು ಕಾಯ್ದುಕೊಳ್ಳುವುದು ಸೂಕ್ತವಾದುವುಕ್ಕೆ ಪ್ರೋತ್ಸಾಹಿಸುವುದು ಮುಂದಿನ ನವ ಪೀಳಿಗೆಯ ಜನಾಂಗಕ್ಕೆ ಮಾದರಿಯಾಗಿ ಸಮಾನತೆ ಸಾಧಿಸಬಹುದು. ಕುಟುಂಬದಲ್ಲಿಯ ಸಂಪ್ರದಾಯದ ಕಟ್ಟಾ ಮಾದರಿಗಳನ್ನು ತೊಡಗಿಸಿ ಅವರಿಗೆ ಅರಿವಿನ ಅಂಶವನ್ನು ಸಮಾನತೆಯ ತತ್ವವನ್ನು ಹದಿಹರೆಯದವರಿಗೆ ನೀಡುವುದು ಅವಶ್ಯವಾಗಿದೆ.

ಅಡಿಟಿಪ್ಪಣಿಗಳು

೧. ಡಾ. ಎಚ್.ಎಸ್. ಶ್ರೀಮತಿ, ಗರ್ಭಾಶಯ ಮಹಿಳೆಯ ಶಕ್ತಿಕೇಂದ್ರ, ಪುಟ: ೨೦

೨. ಡಾ. ಸಿ.ಆರ್. ಚಂದ್ರಶೇಖರ, ಹದಿಹರೆಯದ ಮಾನಸಿಕ ಸಮಸ್ಯೆಗಳು, ಪುಟ: ೨೬

೩. ಡಾ. ಎಚ್.ಎಸ್. ಶ್ರೀಮತಿ, ಚಹರೆ, ಪುಟ: ೫೬

❑

ಅಧ್ಯಾಯ ೭

ಕ್ಷೇತ್ರಕಾರ್ಯ ಅಧ್ಯಯನ ವಿವರ

ಕ್ಷೇತ್ರಕಾರ್ಯ ಅಧ್ಯಯನ ವಿವರ

ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿ ಗುಲ್ಬರ್ಗ ಜಿಲ್ಲೆಯು ಒಂದಾಗಿದೆ. ಇದರ ಸುತ್ತಲೂ ರಾಯಚೂರು, ಬೀದರ ಜಿಲ್ಲೆಗಳು ಸುತ್ತುವರಿದಿವೆ. ಈ ಜಿಲ್ಲೆಯನ್ನು 'ಕಲಬುರ್ಗಿ', 'ಗುಲ್ಬರ್ಗಾ'ವೆಂದು ಎರಡು ಪರ್ಯಾಯ ಹೆಸರುಗಳಿಂದ ಕರೆಯಲಾಗುತ್ತದೆ. ಇದು ಭೂ ವಿಸ್ತಾರಣೆಕೆಯಲ್ಲಿ ರಾಜ್ಯದ ಎರಡನೆಯ ಸ್ಥಾನದಲ್ಲಿದೆ. ಕೃಷ್ಣ ಮತ್ತು ಭೀಮ ಈ ಜಿಲ್ಲೆಯ ಹರಿಯುವ ನದಿಗಳಾಗಿವೆ. ಈ ಜಿಲ್ಲೆಯಲ್ಲಿ ಒಟ್ಟು ೧೦ ತಾಲ್ಲೂಕುಗಳೊನ್ನಳಗೊಂಡಿದೆ. ಗುಲ್ಬರ್ಗಾ, ಚಿತ್ತಾಪುರ, ಸೇಡಂ, ಯಾದಗಿರ, ಸುರುಪುರ, ಶಹಪುರ, ಅಫ್ ಜಲಪೂರ, ಜೀವರ್ಗಿ, ಆಳಂದ ಇತಿಹಾಸದ ಪ್ರಮುಖ ಸ್ಥಳಗಳಾಗಿವೆ. ಈ ಜಿಲ್ಲೆಯಲ್ಲಿ ಸೇಡಂ ತಾಲ್ಲೂಕಿನ ಮಳಖೇಡ ರಾಷ್ಟ್ರಕೂಟ ಅರಸರ ರಾಜಧಾನಿಯಾಗಿತ್ತು.

ಬಹುಮನಿ ಸುಲ್ತಾನರ ಆಳ್ವಿಕೆಯಲ್ಲಿ ಗುಲ್ಬರ್ಗಾವು ೧೪೨೪ ರಲ್ಲಿ ರಾಜಧಾನಿಯಾಗಿ ಮೆರೆಯಿತು. ಇನ್ನೂ ಹಲವಾರು ಇತಿಹಾಸ ಪುರಾವೆಗಳು ಈ ಜಿಲ್ಲೆಯಲ್ಲಿ ಒಳಗೊಂಡಿದೆ. ಶರಣ ಬಸವೇಶ್ವರ ಮತ್ತು ಖಾಜಾ ಬಂದೇನವಾಜರ ಜಾತ್ರೆಯು ಬಹು ವಿಜ್ರಂಭಣೆಯಿಂದ ಜರುಗುತ್ತದೆ. ಹಿಂದೂ ಮುಸ್ಲಿಂ ಭಾಂದವರು ಸೇರಿಕೊಂಡು ಆಚರಿಸುವುದು ಕಾಣುತ್ತೇವೆ. ಸಹಕಾರತ್ವ, ಬಾಂಧವ್ಯದ ಪ್ರತಿಕತೆಯನ್ನು ಎತ್ತಿ ತೋರಿಸುತ್ತದೆ.

ಗುಲ್ಬರ್ಗಾ ಜಿಲ್ಲೆಯ ಜನಸಂಖ್ಯೆಯು ಈ ೨೦೦೧ ರ ಜನಗಣತಿಯ ಪ್ರಕಾರ ಈ ಮಾದರಿಯಾಗಿರುತ್ತದೆ.

ಒಟ್ಟು ಜನಸಂಖ್ಯೆ	ಹೆಂಗಸರು	ಗಂಡಸರು
೩,೧೨೪,೮೫೮	೧,೫೩೩,೪೭೯	೧,೫೯೧,೩೭೯

ಕರ್ನಾಟಕ ರಾಜ್ಯದ ಮತ್ತು ಗುಲ್ಬರ್ಗಾ ಜಿಲ್ಲೆಯ ಲಿಂಗವಾರು ಸಾಕ್ಷರತೆಯ ಪ್ರಮಾಣ ೨೦೦೧ ರ ಜನಗಣತಿಯ ಪ್ರಕಾರ ಈ ಮಾದರಿಯಾಗಿರುತ್ತದೆ.

	ಒಟ್ಟು ಜನಸಂಖ್ಯೆ		ಹೆಂಗಸರು		ಗಂಡಸರು	
ದಶಕಗಳಲ್ಲಿ	೧೯೯೧	೨೦೦೧	೧೯೯೧	೨೦೦೧	೧೯೯೧	೨೦೦೧
ಕರ್ನಾಟಕ	೫೬.೦೪	೬೭.೦೪	೪೪.೩೪	೫೭.೪೫	೬೭.೨೬	೭೬.೨೯
ಗುಲ್ಬರ್ಗಾ	೩೮.೫೪	೫೦.೬೫	೨೪.೪೯	೩೮.೪೦	೫೨.೦೮	೬೨.೫೨

* (CENSES OF INDIA-2001 SERIES-30, KARNTAKA PROVISINAL POPULATION TOTALS PAPER- 1 OF 2001 DIRECTOR OF CENSES OPERATIONS KARNATAKA)

೨೦೦೧-೨೦೦೨ರ ಅವಧಿಯಲ್ಲಿ ಲಿಂಗ ತಾರತಮ್ಯ ವ್ಯವಸ್ಥೆಯಲ್ಲಿ, ಸಮಾಜೀಕರಣದ ಪ್ರಕ್ರಿಯೆ ಮತ್ತು ಹದಿಹರೆಯದ ವಯಸ್ಸಿನ ಮೇಲೆ ಅದರ ಪರಿಣಾಮಗಳು ಎಂಬ ಶೀರ್ಷಿಕೆಗೆ ಗುಲ್ಬರ್ಗಾ ನಗರ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ನಗರದ ಎಸ್.ವಿ. ಕಾಲೇಜ್ ಮತ್ತು ಸಿದ್ಧಾರ್ಥ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿರುವ ಹದಿಹರೆಯದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ಸಂದರ್ಶಿಸಲಾಗಿದೆ.

ಎಸ್.ವಿ. ಕಾಲೇಜ್ ಅಧ್ಯಕ್ಷರು ಬಾಳ ಸಾಹೇಬ ದೇಗಾವ್‌ಕರ್ ಇದು ೧೯೦೭ರಲ್ಲಿ ಪ್ರಾರಂಭವಾದ ವಿದ್ಯಾಸಂಸ್ಥೆಯಾಗಿದೆ. ೨೦೦೧ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಲ್ಲಿ ಪ್ರಥಮ ವರ್ಷದ ಪಿ.ಯು.ಸಿ. ವಿದ್ಯಾರ್ಥಿಗಳಲ್ಲಿ, ಹುಡುಗಿಯರು ೩೦, ಹುಡುಗರು ೬೫, ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಲ್ಲಿ ಹುಡುಗಿಯರು ೨೮, ಹುಡುಗರು ೫೨, ದಾಖಾಲತಿ ಹೊಂದಿದ್ದಾರೆ.

ಸಿದ್ಧಾರ್ಥ ಸಂಯುಕ್ತ ಪದವಿಪೂರ್ವ ಕಾಲೇಜು ೧೯೯೨ ರಲ್ಲಿ ಪ್ರಾರಂಭವಾಗಿದೆ. ಇದರ ಅಧ್ಯಕ್ಷರು ರಾಜರತ್ನ ಮೋಹನ ಅವರು ಕಾರ್ಯದರ್ಶಿಗಳು ಶಿವರಾಮ ಮೋಗಾ ಇವರಿದ್ದಾರೆ. ಪ್ರಥಮ ವರ್ಷದ ಪಿ.ಯು.ಸಿ. ವಿಜ್ಞಾನ ವಿದ್ಯಾರ್ಥಿಗಳಲ್ಲಿ ಹುಡುಗರು ೫೭ ಹುಡುಗಿಯರು ೧೪ ಪಿ.ಯುಸಿ. ದ್ವಿತೀಯ ವರ್ಷದ ವಿದ್ಯಾರ್ಥಿಗಳಲ್ಲಿ ೪೩ ಹುಡುಗರು ೧೫ ಹುಡುಗಿಯರು ೨೦೦೧ ರಲ್ಲಿ ಪ್ರವೇಶವನ್ನು ಪಡೆದವರಾಗಿದ್ದಾರೆ.

ಈ ಮೇಲಿನ ಎರಡು ಕಾಲೇಜಿನಿಂದ ವಿದ್ಯಾರ್ಥಿಗಳನ್ನು ಅಧ್ಯಯನದ ಕ್ಷೇತ್ರಕಾರ್ಯಕ್ಕಾಗಿ ಹುಡುಗ ಮತ್ತು ಹುಡುಗಿ ಬಂದು ಸೇರುವ ಕಾಲೇಜನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಸಂ.	ವಿವರ	ಸಂಖ್ಯೆ	ಪ್ರತಿಶತ
೦೧	ಹುಡುಗರು	೪೦	೫೦
೦೨	ಹುಡುಗಿಯರು	೪೦	೫೦
	ಒಟ್ಟು	೮೦	೧೦೦

೪೦ ಹುಡುಗರು ಮತ್ತು ೪೦ ಹುಡುಗಿಯರನ್ನು ಮಾತ್ರ ಆಯ್ಕೆಮಾಡಿ ಒಟ್ಟು ೮೦ ವಿದ್ಯಾರ್ಥಿಗಳನ್ನು ಅಧ್ಯಯನಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿದುಕೊಳ್ಳಲಾಗಿದೆ.

ಕೋಷ್ಟಕ ೧

ಹದಿಹರೆಯದ ಕುಟುಂಬದವರ ವಾರ್ಷಿಕ ಆದಾಯದ ವಿವರ

ಸಂ.	ವಿವರ	ಹುಡುಗರು	ಪ್ರತಿಶತ	ಹುಡುಗಿಯರು	ಪ್ರತಿಶತ
೦೧	೧೦,೦೦೦ ದಿಂದ ೨೦,೦೦೦	೨೨	೫೫ %	೨೮	೭೦ %
೦೨	೨೦,೦೦೦ ದಿಂದ ೩೦,೦೦೦	೧೨	೩೦ %	೦೮	೨೦ %
೦೩	೩೦,೦೦೦ ಕ್ಕಿಂತ ಹೆಚ್ಚು	೦೬	೧೫ %	೦೪	೧೦ %
	ಒಟ್ಟು	೪೦	೧೦೦ %	೪೦	೧೦೦ %


ವಿವರ : ಹದಿಹರೆಯದವರ ಕುಟುಂಬದ ವಾರ್ಷಿಕ ಆದಾಯವು ೧೦,೦೦೦ದಿಂದ ೨೦,೦೦೦ ದವರೆಗೆ ಇರುವ ಕುಟುಂಬದಲ್ಲಿ ೨೨ ಹುಡುಗರು (೫೫ %) ೨೮ ಹುಡುಗಿಯರು (೭೦ %) ಕಂಡುಬಂದಿದ್ದಾರೆ.

೨೦,೦೦೦ ದಿಂದ ೩೦,೦೦೦ ದವರೆಗೆ ೧೨ ಹುಡುಗರು, (೩೦ %) ಹುಡುಗಿಯರು (೨೦ %) ವಾರ್ಷಿಕ ಆದಾಯವಿರುವುದು. ೨೦,೦೦೦ ಕ್ಕಿಂತ ಹೆಚ್ಚಿರುವ ೦೪ ಹುಡುಗರು (೧೦ %), ೦೬ ಹುಡುಗಿಯರು (೧೦%) ಕೆಲವು ವಿದ್ಯಾರ್ಥಿಗಳು ಮಾತ್ರ ಕಂಡುಬಂದಿತು. ವಾರ್ಷಿಕ ಆದಾಯ ಹೆಚ್ಚಿರುವುದರಿಂದ ಉತ್ತಮ ಪರಿಸರದ ಒಳ್ಳೆಯ ಪ್ರೋತ್ಸಾಹದ ನಿರೀಕ್ಷೆಗಳು ಮನೆಯವರಿಂದ ದೊರೆಯುತ್ತದೆ ಎಂದು ಹೇಳಿದರು.

ಆರ್ಥಿಕತೆಯು ಮನುಷ್ಯ ಜೀವಿಯ ಮೌಲ್ಯಾಧಾರಿತ ನಿರ್ಣಯಗಳು ಬದಲಾವಣೆ ಹೊಂದುತ್ತವೆ. ಸುಧಾರಣೆಯಾಗುತ್ತಿವೆ. ನಿಜ ಆದರೆ ಕಡಿಮೆ ಆದಾಯವಿರುವ ಕುಟುಂಬಗಳು ಹುಡುಗಿಯ ಶಿಕ್ಷಣಕ್ಕಾಗಲಿ ಖರ್ಚು ವೆಚ್ಚಕ್ಕಾಗಲಿ ನಿರಾಕರಣೆಯ ಭಾವನೆಯು ಕುಟುಂಬದ ಪರಿಸರದಲ್ಲಿ ಇವೆ. ಮತ್ತು ಉತ್ತಮ ಪರಿಸರದ ಕುಟುಂಬಗಳಲ್ಲಿ ಪ್ರೋತ್ಸಾಹವಿರುವುದು ನಿಜವಾದರೂ ಮತ್ತೊಂದು ಮಾದರಿಯ ತಾರತಮ್ಯಗಳು ನೆಲೆ ನಿಲ್ಲುತ್ತವೆ. ಕುಟುಂಬದ ಉತ್ತಮ ಅಧ್ಯಯನದಿಂದ ಹುಡುಗಿಯರ ಶಿಕ್ಷಣಕ್ಕೆ ತೊಡಕಾಗುವುದು ಕಡಿಮೆ ಎನ್ನಬಹುದು.

ಕೋಷ್ಟಕ ೨

ಹದಿಹರೆಯದವರು ಶಿಕ್ಷಣಕ್ಕೆ ಪ್ರವೇಶಿಸಿದ ಕ್ಷೇತ್ರದ ಆಶಯದ ಬಗ್ಗೆ ವಿವರ



ವಿವರ : ಹದಿರಹರೆಯದವರು ಶಿಕ್ಷಣ ಕ್ಷೇತ್ರದ ಪ್ರವೇಶವು ಏಕಮಾದರಿಯಾಗಿರುವುದಿಲ್ಲ. ಸಲಹೆ, ಬುದ್ದಿಮಟ್ಟ ಮತ್ತು ಆಸಕ್ತಿಯ ಅನುಗುಣವಾಗಿ ಪ್ರವೇಶವನ್ನು ಪಡೆಯುತ್ತಾರೆ.

ಸ್ವ ಇಚ್ಛೆಯ ಆಸಕ್ತಿಯಿಂದ ಪ್ರವೇಶಪಡೆದ ೧೬ ಹುಡುಗರು (೪೦ %) ೧೪ ಹುಡುಗಿಯರು (೩೫ %), ತಮ್ಮ ಇಚ್ಛೆಗೆ ಅನುಗುಣವಾಗಿ ಸ್ವತಹ ಆಯ್ಕೆಯಿಂದ ಪ್ರವೇಶವನ್ನು ಪಡೆದವರಾಗಿದ್ದಾರೆ.

ತಂದೆತಾಯಿಯ ಆಶಯದಿಂದ ೧೮ ಹುಡುಗರು (೪೫ %) ೨೨ ಹುಡುಗಿಯರು (೫೫ %) ಕುಟುಂಬದ ಒತ್ತಡ ಸಲಹೆಗನುಗುಣವಾಗಿ ಶಿಕ್ಷಣಕ್ಷೇತ್ರ ಪ್ರವೇಶಿಸುವರಾಗಿದ್ದಾರೆ.

ಗೆಳೆಯರ ಪ್ರೇರಣೆಯಿಂದ ಪ್ರವೇಶ ಪಡೆದ ೦೬ ಹುಡುಗಿಯರು (೧೫ %), ೦೪ ಹುಡುಗರು (೧೦ %) ಸಹಪಾಠಿಗಳ ಸಹಾಯದಿಂದ ಹೇಳಿಕೆಗಳಿಂದ ಮತ್ತು ಆ ಆಯ್ಕೆಗಳ ಸೂಕ್ತವೆನಿಸಿ ಪ್ರವೇಶ ಪಡೆದುಕೊಂಡಿದ್ದೇವೆ ಎಂದು ಹೇಳಿದರು.

ಈ ಮೇಲಿನ ಅಂಕಿಅಂಶಗಳಿಂದ ಸ್ವ ಇಚ್ಛೆಯಿಂದ ಸೇರ್ಪಡೆಯಾದುದು ಹುಡುಗ ಹುಡುಗಿಯರಲ್ಲಿ ಸ್ವಲ್ಪ ಸಮಾನತೆ ಕಂಡುಬರುತ್ತದೆ. ತಂದೆ ತಾಯಿಯರ ಆಶಯದಿಂದ ಪ್ರವೇಶ ಪಡೆದಿರುವ ಹುಡುಗಿಯರ ಪ್ರತಿಶತ ಹೆಚ್ಚಾಗಿರುವುದು ಕಾಣುತ್ತೇವೆ. ಕಾರಣ ಸಮಾಜದಲ್ಲಿಯ ಎಲ್ಲಾ ನಿರ್ಬಂಧಗಳಲ್ಲಿ ಒಳಗಾಗಿದ್ದಾಳೆ. ತಂದೆತಾಯರು ಸಂಪ್ರದಾಯಿಕ ಕುಟುಂಬದವರಾಗಿದ್ದರೆ. ಅದಕ್ಕೆ ಅನುಗುಣವಾಗಿ ಶಿಕ್ಷಣವನ್ನು ಪ್ರವೇಶಿಸಲು ಸಲಹೆ ನೀಡುತ್ತಾರೆ. ಹುಡುಗರು ಕೆಲವೊಂದು ಸಂದರ್ಭಗಳಲ್ಲಿ ಈ ಹೇಳಿಕೆಗಳು ಇರುತ್ತವೆ. ಹೀಗಾಗಿ ಆಸಕ್ತಿ




ಬೇರೆ ಮಾರ್ಗ ಹೇಳಿಕೆ ಬೇರೆ ಮಾರ್ಗವಾಗಿದ್ದಾಗ ಸಹಜವಾಗಿ ಯಾವ ಮಾರ್ಗದಲ್ಲಿ ಸಾಗಬೇಕೆಂಬುವ ಗೊಂದಲವು ನಿರ್ಮಾಣವಾಗುತ್ತದೆ. ಅಂತಹ ಸಂದರ್ಭದಲ್ಲಿ ತಂದೆತಾಯಿಯರ ಹೇಳಿಕೆಯು ಇಲ್ಲಿ ಹೆಚ್ಚಿನ ಪ್ರತಿಶತದ ತಾರತಮ್ಯವನ್ನು ಕಾಣುತ್ತೇವೆ.

ಗೆಳೆಯರ ಪ್ರೇರಣೆಯಿಂದ ಪ್ರವೇಶ ಪಡೆದಿರುವ ಕೆಲವು ವಿದ್ಯಾರ್ಥಿಗಳು ಕಡಿಮೆಯಾಗಿರುವುದು ಅಂಕಿಅಂಶದಿಂದ ತಿಳಿಯುತ್ತದೆ, ಸಹಪಾಠಿಗಳು ಶಿಕ್ಷಣ ಕ್ಷೇತ್ರದ ಬಗ್ಗೆ ಒಳಿತು ಕೆಡುಕಿನ ಪ್ರೇರಣೆಗಳಿಂದ ಮಾರ್ಗವನ್ನು ಅನುಸರಿಸುವವರು ಆಗಿದ್ದಾರೆ. ಹದಿಹರೆಯದವರ ಸ್ವನಿರ್ಣಯವು ಗೆಳೆಯರ ಪ್ರೇರಣೆಯಿಂದಲೂ ಕೆಲವೊಂದು ಸಂದರ್ಭದಲ್ಲಿ ಬಂದಿರುತ್ತದೆ.

ತಂದೆತಾಯಿಯರ ಆಕಾಂಕ್ಷೆಯಿಂದ ಸೇರ್ಪಡೆಯಾದ ಹದಿಹರೆಯದವರು ಸಹಜವಾಗಿ ಉತ್ತಮ ವ್ಯಕ್ತಿತ್ವಕ್ಕೆ ತೊಡಕಾಗುವ ಸಂದರ್ಭಗಳು ಇರುತ್ತವೆ. ಬೆಳವಣಿಗೆ, ಅದೇ ಮಾದರಿಯಾಗಿ ಸಾಗಲೂ ಕಾರಣವಾಗುತ್ತದೆ. ಹುಡುಗಿಯರಿಗೆ, ಈ ಒತ್ತಡಗಳು ಜಾಸ್ತಿ ಮತ್ತು ಕಟುಬದ್ಧತೆಯು ಸಹ ಇರುತ್ತವೆ. ಹೇಳಿಕೆಗನುಗುಣವಾಗಿ ಅನಸರಿಸಬೇಕಾದ ಹಂತ ದೊರೆತಾಗ ಜೀವನದ ತಿರುವೆ ಬದಲಾಗುವ ಸಂದರ್ಭಗಳಿರುತ್ತವೆ.

ಕೋಷ್ಟಕ ೩

ಇಡೀ ದಿನದ ಚಟುವಟಿಕೆಯ ಬಗ್ಗೆ ಕುಟುಂಬದವರ ಅಭಿಪ್ರಾಯ ಹೇಗಿರುತ್ತದೆ ಎಂದು ಕೇಳಿದಾಗ





ವಿವರ : ಸ್ವತಂತ್ರ್ಯ ಪ್ರಕೃತಿಯ ಪ್ರತಿ ಜೀವಿಗೂ ಇದೆ. ಮಾನವರ ವ್ಯವಸ್ಥೆಗಳು ಕಟುಬದ್ಧತೆ, ಶಿಸ್ತನ್ನು ಮೂಡಿಸಿಕೊಂಡಿದ್ದಾರೆ. ನಿಜ ಅತಿ ಸ್ವತಂತ್ರ್ಯ ಅತಿಕಟ್ಟುಪ್ಪಣೆಯ ಯಾರಿಗೂ ಒಳ್ಳೆಯದಲ್ಲ. ಆದರೆ ಕಟ್ಟುಪ್ಪಣೆಯಲ್ಲಿಯೆ ಬೆಳೆಯಬೇಕಾದ ಮಹಿಳೆಗೆ ನಿರ್ಬಂಧಗಳ ಪುರುಷರಿಗಿಂತ ಅಧಿಕವಾಗಿವೆ. ಕುಟುಂಬದಲ್ಲಿ ಸಮಾಜೀಕರಣದ ಪ್ರಕ್ರಿಯಯೆ ತಾರತಮ್ಯದ ಮಾದರಿಯಾಗಿ ರಚನೆಗೊಂಡಿರುತ್ತವೆ.

ಹದಿಹರೆಯದವರ ಬಗ್ಗೆ ಕುಟುಂಬದಲ್ಲಿಯ ಇಡೀ ದಿನದ ಚಟುವಟಿಕೆಗೆ ಸಂಬಂಧಿಸಿದ ಪ್ರಶ್ನೆಗೆ, ೩೨ ಹುಡುಗರು (೮೦ %), ೧೮ ಹುಡುಗಿಯರ (೪೫ %) ಕುಟುಂಬದಲ್ಲಿ, ಸಹಜ ಅಭಿಪ್ರಾಯವಿರುತ್ತದೆ ಎಂದು ಹೇಳಿದರು.

ಮನೆಯಿಂದ ಹೊರಗಡೆ ಹೋಗಿ ಮರಳಿ ಬರುವಾಗ ಆಂತಕವಿರುತ್ತದೆ ಎಂದು ಹೇಳಿದ ಹದಿಹರೆಯದವರು ೦೬ ಹುಡುಗರು (೧೫ %) ೧೦ ಹುಡುಗಿಯುರು (೨೫ %).

ಇಡೀ ದಿನದ ಚಟುವಟಿಕೆಯ ಬಗ್ಗೆ ಅನಾಸಕ್ತದಿಂದ ಕಾಣುವ ಕುಟುಂಬದಿಂದಲೂ ಮಹಿಳೆಯರ ಪ್ರತಿಶತ ಜಾಸ್ತಿಯಾಗಿದ್ದರು ತಿಳಿಯಿತು. ೦೨ ಹುಡುಗರು (೦೫ %), ೧೨ ಹುಡುಗಿಯರ (೩೦ %) ರು ಕುಟುಂಬದಲ್ಲಿ ವಿನಾಕಾರಣ ಯಾವುದೇ ಸರಳ ತಪ್ಪುಗಳ ಸಹ ದೊಡ್ಡದಾಗಿ ಮಾಡುತ್ತಾ ಅನಾಸಕ್ತಿ ತೋರಿಸುತ್ತಾರೆ ಎಂದರು.

ಹುಡುಗರು ಹೊರಗಡೆ ಸ್ವತಂತ್ರ್ಯವಾಗಿ ಚಲಿಸುವ ವ್ಯವಸ್ಥೆಗಳು ಜಾರಿ ಇವೆ. ಹುಡುಗಿಯರಿಗೂ ಇವೆ. ಕೆಲವು ಸಂದರ್ಭಗಳಲ್ಲಿ ಮಾತ್ರ ಸ್ವತಂತ್ರ್ಯತೆ ಇದೆ. ಉಳಿದ ಸಂದರ್ಭದಲ್ಲಿ ಕಟುಬದ್ಧತೆಯಿಂದ ಆತಂಕ, ಹೆದರಿಕೆ ಭಯಗಳು ಆಗಿರುವ ಸಂದರ್ಭಗಳು ಹೇಳಿದರು. ಕುಟುಂಬದ ಒಪ್ಪಿಗೆಗಳು ಪುರುಷರ ಪರವಾಗಿ ಇರುವುದರಿಂದ ಸಹಜವಾಗಿಯೇ ಇಡೀ ದಿನದ ಚಟುವಟಿಕೆಯಲ್ಲಿ ಇರುತ್ತಾರೆ. ಕಟ್ಟುಪ್ಪಣೆ ಹುಡುಗಿಯರಿಗೂ ಇದ್ದರೂ ಕೂಡ ಗಾಡ ಪ್ರಮಾಣದಲ್ಲಿಲ್ಲ. ಹೀಗಾಗಿ ಕುಟುಂಬದಲ್ಲಿಯ ಸಹಜ ಅಭಿಪ್ರಾಯಗಳಿಗೆ ನಮಗೆ ಕಟುಬದ್ಧತೆಗಳ ಇಡೀ ದಿನವು ಕುಟುಂಬದ ಬಗ್ಗೆ ಆತಂಕವಿರುವುದಿಲ್ಲವೆಂದರು.

ಆತಂಕಗಳಾಗುವುದು ಅವರು ಬೆಳೆದುಬಂದ ಕಟುಬದ್ದತೆಗಳು ಹಾಗೂ ಸಮಾಜದ ಒತ್ತಡಗಳು ಕಾರಣವಾಗುತ್ತದೆ.

ಸ್ತ್ರೀಯರನ್ನು ಪ್ರಾಚೀನ ಕಾಲದಿಂದಲೂ ಸ್ವತಂತ್ರ್ಯತೆಯ ಬಗ್ಗೆ ನಿರಾಕರಣೆಯ ಭಾವನೆಗಳು ಇವೆ. ಪ್ರಸ್ತುತದಲ್ಲಿ ಬದಲಾವಣೆಗಳಾಗುತ್ತರುವುದು ಸಂತೋಷದ ಸಂಗತಿಯಾದರೂ ಪುರುಷರಷ್ಟೆ ಸಮಾನತೆಯ ಸ್ವತಂತ್ರ್ಯ, ಕಾಣದೆ ಇರುವುದು ಇದೆ. ಹೆಣ್ಣು ಮಕ್ಕಳೆಂದರೆ ಅನಾಸಕ್ತ ನಿರ್ಲಿಪ್ತ ತೊರುವ ಕುಟುಂಬಗಳು ಹೇರಳವಾಗಿ ಸಿಗುತ್ತವೆ. ಕುಟುಂಬದ ಈ ಸಮಾಜೀಕರಣ ತರಬೇತಿಗಳು ಮಹಿಳೆಯ ವ್ಯಕ್ತಿತ್ವ ವಿಕಾಸಕ್ಕೆ ತೊಡಕಾಗುತ್ತದೆ. ಅದೆ ಮುಂದುವರೆದಾಗ ಜೀವನದ ಭದ್ರತೆಯೆ ಪರಾವಲಂಬಿಯಾಗಿ ಸಾಗುತ್ತದೆ.

ಕೋಷ್ಟಕ ೪

ಹದಿಹರೆಯದವರು ಕುಟುಂಬದ ಊಟದ ಸಮಯದಲ್ಲಿ ಪಾಲ್ಗೊಳ್ಳುವಿಕೆಯ ವಿವರ

ಸಂ.	ವಿವರ	ಹುಡುಗರು	ಪ್ರತಿಶತ	ಹುಡುಗಿಯರು	ಪ್ರತಿಶತ
೦೧	ಒಟ್ಟಿಗೆ ಸೇರಿ ಊಟಮಾಡುವ	೧೮	೪೫ %	೧೫	೩೭.೦೫ %
೦೨	ಕೂಡಿಕೊಳ್ಳದೇ ಊಟಮಾಡುವ	೨೨	೫೫ %	೨೫	೬೫.೦೫ %
	ಒಟ್ಟು	೪೦	೧೦೦ %	೪೦	೧೦೦ %

ವಿವರ : ಹದಿಹರೆಯದವರು ಊಟದ ಸಮಯದಲ್ಲಿ ಒಟ್ಟಿಗೆ ಕುಳಿತು ಊಟಮಾಡುವ ಅಥವಾ ಬೇರೆ ಬೇರೆಯಾಗಿ ಊಟ ಮಾಡುವ ಅಭಿಪ್ರಾಯದಲ್ಲಿ ಕ್ರ.ಸಂ. ೧. ೧೮ ಹುಡುಗರು ಪ್ರತಿಶತ (೪೫ %) ೧೫ ಹುಡುಗಿಯರು (೩೭.೫ %) ರಷ್ಟು ಒಟ್ಟಿಗೆ ಕುಳಿತು ಊಟ ಮಾಡುತ್ತೇವೆ ಎನ್ನುವ ವಿವರ ನೀಡಿದರು. ಕ್ರ.ಸಂ.೨. ೨೫ ಹುಡುಗಿಯರು ಪ್ರತಿಶತ (೬೫.೫ %) ೨೨, ಹುಡುಗರು (೫೫ %) ಬೇರೆ ಬೇರೆಯಾಗಿ ಊಟ ಮಾಡುತ್ತೇವೆ ಎಂದರು.

ಕುಟುಂಬದಲ್ಲಿ ಒಟ್ಟಿಗೆ ಕೂಡಿಕೊಳ್ಳದೆ ಊಟ ಮಾಡುವ ಹಲವು ಕುಟುಂಬಗಳ ಮಾದರಿಯು ಈ ಹದಿಹರೆಯದವರಿಂದ ತಿಳಿದುಬಂದಿತು. ಹುಡುಗರು ಬೇಗ ಊಟಮಾಡಿ ಹೊರಗಡೆ ತೆರಳುತ್ತೇವೆ ಎಂದರೆ ಇನ್ನೂ ಹಲವರು, ನಾವು ಊಟ ಮಾಡುವಾಗ ನಮ್ಮ ಸಹೋದರಿಯರು ಅಥವಾ ತಾಯಿಯು ಊಟ ಬಡಿಸುತ್ತಾರೆ. ಮತ್ತು ಸಹೋದರಿಯರಿಗಿಂತ ಮೊದಲು ಊಟ ಮಾಡುತ್ತೇವೆ ಎಂದರು.

ಹುಡುಗಿಯದಲ್ಲಿ ಕೆಲವು ಉತ್ತಮ ಪರಿಸರದ ಪರಿಸರದ ಕುಟುಂಬದಿಂದ ಊಟ ಮಾಡುವ ಸಂದರ್ಭದಲ್ಲಿ ಕಲೆತು ಊಟಮಾಡುವ ಮಾಹಿತಿಯು ದೊರತರೆ ಹಲವು ಕುಟುಂಬದಿಂದ ಬೇರೆ ಬೇರೆಯಾಗಿಯೇ ಊಟ ಮಾಡುವುದು ಪ್ರಶತದಲ್ಲಿ ಹೆಚ್ಚಾಗಿರುವುದು ತಿಳಿಯಿತು. ಹದಿಹರೆಯದ ಹುಡುಗಿಯರು ಹೇಳಿಕೆಯು ಹೀಗೆ ಇದೆ. ನಮ್ಮ ಕುಟುಂಬದಲ್ಲಿ ಮೊದಲು ಗಂಡು ಮಕ್ಕಳಿಗೆ ಊಟದಲ್ಲಿ ಪ್ರಾಧಾನ್ಯತೆ ನೀಡುತ್ತಾರೆ. ಅವರು ಊಟ ಮಾಡಿದ ಬಳಿಕ ನಾವು ಊಟಮಾಡುತ್ತೇವೆ. ಕೆಲವೊಂದು ಸಂದರ್ಭದಲ್ಲಿ ಸೀಮಿತ ಅಡುಗೆಯಿಂದ ಕಡಿಮೆಯು ಬಿದ್ದಿದೆ. ಇರುವಷ್ಟರಲ್ಲಿ ಸರಿ ಪಡಿಸಿಕೊಂಡು ಅರ್ಧ ಹೊಟ್ಟೆಯ ಊಟವು ಮಾಡಿದ್ದೇವೆ ಎನ್ನುತ್ತಾ ಊಟದ ಸಂದರ್ಭದಲ್ಲಿ ನಮ್ಮ ಸಹೋದರರು ಚಿಕ್ಕವರಿದ್ದರು. ಊಟ ಬಡಿಸಬೇಕು, ಬಡಿಸುತ್ತೇವೆ. ಕುಟುಂಬ ಸಲಹೆಗನುಗುಣವಾಗಿ ಹೇಳಿಕೆಯ ಸಹ ನಮ್ಮ ಪರವಾಗಿ ಇರುತ್ತವೆ. ನಮಗೆ ಚಿಕ್ಕವರಿಂದಲೂ ಇದು ಮಾದರಿಯಾಗಿ ಬೆಳೆದು ಬಂದಿರುವುದೆಂದು ಹೇಳಿದರು.

ಈ ಹಿನ್ನೆಲೆಯ ಅಂಶವು ಕೆಲವು ಕುಟುಂಬಗಳು ಊಟದ ಸಂದರ್ಭದಲ್ಲಿ ಸಮಾನತೆ ತೋರಿಬಂದರೆ, ಹಲವು ಕುಟುಂಬಗಳು ತಾರತಮ್ಯದ ಬೆರೆತಿರುವುದು ಗೋಚರವಾಗುತ್ತದೆ. ಹದಿಯರದ ವಯಸ್ಸಿನಲ್ಲಿ ಈ ರೂಢಿಗಳು ಮನಸ್ಸಿನಲ್ಲಿ ಬೆರೆಯಲು ಕಾರಣವಾಗುತ್ತದೆ. ಈ ಸಂದರ್ಭದಲ್ಲಿ ಹುಡುಗಿಯರಿಗೆ ತೆಗಳಿಕೆ, ಘರ್ಷಣೆಯು ಸಹ ಕುಟುಂಬದಲ್ಲಿ ಸಂಭವಿಸಿರುವ ಘಟನೆಗಳು ತಿಳಿದುಬಂದಿತು. ಸಮಾಜೀಕರಣದ ತರಬೇತಿಯ ಮಾದರಿಯ ಹುಡುಗಿಯರ ಅಸಮಾನತೆಯ ಅಂಶಗಳಲ್ಲಿ ಬೆರೆತಿರುವುದು ಕಂಡುಬರುತ್ತದೆ.

ಕೋಷ್ಠಕ ೫

ಹದಿಹರೆಯದವರ ಅಡುಗೆ ಮಾಡಲು ತಿಳಿದಿರುವ ವಿವರ

ಸಂ.	ವಿವರ	ಹುಡುಗರು	ಪ್ರತಿಶತ	ಹುಡುಗಿಯರು	ಪ್ರತಿಶತ
೦೧	ಅಡುಗೆ ಮಾಡಲು ತಿಳಿದದೆ	೦೮	೨೦	೩೬	೯೦
೦೨	ಅಡುಗೆ ಮಾಡಲು ತಿಳಿದಿಲ್ಲ	೩೨	೮೦	೦೪	೧೦
	ಒಟ್ಟು	೪೦	೧೦೦	೪೦	೧೦೦

ವಿವರ : ಹದಿಹರೆಯದವರಿಗೆ ಅಡುಗೆಯ ತರಬೇತಿಯು ನೀಡುವ ನೀಡದಿರುವ ಅಂಶವು ಕುಟುಂಬದ ಈ ಮೇಲಿನ ಅಂಶದಿಂದ ತಿಳಿಯುತ್ತದೆ.

ಅಡುಗೆ ಮಾಡಲು ತಿಳಿದಿದೆ ಎಂದವರು ೦೮ ಹುಡುಗರು (೨೦ %) ೩೬ ಹುಡುಗಿಯರು (೯೦ %) ಅಡುಗೆಯ ಹುಡುಗರು ಕಲೆತುಕೊಂಡಿದ್ದೇವೆಂದರೆ, ಹುಡಗಿಯರು ನಮಗೆ ಚಿಕ್ಕವವರಿದೂವಾಗಲೇ ರೂಢಿಸಿದ್ದಾರೆ ಎಂಬ ಅನಿಸಿಕೆಯು ನೀಡಿದರು.

ಅಡುಗೆಯ ಮಾಡಲು ಬರುವುದಿಲ್ಲ ವೇಂದ ೩೨ ಹುಡುಗರು (೮೦ %) ೦೪ ಹುಡುಗಿಯರು (೧೦ %) ಮೇಲಿನ ಅಂಶದಿಂದ ತಿಳಿಯಬಹುದು.

ಅಡುಗೆ ಮಾಡುವುದು ಮಹಿಳೆಯರನ್ನು ಮನೆಗೆ ಸೀಮಿತಮಾಡುವುದು ಒಂದೆ. ಇದು ಪ್ರಾಚೀನ ಕಾಲದಲ್ಲೂ ಇತ್ತ ಈಗಲೂ ಮುಂದುವರಿದಿದೆ. ಪುರುಷರು ಮನೆಯಲ್ಲಿ ಅಡಿಗೆ ಮಾಡುವುದರಲ್ಲಿ ಭಾಗಿಯಾಗುವುದು ತುಂಬಾ ವಿರಳ ಈ ಕಾರ್ಯವು ಸ್ತ್ರೀಯರಷ್ಟೆ ನಿರ್ವಹಿಸಬೇಕಾದಂತ ನಿರ್ಬಂದಗಳು ಆಳವಾಗಿ ಬೆರೆತುಹೋಗಿವೆ. ಇದರಿಂದ ತನ್ನ ಮನೆಯ ಪ್ರಪಂಚವಾಗಲೂ ಕಾರಣವಾಗುತ್ತದೆ. ಹಗಲಿರುಳು ಯಂತ್ರದಂತೆ ದುಡಿಮೆ ಸಾಗುತ್ತಿರುವಾಗ ಹೊರ ಪ್ರಪಂಚದ ಜ್ಞಾನವನ್ನೂ ಅರಿತುಕೊಳ್ಳುವುದು ದೂರದ ಮಾತಾಗಿ ಉಳಿಯುತ್ತದೆ. ಅಡುಗೆ ಮಾಡುವುದು ಅದು ಒಂದು ಕಲೆ. ಆದರೆ ಸಮಾಜದಲ್ಲಿ ಇದಕ್ಕೆ ತದ್ವಿರುದ್ಧ ಭಾವನೆಗಳು ಜನ್ಮತಾಳುತ್ತವೆ. ಅಡುಗೆಯ ಕಾರ್ಯ ಕೇವಲ ಹೆಣ್ಣಿನಕಾರ್ಯವನ್ನುವಷ್ಟರ ಮಟ್ಟಿಗೆ

ಬೆಳೆದು ಬರುತ್ತದೆ. ಇದರಿಂದ ಅದು ಮುಂದುವರಿಯುತ್ತಾ ಸಾಗಲು ಸಮಾಜೀಕರಣ ತರಬೇತಿಯು ನೀಡುತ್ತಿದೆ. ಸ್ತ್ರೀಯರ ವ್ಯಾಪ್ತಿಯನ್ನು ನಿರ್ಧರಿಸುತ್ತದೆ. ಇದರಿಂದ ಪುರುಷರು ಅಡಿಗೆಯು ಮಾಡುವ ಕಾರ್ಯದಿಂದ ಮುಕ್ತಿ ಪಡೆದುಕೊಳ್ಳುತ್ತಾರೆ. ಅದಕ್ಕೆ ಹದಿಹರೆಯದವರ ಅಂಕಿಅಂಶ ನೋಡಿದಾಗ ಹುಡುಗಿಯರೆ, ಅಡುಗೆ ಅರಿತಿರುವುದು, ಕುಟುಂಬವು ಅಡುಗೆ ಮಾಡುವುದಕ್ಕೆ ಕಲಿಸಿರುವ ಮಾಹಿತಿ ನೀಡಿದರು. ಹುಡುಗರು ಅಡುಗೆಯ ಕಲೆ ಬರದೆ ಇರುವ ಮಾಹತಿ ನೀಡಿದರೂ. ಸಮಾಜೀಕರಣದ ಕಲಿಕೆಗಳು ಲಿಂಗ ತಾರತಮ್ಯ ಗೋಚರಿಸುವುದು ಇದರಿಂದ ತಿಳಿದುಬರುತ್ತದೆ.

ಕೆಲವೊಂದು ಸಂದರ್ಭದಲ್ಲಿ ಓದುತ್ತಿರುವ ಗಳಿಗೆಯಲ್ಲಿ ಅಥವಾ ಇನ್ನಾವುದೋ ಮನೋರಂಜನೆ ಸವಿಯುತ್ತಿರುವ ಸಮಯದಲ್ಲಿ ಹದಿಹರೆಯದ ಹುಡುಗಿಯರಿಗೆ ಕರೆದು ಅಡುಗೆ ಕೆಲಸಕ್ಕೆ ನಿರತರಾಗಲೂ ಹೇಳಿಕೆಗಳು ಕುಟುಂಬದಲ್ಲಿರುತ್ತವೆ. ಅವರು ಯಾವುದೇ ಸಂತೋಷ ಗಳಿಕೆಗಳು ತೊರೆದು ಸಲಹೆಗೆ ಅಣಿಯಾಗುವುದು ಮಾತ್ರ ಹುಡುಗಿಗೆ ದೊರೆಯುತ್ತದೆ. ಇದರಿಂದ ಕೆಲವು ಸಂದರ್ಭಗಳಿಂದ ವ್ಯಕ್ತಿತ್ವಕ್ಕೆ ತೊಡಕಾಗುವ ಸಂದರ್ಭಗಳು ಇರುತ್ತವೆ.

ಹುಡುಗರು ಅಡುಗೆ ಕಲಿತಿರುವುದು ಸಹಾಯಕವಾಗಿ ನಿರ್ವಹಿಸುತ್ತಿರುವುದು ಯಾವುದೇ ತಪ್ಪಿಲ್ಲ. ಆದರೆ ಅವರ ಕಲ್ಪನೆಯು ಸಹಾಯಮಾಡುವ ಮನಸ್ಸಿದ್ದರೂ, ಪುರುಷರ ಗುಣದಲ್ಲಿ ಪಾತ್ರದಲ್ಲಿ ಬೆರೆತಿರುವುದರಿಂದ ಮಾಡುವುದಿಲ್ಲ. ಹುಡುಗರು ಅಡುಗೆ ಮಾಡುತ್ತಿದ್ದರೆ, ಕೆಲವೊಂದು ಸಂದರ್ಭದಲ್ಲಿ ಮನೆಯಲ್ಲಿಯೇ ಅಪಹಾಸ್ಯದ ಹೇಳಿಕೆಗಳು ಸೃಷ್ಟಿಯಾಗಿಬಿಡುತ್ತವೆ. ಇದರಿಂದ ಹುಡುಗರು ತಮ್ಮ ಪಾತ್ರದಲ್ಲಿಯೇ ಬೆಳೆಯಲು ಕಾರಣವಾಗುತ್ತದೆ.

ಚಿಕ್ಕವರಿರುವಾಗಲೇ ಸಮಾನತೆಯ ಮಾದರಿಯ ರೂಢಿಸಿದಾಗ ಸಮಾಜೀಕರಣದ ಲಿಂಗತಾರತಮ್ಯಗಳು ಈರೀತಿ ಬೆಳೆವಣಿಗೆ ಕಲಿಕೆ ಸಹಾಯಕವಾಗುತ್ತವೆ ಎಂದರೆ ತಪ್ಪಿಲ್ಲ.

ಕೋಷ್ಟಕ ೬

ಲಿಂಗ ತಾರತಮ್ಯದ ಬಗ್ಗೆ ಅಭಿಪ್ರಾಯ ನೀಡಿದ ಹದಿಹರೆಯದವರ ಸಾರಾಂಶದ ಹಿನ್ನೆಲೆ ಹೀಗಿರುತ್ತದೆ

ಸಂ.	ವಿವರ	ಹುಡುಗರು	ಪ್ರತಿಶತ	ಹುಡುಗಿಯರು	ಪ್ರತಿಶತ
೦೧	ಇದು ತಪ್ಪು ಎಂದು ಹೇಳಿದರು	೦೮	೨೦	೩೮	೭೦
೦೨	ಇದು ಸಹಜ	೧೮	೪೫	೦೮	೨೦
೦೩	ಇತರೆ	೧೪	೩೫	೦೪	೧೦
	ಒಟ್ಟು	೪೦	೧೦೦	೪೦	೧೦೦

ವಿವರ : ರಾಜು ಮತ್ತು ಕಮಲ ಇಬ್ಬರು ಶಾಲೆಯಿಂದ ಮನೆಗೆ ಹಿಂತುರುಗಿದರು. ರಾಜನೂ ಹಾಲು ಕುಡಿದು ಆಟ ಆಡುವ ಮೈದಾನಕ್ಕೆ ತೆರಳಿದನು. ಕಮಲಳು ಹಾಲು ಕುಡಿದು ತಾಯಿಯ ಅಡುಗೆ ಕೆಲಸದಲ್ಲಿ ನೆರವಾದಳು. ನಂತರ ಇಬ್ಬರು ಪಾಠ ಓದಲು ಕುಳಿತರು.

ಈ ಮೇಲಿನ ಪಾಠದ ಸಾರಾಂಶದ ಹಿನ್ನೆಲೆಯಿಂದ ಹದಿಹರೆಯದವರು ಈ ತಾರತಮ್ಯವು ತಪ್ಪಾಗಿದೆ ಎಂದವರು ೦೮ ಹುಡುಗರು (೨೦ %), ೨೮ ಹುಡುಗಿಯರು (೭೦ %) ಲಿಂಗತಾರತಮ್ಯದ ನೋಟ ಸ್ಪಷ್ಟಪಡಿಸಿದರು.

ಇದು ಸಹಜ ಎಂದು ಹೇಳಿದ ೧೮ ಹುಡುಗರು (೪೫ %) ೦೮ ಹುಡುಗಿಯರು (೨೦ %) ತಾರತಮ್ಯವನ್ನು ಗುರುತು ಹಿಡಿಯಲು ಆಗಲಿಲ್ಲ. ಇತರೆಯಾಗಿ ಹೇಳಿರುವ ೧೪ ಹುಡುಗರು (೩೫ %) ೦೪ ಹುಡುಗಿಯರು ಪ್ರತಿಶತ (೧೦ %) ರಷ್ಟು ಸಮಾನತೆ ಇದೆ. ಒಳ್ಳೆಯದು ಎಂದು ತಿಳಿಸಿದರು.

ಈ ಹಿನ್ನೆಲೆಯಿಂದ ಪಾಠದಲ್ಲಿಯ ಸಾರಂಶವು ಅರ್ಥೈಸಿಕೊಂಡಿರುವ ಹದಿಹರೆಯದವರ ರಾಜು ಮತ್ತು ಕಮಲಳಿಗೆ ಭೇದದ ನೋಟಗಳಿವೆ. ಒಂದು ವೇಳೆ ಕಮಲಳು ಹೊರಗಡೆ ಆಟವಾಡುವ ಹೋಗುವ ಮನಸ್ಸಿದ್ದರೂ ಅಮ್ಮನ ಕರೆ ಸಿದ್ಧವಾಗಿರುತ್ತದೆ ಎನ್ನುವ ಅನಿಸಿಕೆ ನೀಡಿದರು.

ಇನ್ನೂ ಕೆಲವರು ಇದು ಸಹಜ ರಾಜು ಹುಡುಗನಾಗಿದ್ದರಿಂದ ಆಟವಾಡಬೇಕು ಕಮಲ ಅಡುಗೆ ಸಹಾಯ ಮಾಡುವಲ್ಲಿ ಯಾವ ತಪ್ಪು ಇಲ್ಲ ಎಂದರು.

ಇತರೆಯಲ್ಲಿ ಹೇಳಿದ ಕೆಲವರು ಇದು ಸರಿಯಾಗಿದೆ. ಇದರಲ್ಲಿ ಇಬ್ಬರೂ ಓದಿ ಮುಂದೆ ಬರುತ್ತಾರೆ ಎಂದರು.

ಒಟ್ಟಾರೆಯಾಗಿ ಪ್ರತಿಶತದಲ್ಲಿ ಇದು ತಪ್ಪು ಎಂದು ಹೇಳಿದವರು ತಾವು ಬೆಳೆದು ಬಂದ ಹಿನ್ನೆಲೆಯ ಚಿತ್ರಣ ಅರಿವಿಗೆ ಬಂದು ಲಿಂಗ ತಾರತಮ್ಯವನ್ನು ಕಂಡುಹಿಡಿದಿದ್ದಾರೆ. ಸಹಜವಾಗಿ ಗುರುತಿಸಿದ ಕೆಲವು ಹುಡುಗ ಹುಡುಗಿಯರ ಅದಕ್ಕೆ ಬದ್ಧವಾಗಿರುವು ಸಹಜ ಎನ್ನುವ ಮಾದರಿಯ ಉತ್ತರ ನೀಡಿ ಸಮಾಜದಲ್ಲಿಯ ತಾರಮತ್ಯ ಅರ್ಥೈಸಿಕೊಳ್ಳದಿರುವರು ಕಾಣಬರುತ್ತಾರೆ. ಇದು ಸರಿಯಾಗಿದೆ ಎನ್ನುವವರು ಸೂಕ್ಷ್ಮವಾಗಿರುವ ತಾರತಮ್ಯವನ್ನು ಗುರುತಿಸಲಿಲ್ಲ. ಸಮಾನತೆಯ, ಒಳ್ಳೆಯ ಮನೆಯೆಂದು ಹೇಳಿಕೆ ನೀಡಿದರು. ತಾರತಮ್ಯವು ಸಮಾಜದಲ್ಲಿ ಬೆರೆತಿರುವುದಲ್ಲದೆ ಶಿಕ್ಷಣ ಕ್ಷೇತ್ರದಲ್ಲಿಯೂ ಸಹ ಈ ತಾರತಮ್ಯಗಳು ಪಠ್ಯಕ್ರಮದಲ್ಲಿ ಪ್ರಚಾರದಲ್ಲಿದ್ದವೂ ಹೆಣ್ಣು ಹುಡುಗಿಯರನ್ನು ಇನ್ನು ತಮ್ಮ ಪಾತ್ರದಲ್ಲಿ ಸಿದ್ಧಗೊಳ್ಳಲಿ ಎನ್ನುವ ನೋಟದಿಂದ ತಾರತಮ್ಯವನ್ನು ಬೆಳೆಸಿಕೊಂಡು ಬರುವಲ್ಲಿ ಎಲ್ಲಾ ವಿವರ ವಲಯಗಳು ಪ್ರೋತ್ಸಾಹಿಸುತ್ತಿದ್ದವು ಎಂದರೆ ಎಂತಹ ವಿಪರ್ಯಾಸದ ಸಂಗತಿ ಎನ್ನುವುದು ಅಷ್ಟೇ ಸತ್ಯ.

ಕೋಷ್ಟಕ ೭

ಹದಿಹರೆಯದವರಿಗೆ ಇಷ್ಟವಾದ ಬಟ್ಟೆಗಳನ್ನು ತೆಗೆದುಕೊಳ್ಳಲು ಮನೆಯವರ ಒಪ್ಪಿಗೆ ನೀಡುವ ವಿವರ

ಸಂ.	ವಿವರ	ಹುಡುಗರು	ಪ್ರತಿಶತ	ಹುಡುಗಿಯರು	ಪ್ರತಿಶತ
೦೧	ಒಪ್ಪಿಗೆ ನೀಡುತ್ತಾರೆ	೨೪	೬೦	೨೨	೫೫
೦೨	ಒಪ್ಪಿಗೆ ನೀಡುವುದಿಲ್ಲ	೦೮	೨೦	೦೫	೧೨.೫
೦೩	ಇತರೆ	೦೮	೨೦	೧೩	೩೨.೫
	ಒಟ್ಟು	೪೦	೧೦೦	೪೦	೧೦೦

ವಿವರ : ಕುಟುಂಬಕ್ಕೆ ಅನುಗುಣವಾಗಿ ಇಷ್ಟವಾದ ಬಟ್ಟೆಗಳನ್ನು ತೆಗೆದುಕೊಳ್ಳುವುದಕ್ಕೆ ಯಾವ ರೀತಿ ನಿರಾರಿಸುತ್ತಾರೆ. ಮತ್ತು ಪ್ರೋತ್ಸಾಹಿಸುತ್ತಾರೆ ಎನ್ನುವುದು ಮೇಲಿನ ಅಂಕಿಅಂಶ ನೋಡಿದಾಗ ತಿಳಿಯುತ್ತದೆ. ಪ್ರಸ್ತುತ ನಡುವಳಿಕೆಗಳ ಬದಲಾವಣೆಯಲ್ಲಿ ಒಪ್ಪಿಗೆಗಳ ನಿರಾಕರಣೆಯು ಕಡಿಮೆ ಪ್ರಮಾಣದಲ್ಲಿದೆ.

ಇಷ್ಟವಾದ ಬಟ್ಟೆಗಳನ್ನು ತೆಗೆದುಕೊಳ್ಳುವುದಕ್ಕೆ ಒಪ್ಪಿಗೆ ನೀಡುತ್ತಾರೆ ಎಂದು ೨೪ ಹುಡುಗರು (೬೦ %) ೨೨ ಹುಡುಗಿಯರು (೫೫ %) ತಮ್ಮ ಅಭಿಪ್ರಾಯವನ್ನು ನೀಡಿದರು.

ಒಪ್ಪಿಗೆ ನೀಡುವುದಿಲ್ಲವೆಂದು ಕೆಲವು ಕಟಿಬದ್ಧ ಸಂಪ್ರದಾಯಸ್ಥ ಕುಟುಂಬದಲ್ಲಿದುದು ತಿಳಿಯಿತು. ಅದರಲ್ಲಿ ೦೮ ಹುಡುಗರು (೨೦ %) ೦೫ ಹುಡುಗಿಯರ ಪ್ರತಿಶತ ೧೨.೫ ಎಂದು ಹೇಳಿದರು.

ಇತರೆಯಲ್ಲಿ ಬರುವ ೦೮ ಹುಡುಗರು (೨೦ %), ೧೩ ಹುಡುಗಿಯರು ೩೨.೫ ನಮ್ಮ ಮನಸ್ಸಿಗೆ ಹಿಡಿಸಿದ ನವ ಮಾದರಿಯ ಉಡುಪು ಆಯ್ಕೆ ಮಾಡಿಕೊಂಡರೆ ಕುಟುಂಬದವರ ತೆಗಳಿಕೆ, ನಿರಾಕರಣೆಯು ಇರುತ್ತದೆ. ಕುಟುಂಬದವರ ಆಕಾಂಕ್ಷೆಗನುಗುಣವಾಗಿ ನಮ್ಮ ಆಯ್ಕೆಯನ್ನು ಮರೆಯಾಚಿ ಬಿಡುತ್ತೇವೆ ಎಂದು ಹದಿಹರೆಯದವರ ಸ್ವ ಇಚ್ಛೆಗೆ ತೊಡಕು ಇರುವುದು ತಿಳಿಸಿದರು. ಅದರಲ್ಲಿ ಹುಡುಗರಿಗಿಂತ ಹುಡುಗಿಯರಿಗೆ ಈ ರೀತಿಯ ಒತ್ತಾಸೆಗಳು ಮೇಲಿನ ಅಂಕಿಅಂಶದಿಂದ ತಿಳಿಯುತ್ತದೆ. ನವ ನವೀನ ಉಡುಪುಗಳ ಮಾದರಿಯು ಪ್ರತಿಪಟ್ಟಣಗಳಲ್ಲಿ ವಿಜೃಂಭಿಸುತ್ತಿವೆ. ಹಾಗೆ ಹದಿಹರೆಯದವರ ಮನಸ್ಸು ಕೂಡ ಹೊಸ ಮಾದರಿಗೆ ತೆರಳುತ್ತಿರುವುದು. ಸಹಜ ಲಿಂಗ ತಾರತಮ್ಯದಲ್ಲಿ ಹುಡುಗಿಗೆ ಸ್ವ ಇಚ್ಛೆಗೆ ಅವಕಾಶ ನೀಡುವುದಿಲ್ಲ.

ಕೋಷ್ಟಕ ೮

ಹಬ್ಬಹರಿದಿನಗಳಲ್ಲಿ ಹದಿಹರೆಯದವರ ಕೆಲಸದ ಸ್ವರೂಪ ಮತ್ತು ಪಾಲ್ಗೊಳ್ಳುವಿಕೆಯ ವಿವರ

ಸಂ.	ವಿವರ	ಹುಡುಗರು	ಪ್ರತಿಶತ	ಹುಡುಗಿಯರು	ಪ್ರತಿಶತ
೦೧	ಅಡುಗೆಯ ಕೆಲಸ ಸಹಾಯಕರಾಗಿ	೦೪	೧೦	೨೦	೫೦
೦೨	ಆನಂದ ಹಂಚಿಕೊಳ್ಳುವುದು	೨೮	೭೦	೧೬	೪೦
೦೩	ಇತರೆ	೦೮	೨೦	೦೪	೧೦
	ಒಟ್ಟು	೪೦	೧೦೦	೪೦	೧೦೦

ವಿವರ : ಹಬ್ಬ ಹರಿದಿನಗಳಂತಹ ಸಂದರ್ಭದಲ್ಲಿ ಮಕ್ಕಳಿಗೆ ಮನೆಯವರಿಗೆ ಖುಷಿಯೋ ಖುಷಿ ಇರುತ್ತದೆ ನಿಜ. ಆದು ಯಾರಿಗೆ ಎಷ್ಟು ಎಂದು ಲೆಕ್ಕ ಹಾಕಿದಾಗ, ಕೆಲಸಗಳ ಸ್ವರೂಪ ತಿಳಿದುಕೊಂಡಾಗ ತಿಳಿದು ಬರುತ್ತದೆ. ಸಂತೋಷ ಸಂಭ್ರಮಗಳು ಸ್ತ್ರೀ ಪುರುಷರು ಸಮನಾಗಿ ಹಂಚಿಕೊಳ್ಳುತ್ತಾರೆ. ಏಕಪಾತ್ರ ಸಂತೋಷ ಪುರುಷರಾದರೆ ದ್ವಿಪಾತ್ರದ ನೋವು ಸಂತೋಷ ಮಹಿಳೆಯರದಿರುತ್ತದೆ. ಯಾಕೆಂದರೆ ಹಬ್ಬದಂತಹ ಸಂದರ್ಭದಲ್ಲಿ ನಾನಾ ರೀತಿಯ ಅಡುಗೆಯ ಕೆಲಸಗಳು ವಿಶೇಷ ಒತ್ತಡಗಳಿದ್ದರೆ, ಹಾಗೂ ದಿನಚರಿ ಕೆಲಸಗಳು ಆ ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ಉದಾ ಬಟ್ಟೆ ತೊಳೆಯುವುದು, ಇದು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನಡೆಯುವ ಸತ್ಯ ಸಂಗತಿ.

ಹದಿಹರೆಯದವರ ಮೇಲಿನ ಕೋಷ್ಟಕ ನೋಡಿದಾಗ ೦೪ ಹುಡುಗರು ೨೦ ಹುಡುಗಿಯರು, ಕೆಲಸಕಾರ್ಯಗಳಲ್ಲಿ ಭಾಗಿಯಾಗುವುದು ತಿಳಿಯುತ್ತದೆ. ಆನಂದ ಸಂತೋಷವನ್ನು ಹಂಚಿಕೊಳ್ಳುವವರಲ್ಲಿ ೨೮ ಹುಡುಗರು (೭೦ %) ೧೬ ಹುಡುಗಿಯರು (೪೦ %) ತಿಳಿದುಬರುತ್ತದೆ. ಇವರಿಗೆ ಕೆಲಸದ ಒತ್ತಡಗಳು ಇಲ್ಲದಿರುವುದು ತಿಳಿಸಿದರು.

ಇತರೆಯಲ್ಲಿ ಹೇಳುವ ೦೮ ಹುಡುಗರು (೨೦ %), ೦೪ ಹುಡುಗಿಯರು (೧೦ %) ಸಾಮಾನ್ಯವಾಗಿ ಪಾಲ್ಗೊಳ್ಳುತ್ತೇವೆ. ಸಹಜವಾಗಿ ಇರುತ್ತೇವೆ. ತಮಗೆ ಒದಗಿರುವ ಪ್ರತ್ಯೇಕ ಕೆಲಸಗಳಲ್ಲಿ ನಾವೆ ಆಯ್ಕೆ ಮಾಡಿಕೊಂಡು ಮಾಡುತ್ತೇವೆಂದು ತಿಳಿಸಿದರು.

ಹದಿಹರೆಯದ ಹುಡುಗಿಯರು ಅಡುಗೆ ಕೆಲಸದಲ್ಲಿ ಸಹಾಯಕವಾಗಿ ಮತ್ತು ಅಡುಗೆ ಮಾಡುವ ಕೆಲಸಗಳಿರುವುದರಿಂದ ವಿಶೇಷ ಒತ್ತಡಗಳು ಕುಟುಂಬದವರಿಂದ ಜಾಸ್ತಿ ಇರುವುದರ ಬಗ್ಗೆ ತಿಳಿಸಿದರು. ಪುರುಷರು ಸಹಾಯಕರಾಗಿ ಕೆಲಸ ಮಾಡುವುದು ತುಂಬಾ ವಿರಳ ಕೆಲಸ ಕಾರ್ಯ ಮುಗಿದ ನಂತರವೇ ನಾವು ಹಬ್ಬ ಹರಿದಿನಗಳಲ್ಲಿ ಭಾಗವಹಿಸುವುದು ಸಾಧ್ಯವಾಗುತ್ತದೆ. ಅಡುಗೆ ಮಾಡಬೇಕಾದ ಹಣೆಪಟ್ಟಿ ಹಚ್ಚಿರುವ ಪುರುಷರು ಅದನ್ನು ಸ್ತ್ರೀಯರೇ ನಿಬಾಯಿಸಬೇಕೆಂಬ ಉತ್ತರ ಬೇರೆ ನೀಡುತ್ತಾರೆ.

ಆನಂದ ಹಂಚಿಕೊಳ್ಳುವಲ್ಲಿ ಹುಡುಗರ ಪಾತ್ರ ಜಾಸ್ತಿ ಕಂಡುಬಂದಿತು. ಗೆಳೆಯರ ಜೊತೆ, ಸಿಹಿತಿಂಡಿ ತಿನ್ನುವುದು, ಹೊಸ ಬಟ್ಟೆ ಹಾಕಿಕೊಳ್ಳುವುದು. ಹೊರಗಡೆ ಸ್ವತಂತ್ರ್ಯವಾಗಿ ಚಲಿಸುವುದು. ಹಾಗೆ ಕೆಲವು ಹುಡುಗಿಯರು ಸಂತೋಷದಿಂದ ಭಾಗವಹಿಸಿ ಸ್ವತಂತ್ರ್ಯವಾಗಿರುತ್ತೇವೆ. ಕುಟುಂಬದಲ್ಲಿ ಕಲೆತು ಸಹೋದರ ಸಹೋದರಿಯರು ಒಟ್ಟಿಗೆ ಸಂಭ್ರಮದಿಂದ ಪಾಲ್ಗೊಳ್ಳುತ್ತೇವೆ ಎಂದರು. ಇನ್ನೂ ಕೆಲವರು ಕೆಲಸಕಾರ್ಯದಲ್ಲಿ ತಾವೆ ಆಯ್ಕೆ ಮಾಡಿಕೊಂಡು ಸಹಾಯಕರಾಗಿರುತ್ತೇವೆ ಎಂದರು.

ಸ್ತ್ರೀಯರಿಗಾಗಿ ಮೀಸಲು ಮಾಡಿರುವ ಪಾತ್ರಗಳು ಸ್ವತಃ ಸ್ತ್ರೀಯ ನಿರ್ವಹಿಸಬೇಕೆಂಬ ಸ್ವರೂಪ ಮೇಲಿನ ಅಂಕಿಅಂಶಗಳಿಂದ ಲಿಂಗತಾರತಮ್ಯವು ಕಾಣಿಸುತ್ತದೆ. ಹುಡುಗರು ಹಬ್ಬ ಹರಿದಿನಗಳ ಸಂದರ್ಭದಲ್ಲಿ ಸಹಾಯ ಮಾಡಲು ಅದಕ್ಕೆ ತೆಗಳುವವರು ಕುಟುಂಬದಲ್ಲಿ ಇರುವುದಿಲ್ಲ. ಯಾಕೆಂದರೆ ಅಡುಗೆ ಮಾಡುವುದು ಹುಡುಗರ ಕ್ಷೇತ್ರವಲ್ಲ ಎಂಬ ಗಟ್ಟಿ ಭಾವನೆ ಇಳಿದುಹೋಗಿರುವುದು ತಿಳಿಯುತ್ತದೆ. ಹುಡುಗಿಯರು ಕೆಲಸಕಾರ್ಯಗಳು ಬಿಟ್ಟು ಸ್ವತಂತ್ರವಾಗಿ ಇರುವ ಹಾಗಿರುವುದಿಲ್ಲ. ಒಂದು ವೇಳೆ ಹಾಗೆ ಮಾಡಿದರೆ. ಕುಟುಂಬದ ತೆಗಳಿಕೆ, ಹದಿಹರೆಯದವರಿಗೆ ಇರುವುದು, ಸಂತೋಷದಲ್ಲಿ ನೋವು ನುಂಗುವ ಸಂದರ್ಭ ಸ್ತ್ರೀಯರಿಗೆ ಇರುತ್ತದೆ ಎಂದರೆ ತಪ್ಪಾಗದು.

ಕೋಷ್ಟಕ ೯

ಕಾಲೇಜಿನಲ್ಲಿ ಹದಿಹರೆಯದವರಿಗೆ ಪ್ರೋತ್ಸಾಹಿಸುವ ಆಟಗಳ ವಿವರ

೪೦ ಹುಡುಗಿಯರಲ್ಲಿ ಈ ಆಟಗಳಿಗೆ ಪ್ರೋತ್ಸಾಹಿಸುತ್ತಾರೆ ಎಂದರು	ಒಟ್ಟು ೪೦ ವಿದ್ಯಾರ್ಥಿಗಳಲ್ಲಿ ಎರಡೂ ಆಟಕ್ಕೂ ಪ್ರೋತ್ಸಾಹಿಸುತ್ತಾರೆ ಎಂದವರು	೪೦ ಹುಡುಗರಲ್ಲಿ ಈ ಆಟಗಳಿಗೆ ಪ್ರೋತ್ಸಾಹಿಸುತ್ತಾರೆ ಎಂದರು
ಖೋಖೊ ಹಗ್ಗದಾಟ ರಿಂಗ್ ಎಸೆತ ಕ್ಯಾರಮ್ ರಂಗೋಲಿ ಸ್ಪರ್ಧೆ	ಉದ್ದ ಜಿಗಿತ ಖೋಖೊ ಕ್ಯಾರಮ್ ಓಟದ ಸ್ಪರ್ಧೆ	ಕ್ರಿಕೇಟ್ ವಾಲಿಬಾಲ್ ಓಟದ ಸ್ಪರ್ಧೆ ಕಬ್ಬಡ್ಡಿ ಎತ್ತರ ಜಿಗಿತ
ಒಟ್ಟು ೨೩ (೫೭.೫%)	ಒಟ್ಟು ೨೫ (೬೨.೫%)	ಒಟ್ಟು ೩೨ (೮೦%)

ವಿವರ : ಕಾಲೇಜಿನಲ್ಲಿ ಹದಿಹರೆಯದ ವಯಸ್ಸಿನವರಿಗೆ ಲಿಂಗಕ್ಕನುಗುಣವಾಗಿ ಆಟಗಳ ಪ್ರೋತ್ಸಾಹಿಕೆಯಲ್ಲಿಯೂ ತಾರಮತ್ಯದ ನೋಟಗಳು ಕಾಣುತ್ತವೆ. ಒಟ್ಟು ೨೩ ಹುಡುಗಿಯರು ಪ್ರತಿಶತ ೫೭.೫ ಖೋಖೋ, ಹಗ್ಗದಾಟ, ರಿಂಗ್ ಎಸೇತ್, ಕ್ಯಾರಮ, ರಂಗೋಲಿ ಸ್ಪರ್ಧೆಯ ಬಗ್ಗೆ ಪ್ರೋತ್ಸಾಹಿಸುತ್ತಾರೆ. ಹಾಗೆ ಭಾಗವಹಿಸುತ್ತಿವೆ ಎನ್ನುವ ಉತ್ತರ ನೀಡಿದರೆ ೩೨ ಹುಡುಗರು (೮೦ %) ಕ್ರಿಕೇಟ್, ವಾಲಿಬಾಲ್, ಓಟದ ಸ್ಪರ್ಧೆ, ಎತ್ತರ ಜಿಗಿತ ಇನ್ನಿತರ ಪುರುಷರ ಆಟಗಳೆಂದು ವಿವರಣೆಯು ನೀಡಿದರು. ಒಟ್ಟು ೪೦ ವಿದ್ಯಾರ್ಥಿಗಳಲ್ಲಿ ೨೫ ವಿದ್ಯಾರ್ಥಿ ವಿದ್ಯಾರ್ಥಿನಿಯರು ಎರಡು ಆಟಗಳಿಗೆ ಪ್ರೋತ್ಸಾಹಿಸುತ್ತಾರೆ ಎಂದರು ಪ್ರತಿಶತ ೬೨.೫ ಹುಡುಗಿಯರು ಮತ್ತು ಹುಡುಗರು ೨೩ + ೩೨ = ೫೫ ವಿದ್ಯಾರ್ಥಿಗಳು ಭಿನ್ನ ಆಟಗಳ ಹೇಳಿಕೆಯ ಉತ್ತರವು ಪ್ರತ್ಯೇಕವಾಗಿ ಲಿಂಗತಾರತಮ್ಯದ ನೋಟಗಳು ಸ್ಪಷ್ಟಪಡಿಸುತ್ತವೆ. ಹುಡುಗಿಯರ ಆಟಗಳು ಹೆಚ್ಚಿನ ಶ್ರಮದಾಯಕವಲ್ಲದ ಮತ್ತು ಸಂಪ್ರದಾಯಿಕ ಮಾದರಿಯ ರಂಗೋಲಿಯಂತಹ ಸ್ಪರ್ಧೆಗಳು ಹುಡುಗಿಯರಿಗೆ ಮಾತ್ರ ಸೀಮಿತ. ಹುಡುಗರು ಇದನ್ನು ಮಾಡುವ ಹಾಗಿಲ್ಲದಿರುವುದು ತಿಳಿದುಬಂದಿದೆ.


ದ್ವಿ ಆಟದ ಭಾಗವಹಿಸಲು ಕೆಲವು ವಿದ್ಯಾರ್ಥಿಗಳು ಹುಡುಗಿಯರು ಭಾಗವಹಿಸದೆ ಇರುವ ನಕರಾತ್ಮಕ ಉತ್ತರ ನೀಡಿದರು. ಓಟದ ಸ್ಪರ್ಧೆಗಳಂತವುಗಳಲ್ಲಿ ಭಾಗವಹಿಸಿದರೆ, ಏನೆಂದು ಕೊಳ್ಳುತ್ತಾರೆ ಎಂಬ ಹಿಂಜರಿಕೆಯ ಭಾವನೆಯು ಹೇಳಿದರು. ಅವರು ಬೆಳೆದು ಬಂದ ಲಿಂಗ ತಾರತಮ್ಯದ ತರಬೇತಿಯ ಪಾತ್ರಗಳು ಕಾಯ್ದುಕೊಂಡು ಬರುವಲ್ಲಿ ಮನಸ್ಸು ಸಿದ್ಧವಾಗಿರುವುದು ತಿಳಿಯುತ್ತದೆ.

ಇನ್ನೂ ಕೆಲವು ಕಡೆ ಆಟಗಳಲ್ಲಿ ಸ್ಪರ್ಧಿಸದೇ ಇರುವುದು ನಿರಾಕರಣೆಯ ಉತ್ತರವು ದೊರೆಯುತ್ತದೆ. ಹಾಗೆಯೇ, ಕಾಲೇಜುಗಳಂತಹ ಶಿಕ್ಷಣದಲ್ಲಿ ಪ್ರತ್ಯೇಕತೆಯ ಆಟಗಳು ತಾರತಮ್ಯದ ಆಟಗಳೇ ಎಂದರು ತಪ್ಪಾಗದು. ಇದರಿಂದ ಕೆಲವು ಹುಡುಗಿಯರ ಸೃಜನಾತ್ಮಕ ಪ್ರತಿಭೆಯು ಮರೆಮಾಚಿ ಹೋಗುವ ಸಂದರ್ಭವಿರುತ್ತದೆ.

ಸಚಿನ್ ತೆಂಡಲ್ಕೂರ್ ಅಂತಹ ಹೆಸರು ಸ್ಪಷ್ಟವಾಗಿ ಗುರುತಿಸಿದರೆ ಹುಡುಗಿಯರು ಆ ಕ್ಷೇತ್ರದಲ್ಲಿ ಪ್ರವೇಶವು ಎರಡನೆಯದಾಗಿ ಮುಂಚೂಣಿಯಲ್ಲಿ ಇದೆ. ಕೆಲವು ಮಹಿಳೆಯರು ಬಿಟ್ಟರೆ ಪುರುಷ ಹೋಲಿಕೆಗೆ ಸಮಪ್ರಮಾಣದಲ್ಲಿ ಇಲ್ಲದಿರುವುದು ಕಾಣುತ್ತದೆ. ಆಟಗಳು ದೈಹಿಕ ಸಮತೋಲನವನ್ನು ಕಾಯಕೊಳ್ಳಲು ಆರೋಗ್ಯ ಸ್ಥಿತಿಯಲ್ಲಿ ಇರಲೂ ಸಹಾಯಕವಾಗುತ್ತದೆ. ನಿಜ ಎಷ್ಟೋ ಸ್ತ್ರೀಯರು ಅದಕ್ಕೆ ತದ್ವಿರುದ್ಧ ನುಡಿಗಳೆ ನುಡಿಯುತ್ತಾರೆ. ಅವರು ಬೆಳೆಸಿರುವ ವಿಧಾನವು ಮೂಲೆ ಗುಂಪಾಗಿಸಲು ಪೂರಕವಾಗುತ್ತದೆ ಎಂದರೆ ತಪ್ಪಾಗದು.

ಕೋಷ್ಟಕ ೧೦

ನಮ್ಮ ಸಮಾಜದಲ್ಲಿ ಗಂಡುಹೆಣ್ಣು ಮಕ್ಕಳ ನಡುವೆ ಭೇದ ಭಾವ ಮಾಡುತ್ತಾರೆ ಎಂಬ ಅನುಭವ ನೀಡಿದ ಹದಿಹರೆಯದವರು



ವಿವರ : ಗಂಡು ಮತ್ತು ಹೆಣ್ಣು ಮಕ್ಕಳ ಭೇದ ಸಮಾಜದಲ್ಲಿರುವುದು ತಿಳಿಯುತ್ತದೆ. ಆದರೆ ಹದಿಹರೆದವರು ತಿಳಿದುಕೊಂಡವರು ಎಷ್ಟು ಎಂದರೆ ೩೦ ಹುಡುಗರು (೭೫ %) ೩೮ (೯೫ %)ಹುಡುಗಿಯರು ಭೇದವಿದೆ ಎಂದು ಗುರುತಿಸಿ ಹೇಳಿದರು.

ಭೇದವಿಲ್ಲವೆಂದು ೧೦ ಹುಡುಗರು (೨೫ %), ೦೨ ಹುಡುಗಿಯರು ಬೆರೆತುಹೋಗಿರುವ ಪಾತ್ರದ ಬಗ್ಗೆ, ತಿಳಿಯದೆ ಇರುವುದರ ಮಾಹಿತಿ ತಿಳಿಯಿತು.

ಪ್ರಗತಿಯ ಪಾತ್ರದಲ್ಲಿ ಸಾಗುತ್ತಿರುವ ಹಾಗೆ ಹುಡುಗಿಯರು ಮುಂದುವರಿಯುತ್ತಿರುವುದು ಕಾಣಿಸುತ್ತದೆ. ಮುಂದುವರಿಯುತ್ತರುವುದರಲ್ಲಿ ಹಿಂದಿನಕ್ಕಿಂತ ಭಿನ್ನ ಮಾದರಿಯ ಭೇದಗಳು ರೂಪತಾಳುತ್ತಿವೆ. ಕೊಲೆ, ಅತ್ಯಾಚಾರ ಇನ್ನಿತರ ಘಟನೆಗಳು ಹೆಣ್ಣು ಕನಿಷ್ಠಳೆನ್ನುವ ಕಲ್ಪನೆ ಇರುವುದರ ಕಾರಣದಿಂದ, ದುರ್ಬಲಳಾಗಿರುವಲ್ಲಿ ಮಾಡಿರುವುದು ತಿಳಿಯುತ್ತದೆ. ಈ ಮೇಲಿನ ಅಂಶದಿಂದ ತಮಗೆ ಅನುಭವವಾದ, ಸಮಾಜದಲ್ಲಿ ನಡೆಯುತ್ತಿರುವ, ತಾರತಮ್ಯ ಸ್ವರೂಪಗಳು ಹುಡುಗರಿಗಿಂತ ಹುಡುಗಿಯರು ಹೆಚ್ಚು ತಿಳಿದುಕೊಂಡವರಾಗಿದ್ದಾರೆ. ಸಮಾಜದಲ್ಲಿ ನಡೆಯುತ್ತಿರುವ ಹಲವಾರು ಸ್ತ್ರೀ ಸಮಸ್ಯೆಗಳು ಅರಿತುಕೊಳ್ಳುವಲ್ಲಿ ಹುಡುಗರು ಹೇಳಿಕೆ ನೀಡಿದರೆ ಹುಡುಗಿಯರು ತಮ್ಮ ಕುಟುಂಬದ ಲಿಂಗ ತಾರತಮ್ಯಗಳು ತಿಳಿದುಕೊಂಡು ಸ್ವಹಿತಾಸಕ್ತಿಗೆ ಕುಟುಂಬದಲ್ಲಿ ಸಮಾಜೀಕರಣವೇ ತಾರತಮ್ಯದ ಮಾದರಿಯಾಗಿದೆ ಎಂದರು.

❑



ಅಧ್ಯಾಯ ೮
ಸಮಾರೋಪ

ಸಮಾರೋಪ

ಪುರುಷ ಪ್ರಧಾನ ನೆಲೆಯಲ್ಲಿ ಮಹಿಳೆಯ ಶೋಷಣೆ, ತಾರತಮ್ಯದ ಪರಿಸರವು ನೆಲೆಗೊಂಡಿದೆ. ಈ ಪ್ರಕ್ರಿಯೆ ಸಮಾಜದಲ್ಲಿ ಮುಂದುವರೆಯುತ್ತಲೇ ಇರುವುದನ್ನು ಕಾಣುತ್ತಿದ್ದೇವೆ. ಸಮಾಜೀಕರಣದ ಮೂಲದಿಂದ ಮಹಿಳೆಯ ತಾರತಮ್ಯವನ್ನು ನಿವಾರಿಸಬಹುದಾಗಿದೆ. ಅದು ತಾರತಮ್ಯವಾಗಿಯೇ ಮುಂದುವರೆದಾಗ ಸಮಾಜದ ಅಸಮತೋಲನವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಮಕ್ಕಳು ಮತ್ತು ಹದಿಹರೆಯದ ವಯಸ್ಸಿನಲ್ಲಿ ಬೆರೆತು ಹೋದ ವಿಚಾರ ಕಟ್ಟುಪ್ಪಣೆಗಳು ಮುಂದುವರಿಯುವ ಸಾಧ್ಯತೆ ಇರುವುದರಿಂದ ವಿಶೇಷ ಕಾಳಜಿಯಿಂದ ತರಬೇತಿ ಸ್ವತಂತ್ರ ಒದಗಿಸಿಕೊಡುವುದು ಅವಶ್ಯವಿದೆ. ಇಲ್ಲದಿದ್ದರೆ ಇಂದಿನ ಯುವಕರು ನಾಳಿನ ನಾಗರಿಕರೆನ್ನುವ ಮಾತು ನಿಜವಾಗಲು ಸಮಾಜದ ಆರೋಗ್ಯ ಸ್ಥಿತಿಯಲ್ಲಿ ಮುಂದುವರಿಸಲು ಸಹಾಯಕವಾಗುತ್ತದೆ. ಸಮಾಜದಲ್ಲಿ ಮಹಿಳೆಗೂ ಒಂದು ಬದುಕು ಇದೆ. ಆಸೆ ಆಕಾಂಕ್ಷೆಗಳಿವೆ. ಬೇಡಿಕೆ ಯೋಜನೆಗಳಿವೆ ಎನ್ನುವುದು ಪುರುಷ ಪ್ರಧಾನ ಸಮಾಜ ಮರೆತಂತೆ ಕಾಣಿಸುತ್ತಿದೆ. ಇದರಿಂದ ಬೆಳವಣಿಗೆ ಹೊಂದಬೇಕಾದ ಹದಿಹರೆಯದವರ ಜೀವನವು ಗೊಂದಲದ ಪರಿಸರದಲ್ಲಿ ಒಳ್ಳೆಯ ವ್ಯಕ್ತಿತ್ವ ನಿರ್ಮಾಣ ಅಸಾಧ್ಯವಾಗುತ್ತದೆ. ಸ್ತ್ರೀ ಪುರುಷರನ್ನು ಅಸಮಾನ ನೆಲೆಯಲ್ಲಿ ಪರಿಗಣಿಸದೆ ಸಮಾನತೆಯಿಂದ ಪ್ರೋತ್ಸಾಹಿಸುವುದು ಅಗತ್ಯವಾಗಿದೆ. ಆಧುನಿಕ ಪರಿಸರದಲ್ಲಿ ಬದಲಾವಣೆಗಳು ಕಾಣುತ್ತಿದ್ದರೂ ಮಹಿಳೆಯ ಶೋಷಣೆಯಂತೂ ಕಡಿಮೆಯಾಗಿಲ್ಲ. ಇದು ಹೀಗೆ ಮುಂದುವರಿದರೆ, ಶೋಷಣೆಯನ್ನು ಅನುಭವಿಸುವುದು ಮಹಿಳೆಯೇ ಆಗಿರುತ್ತಾಳೆ. ಅದಕ್ಕಾಗಿ ಸಮಾಜದ ಪ್ರತಿ ವಲಯಗಳಲ್ಲಿ ಮುಕ್ತವಾದ ವಾತಾವರಣ ಕಲ್ಪಿಸುವುದು ಅವಶ್ಯವಾಗಿದೆ. ಸಮಾನತೆ ಪ್ರತಿಯೊಬ್ಬರಿಗೂ ಬೇಕಾದರೂ ಇದರಲ್ಲಿ ಯಾರೂ ಮೇಲೂ ಅಲ್ಲ, ಕೀಳು ಅಲ್ಲ. ಅದನ್ನು ಬೆಳವಣಿಗೆಗನುಗುಣವಾಗಿ ತಂದೆತಾಯಿಗಳು ಮಕ್ಕಳ ಮನಸ್ಸಿನಲ್ಲಿ ಸಮಾನತೆಯ ತತ್ವವನ್ನು ಮೂಡಿಸಬೇಕಾದುದು ಅವಶ್ಯವಾಗಿದೆ.

ಹದಿಹರೆಯದ ವಯಸ್ಸಿನಲ್ಲಿರುವ ತಾರತಮ್ಯದ ಕಟ್ಟಳೆಗಳು ಮಹಿಳೆಗೆ ವಿಶೇಷವಾಗಿ ಕಟ್ಟಿಪ್ಪಣೆ ಬೀರುತ್ತಿರುವುದರಿಂದ ವಿವಿಧ ಸಂಕೋಲೆಗಳಿಗೆ ಅನಿವಾರ್ಯವಾಗಿ ಒಳಗಾಗಿದ್ದಾಳೆ. ಅವರ ಭೌದ್ಧಿಕ ಶಿಸ್ತು ಮೂಡಿಸಲು ಲಿಂಗ ತಾರತಮ್ಯವು ತೊಡಕಾಗಿದೆ. ಸಮಾಜದಲ್ಲಿರುವ ರೂಢಿಸಂಪ್ರದಾಯ ಮೂಢಾಚಾರಗಳು ಮಹಿಳೆಯನ್ನು ಕಡೆಗಣಿಸುತ್ತಿರುವುದು ಇನ್ನೂ ಗೋಚರಿಸುತ್ತಿದೆ. ಶಿಕ್ಷಣ, ಸಂಸ್ಕೃತಿ, ಕುಟುಂಬದಲ್ಲಿಯ ಪರಿಸರ ಉತ್ತಮಗೊಂಡಾಗ ಮಹಿಳೆಯರ ಉತ್ತಮ ಜೀವನದ ತಳಪಾಯವನ್ನು ರೂಪಿಸಬಹುದು. ಸ್ವಾವಲಂಬಿ ಜೀವನಕ್ಕೆ ಭರವಸೆಯು ಮೂಡಿಬರುತ್ತದೆ. ಅದಕ್ಕಾಗಿ, ಹದಿಹರೆಯದಲ್ಲಿ ಮದುವೆಗಿಂತ ಮುಂಚಿತವಾಗಿ ಸ್ವಾವಲಂಬಿ ಜೀವನಕ್ಕೆ ಪ್ರೋತ್ಸಾಹಿಸಬೇಕು. ಸರ್ಕಾರವು ಪ್ರತಿ ಹಳ್ಳಿಗಳಿಗೆ ತಾರತಮ್ಯದ ಅರಿವಿನ ಬಗ್ಗೆ ಭಾವಪೂರ್ಣ ವಿಚಾರಗಳು ಬಿತ್ತಬೇಕಾದುದು ಅವಶ್ಯವಾಗಿದೆ.

ಭಾರತದ ಶ್ರೇಣೀಕೃತ ಸಮಾಜದಲ್ಲಿ ಕೆಳಸ್ತರದ ಜಾತಿಗಳಿಗೆ ಯಾವ ಯಾವ ಸಾಮಾಜಿಕ ನಿಯಮಗಳು ಮತ್ತು ಕಟ್ಟಳೆಗಳು ಅನ್ವಯವಾಗುವವೋ, ಆ ಎಲ್ಲಾ ನಿಯಮಗಳು ಎಲ್ಲಾ ಜಾತಿಯ ಮಹಿಳೆಗೂ ಅನ್ವಯವಾಗುತ್ತವೆ. ಹೀಗಾಗಿ ವಿಷಮ ಸಮಾಜದಲ್ಲಿ ಮಹಿಳೆ ನಿರಂತರ ಶೋಷಣೆಗೆ ಒಳಗಾಗುತ್ತಿದ್ದಾಳೆ. ಮಹಿಳೆಯನ್ನು ತಾರತಮ್ಯದ ನೆಲೆಯಿಂದ ಮುಕ್ತವಾಗಿಸಬೇಕೆಂದರೆ, ಮೊದಲು ಅವಳ ಆರ್ಥಿಕ ಪರಾವಲಂಬನೆಯನ್ನು ಹೋಗಲಾಡಿಸುವುದು ಯಾವತು ಮಹಿಳೆ ಒಟ್ಟು ಉತ್ಪಾದನಾ ವ್ಯವಸ್ಥೆಯಿಂದ ಪಲ್ಲಟಗೊಂಡಳೋ ಅಂದಿನಿಂದಲೇ ಅವಳ ಅಡುಗೆ ಮನೆಯ ಸೆರೆವಾಸ ಪ್ರಾರಂಭವಾಯಿತು. ಮಾನವನ ಸಾಮಾಜಿಕ ಸಂಸ್ಥೆಗಳ ವಿಕಾಸದ ಪ್ರತಿಹಂತದಲ್ಲೂ ಪುರುಷನ ಜೊತೆ ನಿರ್ಣಾಯಕವಾಗಿ ದುಡಿದ ಮಹಿಳೆಯನ್ನ, ಇಂಡಿಯಾದ ಸಮಾಜ ಮೂಲೆ ಗುಂಪು ಮಾಡಿತು. ಹಿಂದೂ ಧರ್ಮಶಾಸ್ತ್ರಗಳು ಮಹಿಳೆಯನ್ನ ನಿರ್ಬಂಧಿಸಲೆಂದೇ ಸಾಮಾಜಿಕ ನಿಯಮಗಳನ್ನು ರೂಪಿಸಿದವು. 'ನಾ ಸ್ತ್ರೀ ಸ್ವಾಂತತ್ರಮರ್ಹತಿ' ಎಂಬ ಸಾಮಾಜಿಕ ಕಾನೂನುಗಳು ಮಹಿಳೆಯ ಎಲ್ಲಾ ಬಗೆಯ ಸೃಜನಶೀಲ ನೆಲೆಗಳನ್ನು ನಾಶಮಾಡಿದವು. ಕೀಳರಿಮೆ ಮತ್ತು ಅಸಹಾಯಕತೆಯಿಂದ ಸಮಾಜದ ಎಲ್ಲ ರಂಗಗಳಲ್ಲಿ ಮಹಿಳೆ, ಆತ್ಮದ್ವೇಷ ಬೆಳೆಸಿಕೊಳ್ಳುವ ವಾತಾವರಣ ಸೃಷ್ಟಿಯಾಯಿತು. ಉತ್ಪಾದನಾ ಕ್ಷೇತ್ರದಲ್ಲಿ ಮಹಿಳೆಗೆ ಯಾವುದೇ ಸ್ಥಾನಮಾನವನ್ನು ನಿರಾಕರಿಸಲಾಯಿತು.

ಸಮಾಜದಲ್ಲಿ ಒಂದು ಸಮುದಾಯವನ್ನು ಬೌದ್ಧಿಕವಾಗಿ ಇಲ್ಲವಾಗಿಸುವದೆಂದರೆ ಅದಕ್ಕೆ ಎಲ್ಲಾ ಬಗೆಯ ಸಾಮಾಜಿಕ ಅಧಿಕಾರಗಳನ್ನು ಇಲ್ಲವಾಗಿಸುವುದು. ಸಾಮಾಜಿಕ ಅಧಿಕಾರಗಳ ನಾಶವೆಂದರೆ, ಉತ್ಪಾದನಾ ವ್ಯವಸ್ಥೆಯ ಮೇಲಿರುವ ಸಹಜ ಹಕ್ಕುಗಳನ್ನು ಇಲ್ಲವಾಗಿಸುವುದು. ಒಂದು ಸಮುದಾಯ ನಿಶ್ಚಿತ ಆರ್ಥಿಕ ಮೂಲಗಳನ್ನು ಕಳೆದುಕೊಳ್ಳುವುದೆಂದರೆ, ಉತ್ಪಾದನಾ ಪರಿಕರಗಳ ಮೇಲೆ ತಮಗಿರುವ ಪಾರಂಪರಿಕ ಅಧಿಕಾರದಿಂದ ದೂರವಾಗುವುದೆಂದೇ ತಿಳಿಯಬೇಕು. ಇಂಡಿಯಾದ ಸಮಾಜ ಕೆಳಜಾತಿಗಳನ್ನು ಮತ್ತು

ಮಹಿಳೆಯನ್ನ ನಿಯಂತ್ರಿಸಲು, ಹತ್ತಿಕ್ಕಲು ಇದೇ ಬಗೆಯ ತಂತ್ರ ಹೂಡಿತು. ಕೃಷಿ ವ್ಯವಸ್ಥೆಯಿಂದ ಹಿಡಿದು ಇಂದಿನ ಆಧುನಿಕ ಉತ್ಪಾದನಾ ವ್ಯವಸ್ಥೆಯವರೆಗೆ ಈ ವಂಚನೆಯ ಪ್ರಕ್ರಿಯೆ ನಡೆಯುತ್ತಲೇ ಬಂದಿದೆ. ಆದರೆ ಕೆಳಜಾತಿಗಳಲ್ಲಿ ಮತ್ತು ಮಹಿಳೆಯಲ್ಲಿ ಸುಪ್ತವಾಗಿ ಅಡಗಿದ್ದ ಸೃಜನಶೀಲತೆಯನ್ನು ನಾಶಮಾಡಲು ಕರ್ಮಠ ಸಮಾಜದ ಕಾನೂನುಗಳಿಗೆ ಸಾಧ್ಯವಾಗಲಿಲ್ಲ. ಹೀಗಾಗಿ ಮಹಿಳೆ ತನ್ನ ಒಳಗೆ ಅನೇಕ ಕೌಶಲ್ಯಗಳನ್ನು ರೂಪಿಸಿಕೊಂಡಳು. ಅವಳ ಆಳದ ಕುಸರೀತನ ಹೊರ ಜಗತ್ತನ್ನು ಚೆಂದಗೊಳಿಸಬಲ್ಲದು. ಆತ್ಮದ್ವೇಷದ ಕುಲುಮೆಯಲ್ಲಿ ರೂಪಗೊಂಡ ಸೃಜನಶೀಲ ನೆಲೆ ಅವಳದು.

ವರ್ತಮಾನದ ಮುಕ್ತ ಸಮಾಜದಲ್ಲಿ ಮಹಿಳೆಗೆ ಅನೇಕ ರಂಗಗಳಲ್ಲಿ ಮುಕ್ತ ಅವಕಾಶಗಳಿವೆ. ಆದರೆ ಪಾರಂಪರಿಕ ಸಮಾಜಗಳ ಒಳಜಗತ್ತು ಇನ್ನೂ ಸಡಿಲಗೊಂಡಿಲ್ಲ. ಸನಾತನ ಕಣ್ಣುಗಳಿಂದಲೇ ಮಹಿಳೆಯನ್ನು ನೋಡಲಾಗುತ್ತಿದೆ. 'ಅವಳು' ದುರ್ಬಲಳೆಂಬ ಸಾಂಪ್ರದಾಯಿಕ ದೃಷ್ಟಿಕೋನ ಇನ್ನೂ ಸಮಾಜವನ್ನು ಆಳುತ್ತದೆ. ಪುರುಷ-ಸ್ತ್ರೀ ಎಂಬ ರೂಢಿಗತ ತಾರತಮ್ಯ ಇನ್ನೂ ಜೀವಂತವಾಗಿರುವುದು ಈ ಬಗೆಯ ದೃಷ್ಟಿಕೋನದಿಂದಲೇ. ಯಾಕೆ ಮಹಿಳೆ ದುರ್ಬಲಳು? ಎಂದು ಪ್ರಶ್ನಿಸಿಕೊಂಡಾಗ ಅವಳ ದೈಹಿಕ ರಚನೆ ಮತ್ತು ಜೈವಿಕ ಪ್ರಕ್ರಿಯೆಯ ಕಡೆಗೆ ಎಲ್ಲರೂ ಬೆರಳು ಮಾಡುತ್ತಾರೆ. ನಿತ್ಯದ ಬದುಕಲ್ಲಿ ಪುರುಷನ ಜೊತೆ ದುಡಿಮೆಯಲ್ಲಿ ಪಾಲ್ಗೊಳ್ಳುವ ಮಹಿಳೆಯ ಎಲ್ಲಾ ಬಗೆಯ ಶ್ರಮವನ್ನು, 'ಪೂರಕ' ದುಡಿಮೆ ಎಂಬಂತೆ ನೋಡಲಾಗುತ್ತಿದೆ. ಈ ದೃಷ್ಟಿಕೋನ ಇಂಡಿಯಾದ ಧರ್ಮಶಾಸ್ತ್ರಗಳಿಂದ ರೂಪಗೊಂಡಿದ್ದು. ಹೊಯ ಶ್ರೇಣೀಕರಣದ ಕಾರಣಗಳಿಂದ ಹುಟ್ಟಿಕೊಂಡದ್ದು.

ಇಂದು ಮಹಿಳೆಗೆ ಯಾವುದೇ ಬಗೆಯ ರಿಯಾಯಿತಿ ತೋರಿಸದೆ, ದುಡಿವ ಎಲ್ಲಾ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಕಲ್ಪಿಸುವುದು ಮೊದಲ ಆಧ್ಯತೆಯಾಗಬೇಕಿದೆ. ಉತ್ಪಾದನಾ ವ್ಯವಸ್ಥೆಯಲ್ಲಿ ಪುರುಷ-ಸ್ತ್ರೀ ಎಂಬ ತಾರತಮ್ಯದ ಭಾವನೆಯನ್ನು ನಾಶಮಾಡುವುದೇ ನೈಜ ಸಮಾಜೀಕರಣವಾಗಿದೆ. ಎಲ್ಲಿ ಮಹಿಳೆ ತಾನೇ ತಾನು ದುಡಿವ ಸ್ವಾವಲಂಬನೆಯನ್ನು ಪ್ರಕಟಿಸುವಳೋ ಆ ಸಮಾಜದಲ್ಲಿ ತಾರತಮ್ಯಗಳು ಸಹಜವಾಗಿ ನಾಶವಾಗುತ್ತವೆ.

ಯಾವ ಕರ್ಮಠ ಕಾನೂನುಗಳು, ಮಹಿಳೆಯನ್ನು ಸಮಾಜದ ಅಲಕ್ಷಿತ ಸಮುದಾಯವೆಂದು ಪರಿಗಣಿಸಿದ್ದವೋ ಆ ಕಾನೂನುಗಳು ಈ ಸಮಾಜೀಕರಣದಿಂದ ನೆಲೆ ಕಳೆದುಕೊಳ್ಳುತ್ತವೆ. ಏಕೆಂದರೆ ಸಮಾಜದಲ್ಲಿಯೇ ಒಂದು Marginalized ಸಮುದಾಯವನ್ನು ಸೃಷ್ಟಿಸುವ ಕರ್ಮಠ ವ್ಯವಸ್ಥೆ ತನ್ನದೇ ಹಿತಾಸಕ್ತಿಗಳನ್ನು ಮುಖ್ಯವಾಗಿಸಿಕೊಂಡಿರುತ್ತದೆ. ಅಂದರೆ ಸಮುದಾಯವೊಂದನ್ನು ಸಮಾಜದ ಒಟ್ಟು ಮುಖ್ಯವಾಹಿನಿಯಿಂದ ವಂಚಿಸುವುದು ಈ ವ್ಯವಸ್ಥೆಯ ಹುನ್ನಾರವಾಗಿರುತ್ತದೆ. ಇಂತಹ ವ್ಯವಸ್ಥೆಯಲ್ಲಿ, Marginalized ಸಮುದಾಯಗಳನ್ನು ಮರುಸಮಾಜೀಕರಣಕ್ಕೆ ಒಳಪಡಿಸಬೇಕಿದೆ. ಅಂದರೆ ಸಾಮಾಜಿಕ ಅಧಿಕಾರಗಳನ್ನು

ತಂದುಕೊಡುವ, ಉತ್ಪಾದನಾ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಬೇಕಿದೆ. ವರ್ತಮಾನದಲ್ಲಿನ ದುಡಿವ ಕ್ಷೇತ್ರಗಳಲ್ಲಿ ಮಹಿಳೆಗೆ ಈ ಅವಕಾಶಗಳು ಮುಕ್ತವಾಗಿ ದೊರೆತಲ್ಲಿ, ಅವಳು ತನ್ನ ಆತ್ಮದ್ವೇಷವನ್ನು ಮೀರಿ ಸಹಜ ಬದುಕನ್ನು ಬದುಕಬಲ್ಲಳು.

❑

ಅನುಬಂಧ

ಪರಮಾರ್ಶನ ಗ್ರಂಥಗಳು

೧. ಡಾ. ಎಚ್.ಎಸ್. ಶ್ರೀಮತಿ, ಚಹರೆ, ಪ್ರಕಾಶಕರು ಇಳಾ ಪ್ರಕಾಶನ, ಬೆಂಗಳೂರು

೨. ಡಾ. ಸಿ.ಆರ್. ಚಂದ್ರಶೇಖರ್, ಹದಿಹರೆಯ ಮಾನಸಿಕ ಸಮಸ್ಯೆಗಳು, ಏಳುಸೀರು ಮುದ್ರಣ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೧

೩. ಡಾ. ಎಚ್.ಎಸ್. ಶ್ರೀಮತಿ, ಗರ್ಭಾಶಯ ಮಹಿಳೆಯ ಶಕ್ತಿಕೇಂದ್ರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ, ೨೦೦೨

೪. ಚ.ನ. ಶಂಕರ್‌ರಾವ್, ಸಮಾಜಶಾಸ್ತ್ರ ಸಾಮಾಜಿಕ ಪ್ರಕ್ರಿಯೆ ಮತ್ತು ಸಾಮಾಜಿಕ ಪರಿವರ್ತನೆ. ಜಯಭಾರತಿ. ಪ್ರಕಾಶನ ಮಂಗಳೂರು, ೧೯೮೭

೫. ಡಾ. ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨

೬. ಕೆ. ಭೈರಪ್ಪ, ಸಮಾಜ ಶಾಸ್ತ್ರ ಭಾಗ ೧ ಪರಿಚಯ, ೧೮ ಪ್ರಕಾಶ ಸಾಹಿತ್ಯ, ಬೆಂಗಳೂರು.

೭. ಡಾ. ಲೀಲಾವತಿ ದೇವದಾಸ, ಹೆಣ್ಣೆ ನಿನ್ನ ಆರೋಗ್ಯ ಕಾಪಾಡಿಕೋ, ಕನ್ನಡ ವೈದ್ಯ ಸಾಹಿತ್ಯ, ಪರಿಷತ್, ಬೆಂಗಳೂರು, ೧೯೯೯

೮. ಎ.ಎಸ್. ಧರಣೇಂದ್ರಯ್ಯ, ವಿಕಾಸ ಮನೋವಿಜ್ಞಾನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು ೧೯೭೧

೯. ಟಿ.ಆರ್. ಚಂದ್ರಶೇಖರ, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೦. ಡಾ. ಆರ್. ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨

೧೧. ಮಹೇಶ್ ಎಚ್.ಲೋಬೋ, ಸಂಗ್ರಹ ಮತ್ತು ಸಂಕಲನ, ಲಿಂಗ ಸೂಕ್ಷ್ಮತೆ ಮತ್ತು ನ್ಯಾಯ ತರಬೇತಿದಾರರ ಕೈಪಿಡಿ, ಎಸ್ ಪ್ರಿಂಟರ್ಸ್, ಬೆಂಗಳೂರು

೧೨. ಡಾ. ಎಚ್.ಎಸ್. ಶ್ರೀಮತಿ, ಆಧುನಿಕ ಭಾರತದಲ್ಲಿ ಮಹಿಳೆ, ಮೂಲ ಜೇರಾಲ್ಡಿನ್, ಪೂರ್ಬ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೩. ಡಾ. ಎಂ. ಉಷಾ, ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೪. ಎಚ್.ಎಸ್. ನೆಗಳೂರು, ಶೀಲ ಸೌಷ್ಠವ, ಪ್ರಕಾಶಕರು, ಸಮಾಜ ಪುಸ್ತಕಾಲಾಯ, ಧಾರವಾಡ, ೧೯೮೮

೧೫. ಡಾ. ಶೈಲಜಾ ಹಿರೇಮಠ, ಪಾತರದವರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಅಧಿಕ ಸಾಪ್ತಾಹಿಕ ಪತ್ರಿಕೆಗಳು

ಕರ್ಮವೀರ	ನವೆಂಬರ್	೪, ೨೦೦೧
ಕರ್ಮವೀರ	ಸೆಪ್ಟೆಂಬರ್	೧೬, ೨೦೦೧
ಬಾಳಿನ ಸಂಗಾತಿ	ನವೆಂಬರ್	೧೯೯೮
ಪ್ರಿಯಾಂಕ	ಅಕ್ಟೋಬರ್	೧೯೯೯

ದಿನಪತ್ರಿಕೆಗಳು

೧. ವಿಜಯಕರ್ನಾಟಕ

೨. ಪ್ರಜಾವಾಣಿ

೩. ಸಂಯುಕ್ತ ಕರ್ನಾಟಕ

೪. ಉದಯವಾಣಿ

❑

ಲಿಂಗ ತಾರತಮ್ಯ ವ್ಯವಸ್ಥೆಯಲ್ಲಿ ಸಮಾಜೀಕರಣದ ಪ್ರಕ್ರಿಯೆ ಮತ್ತು ಹದಿಹರೆಯದ ವಯಸ್ಸಿನ ಮೇಲೆ ಅದರ ಪರಿಣಾಮಗಳು

ಪ್ರಶ್ನಾವಳಿ

ವೈಯಕ್ತಿಕ ಮಾಹಿತಿ

೧. ಹೆಸರು ೨. ಲಿಂಗ ೩ ವಯಸ್ಸು

೪. ಮಾತೃಭಾಷೆ ೫. ಧರ್ಮ/ಜಾತಿ ೬. ವಿಳಾಸ

ಕುಟುಂಬ ಸದಸ್ಯರು

ಕ್ರ.ಸ.	ವಿವರ	ವಯಸ್ಸು	ಶಿಕ್ಷಣ	ಉದ್ಯೋಗ	ಆದಾಯ	ಇತರೆ
೧.						
೨.						
೩.						
೪.						
೫.						

೧. ಶಿಕ್ಷಣ

ಅ) ಕಲಾ ☐ ಬ) ವಾಣಿಜ್ಯ ☐ ಕ) ವಿಜ್ಞಾನ ☐

೨. ನೀವು ಕಾಲೇಜು ಸೇರುವುದರ ಬಗ್ಗೆ ನಿಮ್ಮ ಪೋಷಕರ ಅಭಿಪ್ರಾಯ.

ಅ) ನಿರಾಕರಣೆ ☐ ಬ) ಉತ್ಸಾಹ ☐ ಕ) ಅನಿವಾರ್ಯ ☐

೩. ಇಡೀ ದಿನ ಚಟುವಟಿಕೆಯ ಬಗ್ಗೆ (ತಂದೆ-ತಾಯಿ) ಅವರ ಅಭಿಪ್ರಾಯ ಏನಿರುತ್ತದೆ.

ಅ) ಸಹಜ ☐ ಬ) ಆತಂಕ ☐ ಕ) ಅನಾಸಕ್ತ ☐ ಡ) ನಿರ್ಲಿಪ್ತ ☐

೪. ಕಾಲೇಜುಗಳಲ್ಲಿ ಹೆಣ್ಣು ಗಂಡು ಮಕ್ಕಳು ಪ್ರತ್ಯೇಕವಾಗಿ ಕೂಡುವುದರ ಬಗ್ಗೆ ನಿಮ್ಮ ಅಭಿಪ್ರಾಯ.

ಅ) ಸರಿ ☐ ಬ) ತಪ್ಪು ☐

ಯಾಕೆ? ವಿವರಿಸಿ ---

೫. ಈ ಮೇಲಿನ ವಿಚಾರದಲ್ಲಿ ನಿಮ್ಮ ಶಿಕ್ಷಣದ ಭಾವನೆ ಏನು?

ವಿವರಿಸಿ --

೬. ನೀವು ಹುಡುಗ/ಹುಡುಗಿಯರ ಜೊತೆಯಲ್ಲಿ ಶೈಕ್ಷಣಿಕ ಚರ್ಚೆಯಲ್ಲಿ ತೊಡಗುವಿರಾ.

ಅ) ಹೌದು ☐ ಬ) ಇಲ್ಲ ☐

೭. ನೀವು ಹುಡುಗ ☐ ಹುಡುಗಿಯ ☐ ಜೊತೆಯಲ್ಲಿ ಕ್ಯಾಂಟಿನಲ್ಲಿ ಸೇರುತ್ತಿರಾ.

ಅ) ಹೌದು ☐ ಬ) ಇಲ್ಲ ☐

೮. ಗೆಳೆಯ ☐ /ಗೆಳತಿಯನ್ನು ☐ ಮನೆಗೆ ಆಹ್ವಾನಿಸುತ್ತೀರಾ?

ಅ) ಹೌದು ☐ ಬ) ಇಲ್ಲ ☐

ಅ) ಹೌದು ಅಂದರೆ ಯಾಕೆ? --

ಬ) ಇಲ್ಲ ಅಂದರೆ ಯಾಕೆ? --

೯. ರಾಜು ಮತ್ತು ಕಮಲ ಇಬ್ಬರು ಶಾಲೆಯಿಂದ ಮನೆಗೆ ಹಿಂತಿರುಗಿದರು. ರಾಜನು ಹಾಲು ಕುಡಿದು ಆಟ ಆಡಲು ಮೈದಾನಕ್ಕೆ ತೆರಳಿದನು. ಕಮಲಳು ಹಾಲು ಕುಡಿದು ತಾಯಿಯ ಅಡಿಗೆ ಕೆಲಸದಲ್ಲಿ ನೆರವಾದಳು. ನಂತರ ಇಬ್ಬರು ಓದಲು ಕುಳಿತರು. ಈ ಪಾಠದ ಬಗ್ಗೆ ಅನಿಸಿಕೆ ಏನು?

----

೧೦. ನಿಮ್ಮ ಕಾಲೇಜಿನಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರೋತ್ಸಾಹಿಸುವ ಆಟಗಳು ಯಾವುವು?

ಅ) ಹೆಣ್ಣು ಮಕ್ಕಳ ಆಟ	ಬ) ಗಂಡು ಮಕ್ಕಳ ಆಟ	ಕ) ಎರಡು ಪ್ರೋತ್ಸಾಹಿಸುತ್ತಾರೆ
೧.	೧.	೧.
೨.	೨.	೨.
೩.	೩.	೩.

೧೧. ನಿಮ್ಮ ಹವ್ಯಾಸಗಳೇನು? ಅವನ್ನು ಯಾಕೆ ಆರಿಸಿಕೊಂಡಿರಿ.

೧.

೨.

ವಿವರ --

----

೧೨. ನಿಮ್ಮ ಹವ್ಯಾಸದ ಬಗ್ಗೆ ಕುಟುಂಬದ ಪ್ರತ್ರಿಕೆಯೆ ಏನು?

ಅ) ಉತ್ತಮ ಬಂದಾಗ --

ಬ) ಕಳಪೆ ಬಂದಾಗ--

೧೩. ನೀವು ಪಡೆಯುತ್ತಿರುವ ಶಿಕ್ಷಣದ ಬಗ್ಗೆ ನಿಮ್ಮ ಅಭಿಪ್ರಾಯ

ವಿವರ ---

----

೧೫. ಮನೆಯಲ್ಲಿ ಎಷ್ಟು ಗಂಟೆಗಳ ಕಾಲ ಮನೆ ಕೆಲಸ ಮಾಡುತ್ತೀರಾ?

ಆ ಕೆಲಸದ ಸ್ವರೂಪವೇನು ---

----

೧೬. ಕುಟುಂಬದ ಊಟದ ಸಮಯದಲ್ಲಿ ಒಟ್ಟಿಗೆ ಸೇರಿ ಊಟ ಮಾಡುತ್ತೀರಾ ಅಥವಾ ಬೇರೆಯಾಗಿ

ಅ) ಒಟ್ಟಿಗೆ ಸೇರಿ ☐ ಬ) ಬೇರೆ ಬೇರೆಯಾಗಿ ☐

೧೭. ಹಬ್ಬ-ಹರಿದಿನಗಳಲ್ಲಿ ನಿಮ್ಮ ಪಾಲ್ಗೊಳ್ಳುವಿಕೆ ಏನು?

ವಿವರ ---

----

೧೮. ನಿಮ್ಮಗೆ ಇಷ್ಟವಾದ ಬಟ್ಟೆಗಳನ್ನು ತೆಗೆದುಕೊಳ್ಳಲು ಮನೆಯವರ ಆಸ್ಪದ ನೀಡುತ್ತಾರೆಯೆ?

ಅ) ಹೌದು ☐ ಬ) ಇಲ್ಲ ☐

೧೯. ಅಡಿಗೆ ಮಾಡುವುದು ತಿಳಿದಿದೆಯೆ

ಅ) ಹೌದು ☐ ಬ) ಇಲ್ಲ ☐

೨೦. ಮನೆಯವರು ನಿಮ್ಮ ವೈಯಕ್ತಿಕ ಖರ್ಚಿಗೆ ಹಣದ ಅಗತ್ಯ ಇದೆ ಏನಿಸುತ್ತದೆಯೇ?

ಅದು ಯಾಕೆ? ---

----

೨೧. ನಮ್ಮ ಸಮಾಜದಲ್ಲಿ ಗಂಡು-ಹೆಣ್ಣು ಮಕ್ಕಳ ನಡುವೆ ಭೇದ ಭಾವ ಮಾಡುತ್ತಾರೆ ಎಂಬ ಅನುಭವ ನಿಮಗಿದೆಯೇನು?

ಅ) ಹೌದು ☐ ಬ) ಇಲ್ಲ ☐

೨೨. ಅನುಭವವಾಗಿದ್ದರೆ ಅದನ್ನು ಸಂಕ್ಷಿಪ್ತವಾಗಿ ವಿವರಿಸಿ.--------------------------------

----

ಈ ಮೇಲಿನ ಪ್ರಶ್ನಾವಳಿಗಳು ಕೇವಲ ಸಂಶೋಧನಾ ಅಧ್ಯಯನ ಸಲುವಾಗಿ ಅಳವಡಿಸಲಾಗಿದ್ದು, ಯಾರ ವೈಯಕ್ತಿಕ ಮಾಹಿತಿಯು, ಹೆಸರು, ವಿಳಾಸವನ್ನು ಬಹಿರಂಗಗೊಳಿಸುವುದಿಲ್ಲ.

❑